# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 5 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 259 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



# ಕೊಡಗಲ್ಲಿ ಮಿನಿ ವಿಮಾನ ನಿಲ್ದಾಣಕ್ಕೆ ಅಗತ್ಯ ಜಾಗ

**● ಕಂದಾಯ ಸಚಿವ ಕೃಷ್ಣಭೈರೇಗೌಡ ಭರವಸೆ ● ಜಿಲ್ಲೆಯ ಹೊಸ ತಾಲೂಕುಗಳಲ್ಲಿ ಮಿನಿ ವಿಧಾನಸೌಧ, ಆಡಳಿತ ಭವನ ನಿರ್ಮಾಣಕ್ಕೆ ಅನುದಾನ–ಅನುಮತಿ**

**ಬೆಂಗಳೂರು, ಜ.4– ಕೊಡಗಿನಲ್ಲಿ ಮಿನಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅಗತ್ಯವಿರುವ ಜಾಗವನ್ನು ಕಂದಾಯ ಇಲಾಖೆಯಿಂದ ಜಿಲ್ಲಾಡಳಿತಕ್ಕೆ ವರ್ಗಾವಣೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಕಂದಾಯ ಸಚಿವ ಕೃಷ್ಣಭೈರೇಗೌಡ ಭರವಸೆ ನೀಡಿದ್ದಾರೆ.**

ವಿಕಾಸಸೌಧದಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸಲಾಗಿದೆ. ಕೆಲವು ದಿನಗಳ ಹಿಂದೆ ಕೊಡಗು ಜಿಲ್ಲೆಯಲ್ಲಿ ನಡೆಸಿದ ಕೆಡಿಪಿ ಸಭೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲಾಗಿತ್ತು. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಗುರುವಾರ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರೊಂದಿಗೆ ನಡೆಸಿದ ಸಭೆಯಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ತಾಲೂಕುಗಳಲ್ಲಿ ಮಿನಿ ವಿಧಾನಸೌಧ ಹಾಗೂ ಆಡಳಿತ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ಹಾಗೂ ಅನುಮತಿಯನ್ನು ದೊರಕಿಸಿಕೊಡುವ ಬಗ್ಗೆ ಚರ್ಚಿಸಲಾಯಿತು. ಅಲ್ಲದೇ, ಕೊಡಗು ಜಿಲ್ಲೆಯಲ್ಲಿ ಮಿನಿ ವಿಮಾನ ನಿಲ್ದಾಣ (ಏರ್ ಸ್ಟ್ರಿಪ್) ನಿರ್ಮಾಣಕ್ಕೆ ಅಗತ್ಯವಿರುವ ಜಾಗವನ್ನು ಜಿಲ್ಲಾಡಳಿತಕ್ಕೆ ● 6ನೇ ಪುಟಕ್ಕೆ



ಕಂದಾಯ ಸಚಿವ ಕೃಷ್ಣಭೈರೇಗೌಡ ನೇತೃತ್ವದಲ್ಲಿ ಕೊಡಗಿನ ವಿಚಾರ ಸಂಬಂಧ ಸಭೆ ನಡೆಯಿತು. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜ್, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರಗೌಡ, ಎನ್.ಹೆಚ್.ಕೋನರೆಡ್ಡಿ ಅವರಿದ್ದರು.

## ಶಾಲಾ ವಾಹನ ಸಿಬ್ಬಂದಿ ಪರಿಶೀಲನೆಗೆ ಸೂಚನೆ

**ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ**

ಮೈಸೂರು,ಜ.4(ಪಿಎಂ)– ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಾಲಾ ವಾಹನಗಳಲ್ಲಿ ಕಾರ್ಯನಿರ್ವಹಿಸುವ ಚಾಲಕರು ಮತ್ತು ಸಹಾಯಕರನ್ನು ಪೊಲೀಸ್ ಪರಿಶೀಲನೆ (ವೆರಿಫಿಕೇಷನ್) ಮಾಡಿಸಲು ಎಲ್ಲಾ ಶಾಲಾ ಆಡಳಿತ ಮಂಡಳಿಗಳು ಕ್ರಮ ವಹಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989 ನಿಯಮದಂತೆ 'ಸ್ಕೂಲ್ ಕ್ಯಾಬ್ ಸೇಫ್ಟಿ ಕಮಿಟಿ' ರಚಿಸಲು ಈಗಾಗಲೇ ಸೂಚನೆ ನೀಡಲಾಗಿತ್ತು ಶಾಲಾ ವಾಹನಗಳಲ್ಲಿ ಮಕ್ಕಳನ್ನು ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ಕರೆತರುವ ಸಂದರ್ಭದಲ್ಲಿ ಖಾಸಗಿ ಶಾಲಾ ವಾಹನಗಳಲ್ಲಿ ಚಾಲಕರಿಂದ ಮತ್ತು ವಾಹನಗಳ ಸಹಾಯಕರಿಂದ ಮಕ್ಕಳ ಮೇಲೆ ದೌರ್ಜನ್ಯ ನಡೆದಿರುವ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಬಸ್, ವ್ಯಾನ್, ಆಟೋ ರಿಕ್ಷಾ ಸೇರಿದಂತೆ ಇತರೆ ಶಾಲಾ ವಾಹನಗಳ ಚಾಲಕರು ಮತ್ತು ಸಹಾಯಕರ ಮಾನಸಿಕ ಸ್ಥಿತಿ ಸಂಬಂಧ ಪೊಲೀಸ್ ಠಾಣೆಗಳಿಂದ ● 6ನೇ ಪುಟಕ್ಕೆ


## ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ: ಕೊಡಗು, ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರದಲ್ಲಿ ಸಾಧಾರಣ ಮಳೆ



ಮೈಸೂರು, ಜ.4(ಎಸ್‌ಬಿಡಿ)– ಅರಬ್ಬಿ ಸಮುದ್ರದಲ್ಲಿನ ವಾಯುಭಾರ ಕುಸಿತದ ಎಫೆಕ್ಟ್ ಮೈಸೂರಿಗೂ ತಟ್ಟಿದ್ದು, ಗುರುವಾರ ಸಂಜೆ ಸಾಧಾರಣ ಮಳೆ ಸುರಿಯಿತು. ಮೈಸೂರು, ಕೊಡಗು, ಮಂಡ್ಯ, ಚಾ.ನಗರ, ಹಾಸನ ಜಿಲ್ಲೆಗಳಲ್ಲಿ ಗುರುವಾರ ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗಿದೆ. ಮೈಸೂರು ಅಕ್ಷರಶಃ ಮಲೆನಾಡಿನಂತಾಗಿತ್ತು ಸೂರ್ಯ ದರ್ಶನವೇ ಇಲ್ಲದೆ ಮಬ್ಬು ಆವರಿಸಿತ್ತು. ಮಧ್ಯಾಹ್ನದ ವೇಳೆಗೆ ಆಗಾಗ್ಗೆ ತುಂತುರು ಹನಿ ಬೀಳಲಾರಂಭಿಸಿತು. ಬಳಿಕ ಮತ್ತಷ್ಟು ಕಾರ್ಮೋಡ ಆವರಿಸಿ, ಸಂಜೆ 5.30ರ ವೇಳೆಗೆ ಮಳೆ ಬಿರುಸುಗೊಂಡಿತು.

ಗಂಟೆಗಳ ಕಾಲ ಜಿಟಿಜಿಟಿ ಮಳೆಯಾಯಿತು. ಪರಿಣಾಮ ಮನೆಗೆ ವಾಪಸ್ಸಾಗುತ್ತಿದ್ದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ಸ್ವಲ್ಪ ತೊಂದರೆಯಾಯಿತು. ● 6ನೇ ಪುಟಕ್ಕೆ

## ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ನಿಧನ



ಮೈಸೂರು, ಜ.4– ಮೂರೂವರೆ ದಶಕಗಳ ಕಾಲ ಭಾರತೀಯ ಸೇನೆಯ ವಿವಿಧ ಹುದ್ದೆಗಳಲ್ಲಿದ್ದು, ಹಲವು ಯುದ್ಧ ಹಾಗೂ ಸೇನಾ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಿದ್ದ ನಿವೃತ್ತ ಮೇಜರ್ ಜನರಲ್ ನಿವೃತ್ತ ಕೋದಂಡ ಕೆ.ಕರುಂಬಯ್ಯ (87) ಅವರು ಗುರುವಾರ ಬೆಳಗ್ಗೆ 7.45ಕ್ಕೆ ಮೈಸೂರಿನ ಕೆ.ಹೆಮ್ಮನಹಳ್ಳಿ ಬಳಿಯ ಅವರ ತೋಟದ ಮನೆಯಲ್ಲಿ ನಿಧನರಾದರು. ಕುಟುಂಬ ವಲಯದಲ್ಲಿ ಕೇಶು ಎಂದೇ ಕರೆಯಲ್ಪಡುತ್ತಿದ್ದ ಅವರು ಪತ್ನಿ ದೇಚು ಕರುಂಬಯ್ಯ, ಪುತ್ರ ಸಿ.ಕೆ.ಸೋಮಣ್ಣ, ಪುತ್ರಿ ಶಬರಿ, ಸೊಸೆ ನವ್ಯ ಸೋಮಣ್ಣ, ಮೊಮ್ಮಕ್ಕಳಾದ ಹರಿ ಕರುಂಬಯ್ಯ, ಅವಿಕಾ ಕೋದಂಡ ಹಾಗೂ ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ● 6ನೇ ಪುಟಕ್ಕೆ

ಶ್ರದ್ಧಾಂಜಲಿ [ಪುಟ–4]

# ಮೂರು ಬಾರಿ ಠಾಣೆಗೆ ಕರೆತಂದರೂ ಹಾಲಿ ಪ್ರಕರಣ ಸಂಬಂಧ ಕ್ರಮ ಕೈಗೊಳ್ಳದೇ ಈಗ ದಿಢೀರ್ ಶ್ರೀಕಾಂತ್ ಪೂಜಾರಿ ಬಂಧಿಸಿದ ಮರ್ಮವೇನು?

**● ಪಬ್ಲಿಕ್ ಟಿವಿ ರಂಗನಾಥರ 'ದಾಖಲೆ' ಆಧಾರಿತ ಪ್ರಶ್ನೆ ● ಶ್ರೀಕಾಂತ್ ಪೂಜಾರಿ ಮೇಲೆ 16 ಕೇಸ್‌ಗಳಿವೆ ಎಂದು ಮುಖ್ಯಮಂತ್ರಿಗಳು ಪ್ರಕಟಣೆ ಹೊರಡಿಸಿರುವುದರಲ್ಲಿ 'ಮಿಸ್ ಗೈಡ್' ಶಂಕೆ**

ಮೈಸೂರು, ಜ.4– ಮೂರು ದಶಕಗಳ ಹಿಂದಿನ ಪ್ರಕರಣ ಸಂಬಂಧ ಹುಬ್ಬಳ್ಳಿಯಲ್ಲಿ ಕರಸೇವಕ ಶ್ರೀಕಾಂತ್ ಪೂಜಾರಿ ಬಂಧನ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದ್ದು, ಇವರ ವಿರುದ್ಧದ ಒಂದು ಕೇಸ್ ಮಾತ್ರ ಸಕ್ರಿಯವಾಗಿರುವುದು ಬೆಳಕಿಗೆ ಬಂದಿದೆ ಶ್ರೀಕಾಂತ್ ಪೂಜಾರಿ ಪ್ರಕರಣದ ಆರೋಪಿಯಾಗಿದ್ದರೂ, ಇನ್ನಿತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರನ್ನು ಪೊಲೀಸ್ ಠಾಣೆಗೆ ಕರೆತಂದಾಗ ಬಂಧಿಸದೇ ಬಿಟ್ಟಿದ್ದು ಏಕೆ?. ಈಗ ತರಾತುರಿಯಲ್ಲಿ ಬಂಧಿಸಿದ್ದರ ಹಿನ್ನೆಲೆ ಏನು ಎಂಬುದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಈ ಬಗ್ಗೆ ಪಬ್ಲಿಕ್ ಟಿವಿಯ ಬಿಗ್ ಬುಲೆಟಿನ್‌ನಲ್ಲಿ ರಂಗನಾಥ್ ಅವರು ದಾಖಲೆ ಸಹಿತ ವಿವರಣೆ ನೀಡಿದರಲ್ಲದೆ, ಸುಳ್ಳು ಮಾಹಿತಿ ನೀಡಿ ಸರ್ಕಾರದ ದಿಕ್ಕು ತಪ್ಪಿಸುವುದರ ಜೊತೆಗೆ ರಾಜ್ಯದಲ್ಲಿ ಕ್ಷೋಭೆ ಸೃಷ್ಟಿಸಿದ ಹುಬ್ಬಳ್ಳಿ ಪೊಲೀಸ್ ಆಯುಕ್ತರ ವಿರುದ್ಧ ಶಿಸ್ತು ಕ್ರಮವಾಗಬೇಕು ಎಂದು ಒತ್ತಾಯಿಸಿದ್ದಾರೆ. ಶ್ರೀಕಾಂತ್ ಪೂಜಾರಿ ಬಂಧನ ವಿಚಾರವಾಗಿ ಟ್ವೀಟ್ ಮಾಡಿದ ಮುಖ್ಯಮಂತ್ರಿಗಳು, 16 ಕೇಸ್‌ಗಳಿರುವ ಆರೋಪಿ ಎಂದು ಬರೆದುಕೊಂಡಿದ್ದರು. ಆದರೆ ಲಭ್ಯವಾಗಿರುವ ದಾಖಲೆ ಪ್ರಕಾರ ಶ್ರೀಕಾಂತ್ ಪೂಜಾರಿ ವಿರುದ್ಧ 16 ಕೇಸೇನೋ ಇತ್ತು. ಆದರೆ ಈಗ ಸಕ್ರಿಯವಾಗಿರುವುದು ಒಂದೇ ಕೇಸ್. ಅದುವೇ 1992ರ ರಾಮ ಜನ್ಮ ಭೂಮಿ ವಿಚಾರದ ಗಲಾಟೆ ಪ್ರಕರಣ. ಆದರೆ ಮುಖ್ಯಮಂತ್ರಿಗಳು 16 ಕೇಸ್‌ಗಳಿವೆ ಎಂದು ಟ್ವೀಟ್ ಮಾಡಿದ್ದಾರೆ. ಇವರಿಗೆ ಪೊಲೀಸ್ ಆಯುಕ್ತರು ತಪ್ಪು ಮಾಹಿತಿ ನೀಡಿದ್ದಾರೆ. ಶ್ರೀಕಾಂತ್ ವಿರುದ್ಧದ 4 ದೊಂಬಿ ಕೇಸ್‌ಗಳಲ್ಲಿ 2 ಖುಲಾಸೆ, ಒಂದು ರಾಜಿಯಲ್ಲಿ ಮುಕ್ತಾಯವಾಗಿದ್ದು 1992ರ ಒಂದು ಪ್ರಕರಣ ಸಕ್ರಿಯವಾಗಿದೆ. ಅಬಕಾರಿ ಸಂಬಂಧಿತ 5 ಕೇಸ್‌ಗಳೂ ಖುಲಾಸೆಯಾಗಿವೆ. 4 ಮುಂಜಾಗ್ರತಾ ಕೇಸ್‌ಗಳಲ್ಲಿ 3ರಲ್ಲಿ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡಿದ್ದು 1 ಖುಲಾಸೆಯಾಗಿದೆ. 3 ಮಟ್ಕಾ ಕೇಸ್‌ಗಳು ದಂಡ ವಿಧಿಸಿ ಖುಲಾಸೆಯಾಗಿವೆ. ಈಗ ಬಂಧಿಸಿದ್ದು, 1992ರಲ್ಲಿ ನಾಪತ್ತೆಯಾಗಿರುವ, ಚಾರ್ಜ್‌ಶೀಟ್ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ. ಅಲ್ಲದೆ ಈಗಾಗಲೇ ಮೂರು ಬಾರಿ ನಾಪತ್ತೆಯಾಗಿದ್ದು, ಈಗ ಜಾಮೀನು ನೀಡಿದರೆ ಮತ್ತೆ ತಲೆಮರೆಸಿಕೊಳ್ಳಬಹುದು ಎಂದು ನ್ಯಾಯಾಲಯಕ್ಕೂ ತಿಳಿಸಿದ್ದಾರೆ. ಹಾಗಾದರೆ ಪೊಲೀಸ್ ದಾಖಲೆಗಳ ಪ್ರಕಾರ 2004, 2009 ಹಾಗೂ 2018ರಲ್ಲಿ ಶ್ರೀಕಾಂತ್ ಪೂಜಾರಿಯನ್ನು ಠಾಣೆಗೆ ಕರೆತಂದು ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ. ಆ ವೇಳೆ ಏಕೆ ಸದರಿ ಪ್ರಕರಣ ಸಂಬಂಧ ಬಂಧಿಸಲಿಲ್ಲ. ಅಲ್ಲದೆ ನ್ಯಾಯಾಲಯದ ವಿಚಾರಣೆಗೂ ತಪ್ಪದೇ ಹಾಜರಾಗಿದ್ದಾರೆ. ಹೀಗಿರುವಾಗ 1992ರ ಪ್ರಕರಣದಲ್ಲಿ ಬಂಧಿಸಿ, ತಲೆ ಮರೆಸಿಕೊಳ್ಳಬಹುದು ಎಂದು ಹೇಳುತ್ತಿರುವುದರಲ್ಲಿ ಅರ್ಥವಿದೆಯೇ? ಎಂದು ಪ್ರಶ್ನಿಸಿದ್ದಾರೆ. ಈ ವಿಚಾರವಾಗಿ ಪೊಲೀಸರು ಸುಳ್ಳು ಹೇಳಿ ● 6ನೇ ಪುಟಕ್ಕೆ



ಶ್ರೀಕಾಂತ್ ಪೂಜಾರಿ

# ಮಾಜಿ ಅಧ್ಯಕ್ಷ ನಾಗರಾಜಪ್ಪರಿಂದ ಮೈಷುಗರ್‌ಗೆ 121 ಕೋಟಿ ನಷ್ಟ

**ನಷ್ಟ ವಸೂಲಿಗೆ ಕೋರ್ಟ್‌ನಲ್ಲಿ ಸಿವಿಲ್ ದಾವೆ ಹೂಡಲು ನಿರ್ಧಾರ**

ಮಂಡ್ಯ, ಜ.4–ದಿ ಮೈಸೂರು ಷುಗರ್ ಕಂಪನಿಯ (ಮೈಷುಗರ್) ಹಿಂದಿನ ಅಧ್ಯಕ್ಷ ನಾಗರಾಜಪ್ಪ ಅವರು ಕಂಪನಿಗೆ 121 ಕೋಟಿ ರೂ. ನಷ್ಟ ಉಂಟು ಮಾಡಿರುವುದು ಉಪ ಲೋಕಾಯುಕ್ತರ ವರದಿಯಲ್ಲಿ ದೃಢಪಟ್ಟಿದ್ದು, ಈ ಮೊತ್ತದ ವಸೂಲಿಗಾಗಿ ಅವರ ವಿರುದ್ಧ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅನುಮೋದನೆ ನೀಡಿದೆ ಎಂದು ಮೈಷುಗರ್ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್.ರವಿಕುಮಾರ್ ಅವರು ಮಂಡ್ಯ ಜಿಲ್ಲಾಧಿಕಾರಿಗಳಿಗೆ ರವಾನಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.




ನಾಗರಾಜಪ್ಪ

ನಾಗರಾಜಪ್ಪ ಅವರಿಂದ ಮೊತ್ತ ವಸೂಲಿ ಮಾಡಲು ಅನುವಾಗುವಂತೆ ನಾಗರಾಜಪ್ಪ ಹೆಸರಿನಲ್ಲಿ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರ ಹೆಸರಿನಲ್ಲಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಇರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿಯನ್ನು ಕ್ರೋಢೀಕರಿಸಬೇಕಾಗಿರುವುದರಿಂದ ಇವರಿಗೆ ಸಂಬಂಧಿಸಿದ ಕೃಷಿ ಜಮೀನು, ಕೃಷಿಯೇತರ ಆಸ್ತಿ, ನಿವೇಶನ, ಮನೆ, ಕಟ್ಟಡಗಳು, ವಾಣಿಜ್ಯ ಸಂಕೀರ್ಣ, ವಾಹನಗಳು, ಬ್ಯಾಂಕ್‌ನಲ್ಲಿರುವ ನಗದು ಠೇವಣಿಗಳು, ಷೇರು ಪತ್ರಗಳು, ಡಿಬೆಂಚರ್‌ಗಳು, ಹಕ್ಕುಪತ್ರಗಳು ಇತ್ಯಾದಿಗಳ ಮಾಹಿತಿಗಳನ್ನು ದಾಖಲೆಗಳೊಂದಿಗೆ ನೀಡುವಂತೆ ಜಿಲ್ಲಾಧಿಕಾರಿಗಳನ್ನು ಅವರು ಕೋರಿದ್ದಾರೆ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ 2008–09ರಿಂದ 2011–12ರ ಅವಧಿಯಲ್ಲಿ ಅವರ ಆಪ್ತರಾದ ನಾಗರಾಜಪ್ಪ ಅವರನ್ನು ಮೈಷುಗರ್ ಕಂಪನಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಮೈಷುಗರ್ ಅಭಿವೃದ್ಧಿಗಾಗಿ ಯಡಿಯೂರಪ್ಪನವರು 150 ● 6ನೇ ಪುಟಕ್ಕೆ

# ನಂಜನಗೂಡು ಬಂದ್ ಸಂಪೂರ್ಣ ಯಶಸ್ವಿ

**● ಸ್ವಯಂ ಪ್ರೇರಿತವಾಗಿ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿ ಬೆಂಬಲ ವ್ಯಕ್ತಪಡಿಸಿದ ವರ್ತಕರು, ಉದ್ಯಮಿಗಳು ● ಮಾಜಿ ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ಶ್ರೀಕಂಠೇಶ್ವರ ಭಕ್ತರ ಬೃಹತ್ ರ್‍ಯಾಲಿ**



ನಂಜನಗೂಡು, ಜ.4– ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಅಂಧಕಾಸುರನ ಸಂಹಾರ ಕಾರ್ಯಕ್ರಮದ ವೇಳೆ ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ, ದೇವರ ಉತ್ಸವಮೂರ್ತಿಗೆ ಎಂಜಲು ನೀರು ಎರಚಿ ಅಪಮಾನ ಮಾಡಿರುವ ಕಿಡಿಗೇಡಿಗಳನ್ನು ಬಂಧಿಸಿ, ಶಿಕ್ಷೆಗೆ ಗುರಿಪಡಿಸುವಂತೆ ಒತ್ತಾಯಿಸಿ ಶ್ರೀಕಂಠೇಶ್ವರನ ಭಕ್ತರು ಕರೆದಿದ್ದ ನಂಜನಗೂಡು ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ಬೆಳಗ್ಗೆ 6 ಗಂಟೆಯಿಂದಲೇ ವರ್ತಕರು, ಬೀದಿಬದಿ ವ್ಯಾಪಾರಸ್ಥರು, ಹೋಟೆಲ್ ಮಾಲೀಕರು ಸ್ವಯಂಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳ ಬಾಗಿಲುಗಳನ್ನು ಮುಚ್ಚಿ ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದರಿಂದಾಗಿ ನಂಜನಗೂಡು ಸ್ತಬ್ಧಗೊಂಡಿತ್ತು. ತರಕಾರಿ ಮಾರುಕಟ್ಟೆಯ ವರ್ತಕರೂ ಸಹ ವ್ಯಾಪಾರ ವಹಿವಾಟು ನಡೆಸದೇ ಬಂದ್‌ಗೆ ಸಹಮತ ವ್ಯಕ್ತಪಡಿಸಿದರು. ಬೀದಿಬದಿ ತರಕಾರಿ, ಹಣ್ಣುಗಳ ವ್ಯಾಪಾರಸ್ಥರು ಕೂಡ ತಮ್ಮ ವ್ಯಾಪಾರ ಸ್ಥಗಿತಗೊಳಿಸಿ ಬಂದ್‌ಗೆ ಬೆಂಬಲ ನೀಡಿದ್ದರು. ಪೆಟ್ರೋಲ್ ಬಂಕ್, ಮೆಡಿಕಲ್ ಸ್ಟೋರ್, ಹಾಲಿನ ಅಂಗಡಿ, ಬ್ಯಾಂಕ್‌ಗಳು ತೆರೆದಿದ್ದವು. ಶಾಲಾ–ಕಾಲೇಜುಗಳು ಎಂದಿನಂತೆ ನಡೆದವು. ಆಟೋ, ಕೆಎಸ್‌ಆರ್‌ಟಿಸಿ ಬಸ್ ಸೇರಿದಂತೆ ಎಲ್ಲಾ ರೀತಿಯ ವಾಹನಗಳು ಎಂದಿನಂತೆ ಸಂಚರಿಸಿದವು. ಆದರೆ ಜನರೇ ಇರಲಿಲ್ಲ.

ಶ್ರೀಕಂಠೇಶ್ವರಸ್ವಾಮಿಯ ದೇವಾಲಯ ಎಂದಿನಂತೆ ತೆರೆದಿತ್ತು. ಆದರೆ ಭಕ್ತರ ಸಂಖ್ಯೆ ಕಡಿಮೆ ಇತ್ತು. ದೇವಾಲಯದ ಸುತ್ತಮುತ್ತ ವ್ಯಾಪಾರಸ್ಥರು ವಹಿವಾಟು ಇರಲಿಲ್ಲ. ಭಕ್ತರು ನೇರವಾಗಿ ದೇವರ ದರ್ಶನ ಪಡೆದು ವಾಪಾಸ್ಸಾಗುವ ದೃಶ್ಯ ಸಾಮಾನ್ಯವಾಗಿತ್ತು. ಅಲ್ಲದೆ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದ ಕಾರಣ ತಿಂಡಿ, ಕಾಫಿ, ಟೀ, ಊಟ ಇಲ್ಲದೆ ಪರದಾಡುವಂತಾಗಿತ್ತು.

**ಭಕ್ತರ ಬೃಹತ್ ರ್‍ಯಾಲಿ:** ಬೆಳಿಗ್ಗೆ 10.30ರ ವೇಳೆಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ಶ್ರೀಕಂಠೇಶ್ವರ ಭಕ್ತರು ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ದೇವರ ಉತ್ಸವಮೂರ್ತಿಗೆ ಎಂಜಲು ನೀರು ಎರಚಿ ಅಪಚಾರವೆಸಗಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು. ಪ್ರತಿಭಟನಾ ರ್‍ಯಾಲಿ ನಗರದ ರಾಕ್ಷಸ ಮಂಟಪದಿಂದ ಬಜಾರ್ ರಸ್ತೆ ಮೂಲಕ ಶ್ರೀಕಂಠೇಶ್ವರ ದೇವಾಲಯವನ್ನು ತಲುಪಿ ನಂತರ ಆರ್.ಪಿ.ರಸ್ತೆಯ ಮೂಲಕ ಸಾಗಿ ಊಟಿ ರಸ್ತೆಯ ಚಿಂತಾಮಣಿ ದೇವಾಲಯದ ● 6ನೇ ಪುಟಕ್ಕೆ



## ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿ ಹರೀಶರ ಮಹಾ ಕೊಡುಗೆ

# ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ 30 ಕೋಟಿ ವೆಚ್ಚದಲ್ಲಿ ನವೀಕರಣ

**● ಮೈಸೂರು ವಿವಿ–ಹರೀಶ್ ಅಂಡ್ ಬೀನಾ ಶಾ ಫೌಂಡೇಷನ್ ಒಪ್ಪಂದ ● ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ಗೆ ನವೀಕರಣ ಜವಾಬ್ದಾರಿ ● 5ರಿಂದ 7 ವರ್ಷದಲ್ಲಿ ಕಾಮಗಾರಿ ಪೂರ್ಣ ● ಆಳರಸರ ಕಾಲದ ಗತವೈಭವದ ಮೆರಗು**







ಮೈಸೂರು, ಜ.4(ಬಿಎಲ್‌ಯು)– ಶಿಥಿಲಾವಸ್ಥೆಯಿಂದ ಧರಾಶಾಯಿ ಸ್ಥಿತಿಗೆ ತಲುಪಿದ್ದ ಮೈಸೂರಿನ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು 30 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿದ ಸ್ಥಿತಿಯಲ್ಲಿದ್ದ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ಗೆ ಈಗ ಪುನಃ ರಾಜ ಪರಂಪರೆಯ ಗತ ವೈಭವದ ಮೆರಗು ನೀಡಲಾಗುತ್ತಿದೆ.

ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ನವೀಕರಿಸಲು ಮುಂಬೈ ಮೂಲದ ಹರೀಶ್ ಅಂಡ್ ಬೀನಾ ಶಾ ಫೌಂಡೇಷನ್ 30 ಕೋಟಿ ರೂಪಾಯಿ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಫೌಂಡೇಷನ್ ನಡುವೆ ಇಂದು ಒಪ್ಪಂದ ಏರ್ಪಟ್ಟಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭಾಂಗಣದಲ್ಲಿ ಇಂದು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಫೌಂಡೇಷನ್ ಸಂಸ್ಥಾಪಕ ಹರೀಶ್ ಮತ್ತು ಬೀನಾ ಶಾ ಇಂದು ಒಪ್ಪಂದಕ್ಕೆ ಸಹಿ ಹಾಕಿದರು.

ಹರೀಶ್ ಅವರು ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ 1980ರಲ್ಲಿ ವ್ಯಾಸಂಗ ಮಾಡಿದ್ದರು. ತಾವು ವ್ಯಾಸಂಗ ಮಾಡಿದ ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಯಾಗಿ ತನ್ನ ವಿಶ್ವವಿದ್ಯಾನಿಲಯಕ್ಕೆ ಕೊಡುಗೆಯಾಗಿ ಹರೀಶ್ 30 ಕೋಟಿ ರೂಪಾಯಿ ನೀಡುತ್ತಿದ್ದಾರೆ.

ಸದ್ಯ ಮುಂಬೈನಲ್ಲಿರುವ ಈ ದಂಪತಿ, ಹರೀಶ್ ಹಾಗೂ ಬೀನಾ ಫಾರ್ಮಾಸ್ಯುಟಿಕಲ್ ಕಂಪನಿ ಮಾಲೀಕರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ಹರೀಶ್ ಹಾಗೂ ಅವರ ಪತ್ನಿ ಬೀನಾ ಮಾನಸ ಗಂಗೋತ್ರಿಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನ ಹೀನಾಯ ಸ್ಥಿತಿ ನೋಡಿ ನೊಂದರು. ರಾಜರ ಕಾಲದ ಈ ಕಟ್ಟಡವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ತಮ್ಮ ಫೌಂಡೇಷನ್ ವತಿಯಿಂದ ನವೀಕರಣ ಮಾಡಿಕೊಡುವುದಾಗಿ ಭರವಸೆ ನೀಡಿದ್ದರು. ಇದರ ಹಿನ್ನೆಲೆಯಲ್ಲಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ನವೀಕರಿಸಲು ಹರೀಶ್ ಅವರ ಫೌಂಡೇಷನ್ ● 9ನೇ ಪುಟಕ್ಕೆ

# ವಿದ್ಯಾರ್ಥಿಗಳು ವ್ಯಕ್ತಿತ್ವ ರೂಪಿಸಿಕೊಳ್ಳಲು ಗ್ರಂಥಾಲಯಗಳು ಸಹಕಾರಿ



ಮೈಸೂರು,ಜ.4(ಜಿಎ)– ವಿದ್ಯಾರ್ಥಿಗಳು ಬುದ್ಧ, ಅಂಬೇಡ್ಕರ್ ಸೇರಿದಂತೆ ಅನೇಕ ಮಹನೀಯರ ಕೃತಿಗಳನ್ನು ಓದಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಗ್ರಂಥಾಲಯಗಳು ಸಹಕಾರಿಯಾಗಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ ತಿಳಿಸಿದರು.

ಮಾನಸಗಂಗೋತ್ರಿಯ ಡಾ.ಎಸ್.ಆರ್. ರಂಗನಾಥನ್ ಸಭಾಂಗಣದಲ್ಲಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ವತಿಯಿಂದ ಗುರುವಾರ ಆಯೋಜಿಸಿದ್ದ ಶಾರದಾ ರಂಗನಾಥನ್ ಎಂಡೋಮೆಂಟ್ ವಿಷಯದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಎಸ್.ಆರ್.ರಂಗನಾಥ್ ಗ್ರಂಥಾಲಯ ರೂಪಿಸುವ ಮೂಲಕ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಕಾರಿಯಾದರು ಎಂದರು.

ಕಾರ್ಯಾಂಗ ಹಾಗೂ ಪ್ರಸಾರಾಂಗದ ಜೊತೆಗೆ ಗ್ರಂಥಾಲಯಗಳು ಪ್ರಾಮುಖ್ಯತೆ ಪಡೆದುಕೊಂಡಿದ್ದು, ಅದಕ್ಕೆ ಡಾ.ಎಸ್.ಆರ್.ರಂಗನಾಥ್ ಕಾರಣಕರ್ತರು. ಹಾಗೇ ಬದುಕಿನ ಉದ್ದಕ್ಕೂ ಗ್ರಂಥಾಲಯದ ಏಳಿಗೆಗೆ ಸಾಕಷ್ಟು ಶ್ರಮಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ಗ್ರಂಥಾಲಯಗಳ ವಿಕಾಸಕ್ಕೆ ಮಾರ್ಗದರ್ಶನ ನೀಡುವ ನಿರ್ಣಾಯಕ ಅಂಶಗಳನ್ನು ಎತ್ತಿ ಹಿಡಿದ ಅವರು, ಗ್ರಂಥಾಲಯಗಳಲ್ಲಿ ಓದುಗರು ಸರ್ವಶ್ರೇಷ್ಠರು ಎಂದು ತಿಳಿಸಿದರು.

ಈ ವೇಳೆ ಗ್ರಂಥಪಾಲಕನ ಅಗತ್ಯ ಗುಣಗಳನ್ನು ತಿಳಿಸಿದ ಅವರು, ನಕಲಿ ಸುದ್ದಿ ಗುರುತಿಸುವಿಕೆ, ಸ್ಪರ್ಧಾತ್ಮಕ ಬುದ್ಧಿವಂತಿಕೆ, ತಾಂತ್ರಿಕ ಬರವಣಿಗೆ ಮತ್ತು ಹೆಚ್ಚಿನವುಗಳಲ್ಲಿ ತಮ್ಮ ಪಾತ್ರಗಳನ್ನು ಮರುರೂಪಿಸುವ ಮೂಲಕ ಉದ್ಯಮಶೀಲತೆಯನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಸದಸ್ಯ ಡಾ.ಕೆ.ಎಸ್.ರಾಘವನ್, ಡಿಎಲ್ಐಎಸ್ ಅಧ್ಯಕ್ಷ ಡಾ.ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

# ಮೈಸೂರು ವಿಮಾನ ನಿಲ್ದಾಣದಲ್ಲಿ ಪೈಲಟ್‌ಗಳ ಕಣ್ಣಿಗೆ ಲೇಸರ್ ಲೈಟ್: ಪೊಲೀಸರಿಂದ ತನಿಖೆ





ಮೈಸೂರು, ಜ.4(ಆರ್‌ಕೆ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪೈಲಟ್‌ಗಳ ಕಣ್ಣಿಗೆ ಲೇಸರ್ ಬೀಮ್ ಲೈಟ್ ಬಿಡುತ್ತಿದ್ದ ಕಿಡಿಗೇಡಿಗಳ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಈ ಸಂಬಂಧ ವಿಮಾನ ನಿಲ್ದಾಣದ ನಿರ್ದೇಶಕರು ದೂರು ನೀಡಿರುವ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರ ನಿರ್ದೇಶನದಂತೆ ಕಾರ್ಯಾಚರಣೆ ನಡೆಸುತ್ತಿರುವ ಕೆ.ಆರ್. ಠಾಣೆ ಪೊಲೀಸರು, ಮಂಡಕಳ್ಳಿ ವಿಮಾನ ನಿಲ್ದಾಣದ ಸುತ್ತಲಿನ ಗ್ರಾಮಗಳಲ್ಲಿ ಯುವಕರ ಚಲನ–ವಲನಗಳ ಮೇಲೆ ನಿಗಾ ಇರಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಈ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸ್ ಆಯುಕ್ತ ರಮೇಶ್, ಲೇಸರ್ ಲೈಟ್ ಬಿಡುತ್ತಿರುವ ಬಗ್ಗೆ ಏರ್‌ಪೋರ್ಟ್ ನಿರ್ದೇಶಕರ ದೂರಿನನ್ವಯ ತನಿಖೆ ಮಾಡಲು ಕೆ.ಆರ್. ಠಾಣೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಪುಂಡರು ಮನರಂಜನೆಗಾಗಿ ಲೈಟ್ ಬಿಟ್ಟು ಸಂಭ್ರಮಿಸುತ್ತಿದ್ದಾರೋ ಅಥವಾ ಉದ್ದೇಶಪೂರ್ವಕವಾಗಿ ಈ ಕೃತ್ಯ ನಡೆಯುತ್ತಿದೆಯೋ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದರು.

ಹೈ ಪವರ್ ಲೇಸರ್ ಲೈಟ್ ಅಪಾಯ ತಂದೊಡ್ಡಲಿದ್ದು, ಅವುಗಳನ್ನು ಎಲ್ಲಿ ಮಾರಾಟ ಮಾಡಲಾಗುತ್ತಿದೆ. ಏರ್‌ಪೋರ್ಟ್ ಸುತ್ತಲಿನ ಫಾರಂಹೌಸ್‌ಗಳಲ್ಲಿ ಸಂತೋಷ ಕೂಟ, ಡಿಜೆ ಪಾರ್ಟಿ ಮಾಡುವವರು ಈ ಲೈಟ್ ಬಿಡುತ್ತಿದ್ದಾರೋ ಅಥವಾ ಬೇರೆ ಕಡೆಯಿಂದ ಬಂದು ದುಷ್ಕರ್ಮಿಗಳು ಈ ಕೃತ್ಯ ನಡೆಸುತ್ತಿದ್ದಾರೋ ಎಂಬುದರ ಬಗ್ಗೆಯೂ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ ಎಂದು ತಿಳಿಸಿದರು.

ವಿಮಾನ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಆಗುವಾಗ ರಾತ್ರಿ ವೇಳೆ ಈ ಲೇಸರ್ ಲೈಟ್‌ಗಳನ್ನು ವಿಮಾನಗಳತ್ತ ಬಿಡುತ್ತಿರುವುದರಿಂದ ಪೈಲಟ್‌ಗಳ ಕಣ್ಣು ಮಂಜಾಗಿ ಭಾರಿ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ದುಷ್ಕರ್ಮಿಗಳ ಪತ್ತೆಗೆ ತೀವ್ರ ಶೋಧ ನಡೆಸಲಾಗುತ್ತಿದೆ ಎಂದರು.



ಬಿ.ರಮೇಶ್

ಮತ್ತೊಂದೆಡೆ ವಿಮಾನ ನಿಲ್ದಾಣದ ಭದ್ರತೆ, ಸುರಕ್ಷತೆ ಜವಾಬ್ದಾರಿ ಹೊತ್ತಿರುವ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (KSISF) ಪೊಲೀಸರೂ ಲೇಸರ್ ಲೈಟ್ ಪ್ರಕರಣ ಭೇದಿಸಲು ತನಿಖೆ ನಡೆಸುತ್ತಿದ್ದಾರೆ. ಗಣ್ಯರು, ಅತೀ ಗಣ್ಯರು, ವಿದೇಶಿಗರು, ಐಟಿ–ಬಿಟಿ ಪ್ರಮುಖರು ಬಂದು–ಹೋಗುವ ಮೈಸೂರು ವಿಮಾನ ನಿಲ್ದಾಣ ಮತ್ತು ಏರ್‌ಕ್ರಾಫ್ಟ್‌ಗಳ ರಕ್ಷಣೆ ದೃಷ್ಟಿಯಿಂದ ಪೊಲೀಸರು ತೀವ್ರ ನಿಗಾ ವಹಿಸಿದ್ದಾರೆ.

## ಮನೆ ಬೀಗ ಮುರಿದು ಚಿನ್ನಾಭರಣ, ಗಡಿಯಾರ ಕಳವು

ಮೈಸೂರು,ಜ.4–ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ಗಡಿಯಾರ ಕಳವು ಮಾಡಿರುವ ಘಟನೆ ಮೈಸೂರಿನ ಬೆಲವತ್ತ ಗ್ರಾಮದಲ್ಲಿ ನಡೆದಿದೆ.



ಅಲ್ಲಿನ ನಿವಾಸಿ ಹ್ಯಾರಿ ಜೋಸೆಫ್(61) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಪತ್ನಿ ಸಮೇತ ಬೆಂಗಳೂರಿನ ಮಗನ ಮನೆಗೆ ಕಳೆದ ಡಿ.22ರಂದು ತೆರಳಿದ್ದು, ಇವರ ಕಿರಿಯ ಮಗ ಡಿ.29ರಂದು ಮನೆಗೆ ಬಂದಿದ್ದು, ಡಿ.31ರಂದು ಮನೆ ಬೀಗ ಹಾಕಿಕೊಂಡು ಕೀಯನ್ನು ಮನೆ ಕೆಲಸ ಮಾಡುವ ಬಸಮ್ಮ ಎಂಬುವರಿಗೆ ಕೊಟ್ಟು ಹೋಗಿದ್ದಾರೆ. ಜ.2ರಂದು ಸಂಜೆ ಮನೆಯ ಬಳಿ ನೀರು ಹಾಕಲು ಬಸಮ್ಮ ಬಂದಾಗ ಮನೆ ಬೀಗ ಮುರಿದಿರುವುದು ಗೊತ್ತಾಗಿದೆ. ವಿಷಯ ತಿಳಿದು ಹ್ಯಾರಿ ಜೋಸೆಫ್ ಆಗಮಿಸಿ ನೋಡಿದಾಗ ಮನೆಯಲ್ಲಿದ್ದ 408 ಗ್ರಾಂ ತೂಕದ ಚಿನ್ನಾಭರಣ ಹಾಗೂ ಪೀಟರ್ ಇಂಗ್ಲೆಂಡ್ ಕಂಪೆನಿಯ ಎರಡು ಗಡಿಯಾರಗಳು ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಸ್ತು ಖರೀದಿಸಿದರೆ ರಸೀದಿ ಪಡೆಯಿರಿ

**ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್ ಅಭಿಮತ**



ಮೈಸೂರು,ಜ.4–ಗ್ರಾಹಕರ ಆರೋಗ್ಯ ಹಾಗೂ ಜೀವಕ್ಕೆ ಹಾನಿಯನ್ನುಂಟು ಮಾಡುವ ಉತ್ಪಾದನಾ ಮತ್ತು ಇತರೆ ನ್ಯೂನತೆಗಳನ್ನು ಹೊಂದಿರುವ ಆಹಾರ ವಸ್ತುಗಳು, ಔಷಧಿ, ವಿದ್ಯುತ್ ಉಪಕರಣಗಳು, ಗ್ಯಾಸ್ ಸಿಲಿಂಡರ್‌ಗಳು, ರಕ್ಷಣೆಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್ ಹೇಳಿದರು.

ನಗರದ ಚಾಮುಂಡಿಪುರಂನಲ್ಲಿರುವ ಅಪೂರ್ವ ಸ್ನೇಹ ಬಳಗದ ಕಚೇರಿಯಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಗ್ರಾಹಕರ ದಿನಾಚರಣೆ ಅಂಗವಾಗಿ ಗ್ರಾಹಕರಿಗೆ ಗ್ರಾಹಕರ ಸಂರಕ್ಷಣಾ ಕಾಯಿದೆಗಳ ಜಾಗೃತಿಯುಳ್ಳ ಗ್ರಾಹಕರೇ ರಾಜ ಪುಸ್ತಕವನ್ನು ವಿತರಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಯಾವುದೇ ವಸ್ತು ಖರೀದಿ ಮಾಡಿದರೆ ಅದಕ್ಕೆ ಸಂಬಂಧಪಟ್ಟ ರಸೀದಿಯನ್ನು ಪಡೆಯಬೇಕು. ಮತ್ತು ಆ ವಸ್ತುವಿನ ಮೇಲಿನ ಖಾತರಿ(ವಾರಂಟಿ)ಯನ್ನು ಪರಿಶೀಲಿಸಿ ಪಡೆದುಕೊಳ್ಳಬೇಕೆಂದು ಹೇಳಿದರು.

> ಡಿಜಿಟಲ್ ಯುಗದಲ್ಲಿ ಗ್ರಾಹಕರು ಅರಿವಿಲ್ಲದಂತೆ ವಂಚನೆ ಜಾಲದಲ್ಲಿ ಸಿಲುಕುತ್ತಿದ್ದಾರೆ. ಆನ್‌ಲೈನ್ ಖರೀದಿ ವೇಳೆ ಬಹಳ ಎಚ್ಚರವಾಗಿರಬೇಕು. ಗ್ರಾಹಕ ರಕ್ಷಣಾ ಕಾಯ್ದೆ ಅಡಿ ಗ್ರಾಹಕರ ರಕ್ಷಣೆ ಪಡೆಯಲು ಅವಕಾಶವಿದೆ. ಖರೀದಿ ವೇಳೆ ಮೋಸಕ್ಕೆ ಒಳಗಾದರೆ ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಮಟ್ಟದಲ್ಲಿರುವ ಗ್ರಾಹಕರ ವಿವಾದ ಪರಿಹಾರ ವೇದಿಕೆಗೆ ದೂರು ಸಲ್ಲಿಸಿ ಪರಿಹಾರ ಪಡೆಯಬಹುದು.
>
> –ರವೀಂದ್ರ, ಹಿರಿಯ ವಕೀಲ

ಗ್ರಾಹಕನು ಗೌರವಯುತ ಜೀವನ ನಿರ್ವಹಿಸಲು ಮೂಲಭೂತ ಅವಶ್ಯಕತೆಗಳಾದ ಆಹಾರ, ಕುಡಿಯುವ ನೀರು, ಉಡುಪು, ವಸತಿ, ಆರೋಗ್ಯ, ಶಿಕ್ಷಣ ಹಾಗೂ ನೈರ್ಮಲ್ಯಯುತ ವಾತಾವರಣವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾನೆ ಎಂದರು. ಭೂಮಿಕಾ ಸುರೇಶ್, ದಿವಾಕರ್, ಸೀತಾರಾಮ್, ಅಪೂರ್ವ ಸುರೇಶ್, ಮುರಳಿ, ನಟೇಶ್, ಅಶ್ವಥ್ ನಾರಾಯಣ್, ಮೈಸೂರು ಆನಂದ್, ವಿಶ್ವನಾಥ್, ಆನಂದ್, ಡಾ.ಜಿ.ವಿ.ರವಿಶಂಕರ್ ಹಾಗೂ ಇನ್ನಿತರರು ಹಾಜರಿದ್ದರು.

# ಮುಂಬೈ ಪೊಲೀಸರ ಹೆಸರಲ್ಲಿ ಬೆದರಿಸಿ ಸಂಶೋಧನಾ ವಿದ್ಯಾರ್ಥಿನಿ ಸುಲಿಗೆ

ಮೈಸೂರು, ಜ.4–ಮುಂಬೈ ಪೊಲೀಸರ ಹೆಸರಲ್ಲಿ ಬೆದರಿಸಿ ಹಾಗೂ ಲೋನ್ ಕೊಡುವುದಾಗಿ ನಂಬಿಸಿ ಸಂಶೋಧನಾ ವಿದ್ಯಾರ್ಥಿನಿ ಸೇರಿ ಇಬ್ಬರಿಗೆ ಆನ್‌ಲೈನ್ ಮೂಲಕ ವಂಚಿಸಲಾಗಿದೆ.

**ಮತ್ತೊಂದು ಪ್ರಕರಣದಲ್ಲಿ ಸಾಲ ನೀಡುವುದಾಗಿ ನಂಬಿಸಿ ಯುವತಿಗೆ ವಂಚನೆ**

ಮೈಸೂರಿನ ಸಿದ್ಧಾರ್ಥನಗರ ನಿವಾಸಿಯಾಗಿರುವ ಸಂಶೋಧನಾ ವಿದ್ಯಾರ್ಥಿನಿ ವಿ.ಅರ್ಪಿತಾ ಎಂಬುವರಿಗೆ 771392 1767 ಸಂಖ್ಯೆಯಿಂದ ಕರೆ ಮಾಡಿದ ವಂಚಕರು, ತಮ್ಮನ್ನು ಮುಂಬೈ ಪೊಲೀಸರು ಎಂದು ಪರಿಚಯಿಸಿಕೊಂಡು, ಅರ್ಪಿತಾ ಅವರ ಆಧಾರ್ ಬಳಸಿ ಕಳುಹಿಸಿರುವ ಪಾರ್ಸಲ್ ರಿಜೆಕ್ಟ್ ಆಗಿದ್ದು, ಅದರಲ್ಲಿ ಡ್ರಗ್ಸ್ ಮತ್ತು ಅವಧಿ ಮುಗಿದಿರುವ ಪಾಸ್‌ಪೋರ್ಟ್‌ಗಳು ಇವೆ ಎಂದು ತಿಳಿಸಿ, ವೆರಿಫಿಕೇಷನ್‌ಗೆ ಎಂದು 98,887 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಸರಸ್ವತಿಪುರಂನ ನಿಮಿಷಾಂಬ ಪಿಜಿಯಲ್ಲಿರುವ ಪಿ.ಬಿ.ಭವ್ಯಾ(33) ಎಂಬುವರಿಗೆ 9038224212 ಸಂಖ್ಯೆಯಿಂದ ಕರೆ ಮಾಡಿದ ವಂಚಕರು ರಿಲಾಯನ್ಸ್ ಫೈನಾನ್ಸ್‌ನವರೆಂದು ಪರಿಚಯಿಸಿಕೊಂಡು ಲೋನ್ ನೀಡುವುದಾಗಿ ನಂಬಿಸಿ ಭವ್ಯಾ ಅವರ ಆಧಾರ್, ಪಾನ್‌ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ವಿವರಗಳನ್ನು ಪಡೆದ ನಂತರ ಜಿಎಸ್‌ಟಿ ಮತ್ತು ಇತರೆ ಶುಲ್ಕಗಳೆಂದು 96,900 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

## ಯತ್ನಾಳ್ ಹೇಳಿಕೆ ತನಿಖೆಗೆ ಒತ್ತಾಯ

ಮೈಸೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ಭ್ರಷ್ಟಾಚಾರ ನಡೆದಿದ್ದು, ಈ ಬಗ್ಗೆ ತನಿಖೆ ನಡೆಸಬೇಕು ಎಂದು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಒತ್ತಾಯಿಸಿದರು.

ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ಕೋವಿಡ್‌ಗೆ ಸಂಬಂಧಿಸಿದಂತೆ ಹಗರಣ ನಡೆದಿದೆ. ಸುಮಾರು 40 ಸಾವಿರ ಕೋಟಿ ಭ್ರಷ್ಟಾಚಾರವಾಗಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆಗಿನ ಮುಖ್ಯಮಂತ್ರಿ, ಸಚಿವರು ಹಾಗೂ ಶಾಸಕರ ಬಗ್ಗೆ ಆರೋಪಿಸಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಶೇ.40ರಷ್ಟು ಕಮಿಷನ್ ವಿರುದ್ಧ ಕಾಂಗ್ರೆಸ್ ಮೊದಲಿನಿಂದಲೂ ಹೋರಾಟ ನಡೆಸುತ್ತಿತ್ತು. ಈಗ ಆ ಹೋರಾಟಕ್ಕೆ ಬಿಜೆಪಿ ಶಾಸಕರಿಂದಲೇ ಉತ್ತರ ಸಿಕ್ಕಿದೆ. ಸಚಿವರ, ಶಾಸಕರು ಹಾಗೂ ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

## ನಾಳೆ ಪ್ರತಿಮೆ ತೆರವಿಗೆ ಆಗ್ರಹಿಸಿ ಜಾಥಾ

ಮೈಸೂರು,ಜ.4(ಬಿಎಲ್‌ಯು)–ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ನಿರ್ಮಿಸುತ್ತಿರುವ ಕಾನೂನುಬಾಹಿರ ಪ್ರತಿಮೆ ತೆರವು ಹೋರಾಟ ಸಮಿತಿ ಜನವರಿ 6ರಂದು ನಗರದಲ್ಲಿ ಕಾಲ್ನಡಿಗೆ ಜಾಥಾ ನಡೆಸಲಿದೆ ಎಂದು ಸಮಿತಿ ಸಂಚಾಲಕ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿ ನಿರ್ಮಿಸುತ್ತಿರುವ ಪ್ರತಿಮೆ ತೆರವು ಮಾಡುವಂತೆ ಜ.6ರಂದು ಬೆಳಗ್ಗೆ 10.30 ಗಂಟೆಗೆ ಗನ್‌ಹೌಸ್ ವೃತ್ತದಿಂದ ಡಿಸಿ ಕಚೇರಿವರೆಗೆ ಸಮಿತಿ ಕಾಲ್ನಡಿಗೆ ಜಾಥಾ ನಡೆಸಲಿದೆ. ಜಾಥಾದಲ್ಲಿ ಸರ್ವ ಜನಾಂಗದ ಎಲ್ಲರೂ ಭಾಗವಹಿಸುವಂತೆ ಮನವಿ ಮಾಡಿದ್ದಾರೆ.

## ರಾಷ್ಟ್ರೀಯ ಯುವ ಸಪ್ತಾಹ: ಭಾಷಣ ಸ್ಪರ್ಧೆ

ಮೈಸೂರು,ಜ.4–ಭಾರತ ಸರ್ಕಾರ ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ ಆದೇಶದ ಅನ್ವಯ ಸ್ವಾಮಿ ವಿವೇಕಾನಂದರ 161ನೇ ಜನ್ಮದಿನಾಚರಣೆ ರಾಷ್ಟ್ರೀಯ ಯುವ ಸಪ್ತಾಹದ ಪ್ರಯುಕ್ತ ಯುವಜನರಿಗೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಸ್ಪರ್ಧೆಗೆ ಭಾಗವಹಿಸಲು ಜಿಲ್ಲೆಯ ನಿವಾಸಿಗಳಾಗಿರಬೇಕು ಹಾಗೂ 15 ವರ್ಷದಿಂದ 29 ವರ್ಷದ ಒಳಗಿರಬೇಕು. ರಾಜ್ಯ ಮಟ್ಟದ ಪ್ರಥಮ ಬಹುಮಾನ 1,00,000, ದ್ವಿತೀಯ ಬಹುಮಾನ 50,000, ತೃತೀಯ ಬಹುಮಾನ ಇಬ್ಬರಿಗೆ 25,000 ರೂ.ಗಳನ್ನು ರಾಜ್ಯಮಟ್ಟದ ವಿಜೇತರಿಗೆ ನೀಡಲಾಗುವುದು. ನೋಂದಣಿ ಮಾಡಿಕೊಳ್ಳುವ ಯುವಜನರು ಜಿಲ್ಲಾ ಯುವಜನ ಅಧಿಕಾರಿಗಳ ಕಾರ್ಯಾಲಯ ನೆಹರು ಯುವ ಕೇಂದ್ರ ನಂ.26/A ರಾಜರಾಜೇಶ್ವರಿ ದೇವಸ್ಥಾನ ರಸ್ತೆ, ವಿಶ್ವೇಶ್ವರನಗರ 3ನೇ ಹಂತ ಮೈಸೂರು–570008 ಕಚೇರಿಯಲ್ಲಿ ಜ.9ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗಾಗಿ ದೂ.ಸಂ.0821–2489858 ಸಂಪರ್ಕಿಸಬಹುದು.

> **ವಿಷಯ: ಮೈ ಭಾರತ್ ವೀಕ್ಷಿತ್ ಭಾರತ್@2047.** ಸ್ಪರ್ಧೆಯ ಭಾಷೆಗಳು ಕನ್ನಡ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿದ್ದು, ಸಮಯ 7 ನಿಮಿಷ (ಗರಿಷ್ಠ) ಇರಲಿದೆ. ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಆಯ್ಕೆಯಾದವರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹರಾಗುವರು.

## ಜ.9, ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಜ.4–ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಜನವರಿ 9ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ.9448753597, ಎಂ.ಎನ್. ಜೈಪ್ರಕಾಶ್, ಮೊ. 9916155453, 94487 38657 ಸಂಪರ್ಕಿಸಬಹುದು.

# 59 ದಿನ ಪೂರೈಸಿದ ಕಾವೇರಿ ಕ್ರಿಯಾ ಸಮಿತಿ ಧರಣಿ




ಮೈಸೂರು,ಜ.4(ಜಿಎ)–ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಗುರುವಾರ 59ನೇ ದಿನದ ಧರಣಿ ನಡೆಸಲಾಯಿತು.

ಮೈಸೂರಿನವರೇ ಆದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದ ನಂತರ ಮೈಸೂರಿನ ಜನತೆ ಅವರನ್ನು ಗೌರವದಿಂದ ಕಾಣುವುದಿಲ್ಲ. ಕೆಆರ್‌ಎಸ್‌ನಲ್ಲಿ ನೀರು ಇಲ್ಲದೆ ಇದ್ದರೂ ಸಹ ತಮಿಳುನಾಡಿಗೆ ಸತತವಾಗಿ ನೀರನ್ನು ಬಿಟ್ಟು ಕನ್ನಡದ ಜನತೆಗೆ ದ್ರೋಹ ಬಗೆದಿದ್ದಾರೆ. ಬೆಂಗಳೂರು, ಮೈಸೂರು ನಗರ ಸೇರಿದಂತೆ ಕುಡಿಯುವ ನೀರಿಗೆ ತೊಂದರೆಯಾಗಿದ್ದು, ಈ ಕೂಡಲೇ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ಸೋಮೇಗೌಡ, ಕರ್ನಾಟಕ ಹಸಿರು ಸೇನೆಯ ಮುಖಂಡ ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಗಾಣಿಗನಕೊಪ್ಪಲು ಶ್ರೀರಾಮದೇವರ ಟ್ರಸ್ಟ್ ಅಧ್ಯಕ್ಷ ಜಿ.ನಾಗರಾಜ್, ಬಂಡಿಪಾಳ್ಯದ ಕೃಷ್ಣಪ್ಪ, ಮಂಜುಗೌಡ, ಮೆಲ್ಲಹಳ್ಳಿ ಲಕ್ಷ್ಮೀಶ, ಶಿವಾಜಿ, ಶ್ರೀನಿವಾಸ್, ಶಿವಕುಮಾರ್, ಕುಮಾರ್, ರಾಜಣ್ಣ, ರೇವಣ್ಣ, ಪುಷ್ಪವತಿ, ಶುಭಶ್ರೀ, ರವೀಶ್, ಆಟೋ ಮಹಾದೇವ, ಅಶೋಕ್, ಮಹೇಶ್‌ಗೌಡ, ವಿಷ್ಣು, ಕೃಷ್ಣ, ಶಾಂತಪ್ಪ, ಕೂರ್ಗಳ್ಳಿ ಗ್ರಾಪಂ ಮಾಜಿ ಸದಸ್ಯೆ ಆರ್.ಮಂಜುಳಾ, ಕಾಂಗ್ರೆಸ್ ಮುಖಂಡ ನಗುವನಹಳ್ಳಿ ಬಾಲು, ಕನ್ನಡ ಸೇನೆ ಜಿಲ್ಲಾ ಸಮಿತಿಯ ಕೃಷ್ಣಯ್ಯ, ಹನುಮಂತಯ್ಯ, ಡಾ.ರಾಜ್‌ಕುಮಾರ್ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ, ಕರ್ನಾಟಕ ಸರ್ವೋದಯ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವನಾಯಕ್ ಇದ್ದರು.

## ಮೈಸೂರು, ಚಾ.ನಗರ ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ ಜಯರಾಮ್ ನಿಧನ



ಮೈಸೂರು, ಜ.4– ಮೈಸೂರು ತಾಲೂಕು ದಾಸನಕೊಪ್ಪಲು ನಿವಾಸಿ ಹಾಗೂ ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ ಜಯರಾಮ್ (53) ಅವರು ಇಂದು ನಿಧನರಾದರು.

ಮೃತರು ಪತ್ನಿ, ಮೂವರು ಮಕ್ಕಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ದಾಸನಕೊಪ್ಪಲು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಸಿ.ಎನ್. ಮಂಜೇಗೌಡ, ಮುಖಂಡರಾದ ಕವೀಶ್‌ಗೌಡ, ಶುಶ್ರುತ್‌ಗೌಡ ಸಂತಾಪ ಸೂಚಿಸಿದ್ದಾರೆ.

# ಸುತ್ತೂರಲ್ಲಿ ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ಮೈಸೂರು, ಜ.4–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಫೆ.6ರಿಂದ 11ರವರೆಗೆ ನಡೆಯಲಿದೆ. ಈ ಸಂಬಂಧ ರಾಜ್ಯಮಟ್ಟದ ಭಜನಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಪುರುಷರ ತಂಡ, ಮಕ್ಕಳ ತಂಡ, ನಗರ ಮಹಿಳಾ ತಂಡ, ಗ್ರಾಮಾಂತರ ಮಹಿಳಾ ತಂಡ, ಏಕತಾರಿ ಪುರುಷರ ತಂಡ, ಏಕತಾರಿ ಮಹಿಳಾ ತಂಡಗಳಿಗೆ ಅವಕಾಶವಿರುತ್ತದೆ. ನೆರೆ ರಾಜ್ಯಗಳ ಮಕ್ಕಳು, ಪುರುಷ ಮತ್ತು ಮಹಿಳಾ ಭಜನಾ ತಂಡಗಳಿಗೆ, ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಗಮನಿಸಿ ಪ್ರತ್ಯೇಕವಾಗಿ ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ಭಜನಾ ತಂಡಗಳವರು ಹೆಚ್ಚಿನ ಮಾಹಿತಿಗೆ ನೇರವಾಗಿ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಾರ್ಯಾಲಯದಲ್ಲಿ ಅಥವಾ ಸಂಚಾಲಕರಾದ ವಿಶ್ವನಾಥ್, ಎ.ಎಂ. ಶಿವಕುಮಾರಸ್ವಾಮಿ, ಆರ್.ಎಸ್. ಕುಮಾರ್ ಅವರನ್ನು ದೂ. 0821–2548212, 9448800977 ಸಂಪರ್ಕಿಸಬಹುದು.

# ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ :** ಎರಡು ದಿನಗಳ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ, ಸ್ಥಳ: ಹೋಟೆಲ್ ಲಿ ರುಚಿ ದಿ ಪ್ರಿನ್ಸ್, ಹುಣಸೂರು ರಸ್ತೆ, ಬೆಳಗ್ಗೆ 9ರಿಂದ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಉಪಸ್ಥಿತರು: ಪ್ರಾಂಶುಪಾಲರಾದ ಎಂ.ಎಸ್.ವಿಜಯ, ಶೈಕ್ಷಣಿಕ ಅಧಿಕಾರಿ ಮಂಗಳಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ಜಿಲ್ಲಾ ಶ್ರೀ ಭಗೀರಥ ಕಟ್ಟಡ ಮತ್ತು ಕೂಲಿ ಕಾರ್ಮಿಕರ ಸಂಘ:** ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಮಹದೇವ ಸ್ವಾಮೀಜಿ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ : ಮಧುವನಹಳ್ಳಿ ಉಪ್ಪಾರ ಅಭಿವೃದ್ಧಿ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಶಿವಕುಮಾರ್, ಪ್ರಾಥಮಿಕ ಭಾಷಣ: ಹಿರಿಯ ಕಾರ್ಮಿಕ ಆಯುಕ್ತ ಸುಲ್ತಾನ್ ಬೇಗಂ, ಕ್ಯಾಲೆಂಡರ್ ಬಿಡುಗಡೆ: ಕಾರ್ಮಿಕ ಆಯುಕ್ತ ರಾಜೇಶ್ ಕೆ.ಜಾದವ್, ಸಂಘದ ಅಧ್ಯಕ್ಷ ಕೆ.ಪ್ರಕಾಶ್‌ಶೆಟ್ಟಿ, ಪುಸ್ತಕ ವಿತರಣೆ: ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ಕೆ.ಗಿರೀಶ್ ಉಪ್ಪಾರ, ಮುಖ್ಯ ಅತಿಥಿಗಳು: ಕೆ.ಎಂ. ಶಿವಕುಮಾರಸ್ವಾಮಿ, ಶ್ರೀನಿವಾಸ್, ಕಳಕಪ್ಪ, ಬಂಡಿ, ಶಿರ್ಕೋಳ್, ನರಸಿಂಹಮೂರ್ತಿ, ಸ್ಥಳ: ಶ್ರೀ ಭಗೀರಥ ಭವನ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ಬೇಸಿಕ್ ಬಿಎಸ್‌ಸಿ ನರ್ಸಿಂಗ್ 23ನೇ ಬ್ಯಾಚ್, ಪಿಬಿಬಿಎಸ್‌ಸಿ ನರ್ಸಿಂಗ್‌ನ 18ನೇ ಬ್ಯಾಚ್ ಹಾಗೂ ಎಂಎಸ್ಸಿ ನರ್ಸಿಂಗ್ 17ನೇ ಬ್ಯಾಚ್‌ನ ಪದವಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಮುಖ್ಯ ಅತಿಥಿಗಳು: ಮಣಿಪಾಲ್ ನರ್ಸಿಂಗ್ ಕಾಲೇಜಿನ ಉನ್ನತ ಶಿಕ್ಷಣದ ಶೈಕ್ಷಣಿಕ ಡೀನ್ ಡಾ. ಜೂಡಿತ್ ಏಂಜಲಿಟ್ಟ ನೋರೊನ್ಹಾ, ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಪ್ರೊ.ಎಂ.ಕೆ.ಅಶ್ವತಿದೇವಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 3ಕ್ಕೆ.



## ಇಂದಿನ ಪಂಚಾಂಗ


**5.1.2024 ಶುಕ್ರವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 10.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ**

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ:** ಶುಕ್ರವಾರದ ಉಪನ್ಯಾಸ ಮಾಲಿಕೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ವಿಜಯಕುಮಾರಿ ಎಸ್.ಕರಿಕಲ್ ಅವರಿಂದ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಂ.ಚಂದ್ರಶೇಖರ, ಸ್ಥಳ: ಡಾ.ಎಸ್.ಆರ್.ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಗೋಪಾಲಸ್ವಾಮಿ ಸ್ವತಂತ್ರ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ (ಪ್ರೌಢಶಾಲಾ ವಿಭಾಗ), ಮುಖ್ಯ ಅತಿಥಿಗಳು: ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಅಧ್ಯಕ್ಷತೆ: ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್. ಮುರಳಿ, ಉಪಸ್ಥಿತರು: ಶಿಶುವಿಹಾರ ಅಧ್ಯಕ್ಷ ಡಾ. ಎ.ಎಸ್.ಚಂದ್ರಶೇಖರ್, ಎನ್.ಅನಂತರಾಮ್, ಎನ್.ಸಿ.ಶೆಲ್ಲಮಳ್ಳೆ, ಎಂ. ನಂದಕುಮಾರ್, ಮಹೇಶ್ ಎನ್. ಅರಸ್, ಭ್ರಮರಾಮೂರ್ತಿ, ಕೆ.ರಾಜಶೇಖರ್, ಸ್ಥಳ: ಸ್ವಾಮಿ ವಿವೇಕಾನಂದ ರಂಗ ಮಂಟಪ, ಸಂಸ್ಥೆ ಆವರಣ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಕಲ್ಲಾಪುರ ಪವಮಾನಾಚಾರ್ಯರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 8.30 ಆರೋಗ್ಯಧಾರೆ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಪಿ.ಸುರಭಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಬಾಂಬೆ ಸಹೋದರಿಯರು–ಹಾಡುಗಾರಿಕೆ, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ–ಭಾರತಿ, 4.30 ವೃತ್ತಿ ಮಾರ್ಗದರ್ಶನ–ಡಾ.ಬಿ.ಆರ್.ಅಂಬೇಡ್ಕರ್ ಸ್ಟಡೀಸ್ ಮತ್ತು ಬುದ್ದಿಸ್ಟ್ ಸ್ಟಡೀಸ್ ವಿಷಯದಲ್ಲಿರುವ ಅಧ್ಯಯನ ಅವಕಾಶಗಳು ಕುರಿತು ಪ್ರೊ.ಜೆ.ಸೋಮಶೇಖರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ, 8.00 ವನ್ಯಜೀವಿ ಚರ್ಮ ಪ್ರಸಾದನ ಕಲೆಯಲ್ಲಿ ತೊಡಗಿಸಿಕೊಂಡಿರುವ ಬಿ.ಆರ್.ಮನೋಹರ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಶಾಂತಕುಮಾರ್, 9.30 ಅಂಗಾಮಲ್ಯೆ ಕೆ.ಜೆ.ಜೋಸ್–ದಿಲ್ ರುಬ, 10.00 ಹಳ್ಳಿಹಾಡು–ಭಾಗವಹಿಸುವವರು ಡಾ.ಮಳವಳ್ಳಿ ಮಹದೇವಸ್ವಾಮಿ

■ **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮಹಾರಾಜ ಕಾಲೇಜು ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ ಅವರಿಂದ ಭಾರತ ಸಂವಿಧಾನದ ಪ್ರಸ್ತಾವನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಸರ್ಕಾರಿ ವೈದ್ಯಕೀಯ ಮತ್ತು ತಾಂತ್ರಿಕ ಬಾಲಕರ ವಿದ್ಯಾರ್ಥಿನಿಲಯ ನಿಲಯಪಾಲಕ ಎಸ್.ಮಹೇಶ್, ಸ್ಥಳ: ಸರ್ಕಾರಿ ವೈದ್ಯಕೀಯ ಮತ್ತು ತಾಂತ್ರಿಕ ಬಾಲಕರ ವಿದ್ಯಾರ್ಥಿ ನಿಲಯ, ಬೋಗಾದಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.45ರಿಂದ.

■ **ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ :** 9ನೇ ವಾರ್ಷಿಕ ಸಮ್ಮೇಳನ, ಬೆಳಗ್ಗೆ 10.30ರಿಂದ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ವಾರ್ಷಿಕ ಸಭೆ, ಸ್ಥಳ: ಶ್ರೀರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣನಗರ; ಮಧ್ಯಾಹ್ನ 3ಕ್ಕೆ ಶೋಭಯಾತ್ರೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಆದಿಚುಂಚನಗಿರಿ ಸಂಸ್ಥಾನ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ರಾಮಕೃಷ್ಣ–ವಿವೇಕಾನಂದ ಆಶ್ರಮ, ತುಮಕೂರಿನ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತೀ, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮಾಜಿ ನಗರಪಾಲಿಕೆ ಸದಸ್ಯ ನಾಗಭೂಷಣ್, ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ನರಹರಿಬಾಬು, ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಸ್ಥಳ: ಸದ್ವಿದ್ಯಾ ಶಾಲೆ ಸಭಾಂಗಣ; ಸಂಜೆ 4 ರಿಂದ ಸ್ವಾಮಿ ವಿವೇಕಾನಂದರ ಶೋಭಾಯಾತ್ರೆ, ಸಂಜೆ 6ಕ್ಕೆ ವಿದ್ವಾನ್ ಶ್ರೀ ಗುರುರಾಜ್ ಮತ್ತು ತಂಡದಿಂದ ಭಜನೆ, ಸಂಜೆ 6.45ಕ್ಕೆ ಭಕ್ತ ಸಮ್ಮೇಳನದ ಉದ್ಘಾಟನಾ ಸಮಾರಂಭ, ರಾತ್ರಿ 7ಕ್ಕೆ ಸ್ವಾಮಿ ಗಿರಿಜಾತ್ಮಾನಂದಜೀ ಮಹಾರಾಜ್ ಅವರಿಂದ ಆರಾತ್ರಿಕ ಮತ್ತು ಭಜನೆ, ರಾತ್ರಿ 7.20ಕ್ಕೆ ವೇದಿಕೆ ಕಾರ್ಯಕ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಕರ್ನಾಟಕ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಸಮ್ಮುಖ: ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್, ಸ್ವಾಮಿ ಬೋಧಸ್ವರೂಪಾನಂದಜೀ ಮಹಾರಾಜ್, ಸ್ವಾಮಿ ಪ್ರಕಾಶಾನಂದಜೀ ಮಹಾರಾಜ್, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ತಿನ ಮಾಜಿ ಸದಸ್ಯ ಡಿ. ಮಾದೇಗೌಡ, ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಮಾಜಿ ಶಾಸಕ ವಾಸು, ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ.

■ **ನಾಟ್ಯಾಲೇಖ ರಂಗಸಮೂಹ, ರಂಗವಲ್ಲಿ ಸಂಸ್ಥೆ:** ನಿನಾಸಂ ತಿರುಗಾಟ ನಾಟಕಗಳ ನಾಟ್ಯರಂಗ ಉತ್ಸವ, ಚಾಲನೆ: ಕಲಾವಿದ ಕೃಷ್ಣಕುಮಾರ್ ನಾರ್ಣಕಜೆ, ನಾರ್ಣಕಜೆ ಮತ್ತು ಫಯಾಜ್ ಅವರಿಗೆ ರಂಗಗೌರವ ಸಮರ್ಪಣೆ, ಆರ್.ಸಿ.ಧನಂಜಯ ಅವರಿಂದ ಗೀತಗಾಯನ, ಉಪಸ್ಥಿತರು: ಲೇಖಕಿ ಸಬಿಹಾ ಭೂಮಿಗೌಡ, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಸಂಜೆ 7ಕ್ಕೆ ಚಂದ್ರಶೇಖರ ಕಂಬಾರ ರಚನೆಯ ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದ 'ಹುಲಿಯ ನೆರಳು' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ.

## ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

## ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನಾ ವ್ಯಾಯಾಮ ಮಾಡಬೇಕು

ಸರ್ದಾರ್ : ನಾನು ದಿನಾ ಫುಟ್‌ಬಾಲ್, ಟೆನ್ನಿಸ್, ಕ್ರಿಕೆಟ್ ಆಡ್ತಿನಿ ಸಾರ್.

ಡಾಕ್ಟರ್ : ಗುಡ್, ಎಲ್ಲಿ ಆಡ್ತೀರಾ?

ಸರ್ದಾರ್ : ಮೊಬೈಲ್‌ನಲ್ಲಿ ಸಾರ್?!

ಮೈಸೂರು ಮಿತ್ರ

ಶುಕ್ರವಾರ, 5 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಸಾಹಿತ್ಯ, ಸಂಸ್ಕೃತಿಗಳ ಒಲವಿಲ್ಲದ ಜನರು ಸುಖ, ಸಂತೋಷಗಳಿಂದ ಜೀವಿಸಲಾರರು –ಬರ್ನಾಡ್ ಷಾ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಅಜೀರ್ಣಕ್ಕೆ ಔಷಧಿ ತಗೊಂಡ್ರೆ ಔಷಧೀನೇ ಜೀರ್ಣವಾಗಲಿಲ್ಲ

## ನಿಮ್ಮ ಪತ್ರಗಳು

### ಬನ್ನಿ ನಮ್ಮ ಮಾತೃ ಭಾಷೆ ಮಾತಾಡೋಣ

ಮಾನ್ಯರೆ,

ಮೊದಲಿಗೆ ಕನ್ನಡಾಭಿಮಾನ ಹೊಂದಿರುವ ನಾಡಿನ ಹೆಮ್ಮೆಯ ಪೂಜ್ಯ ಕನ್ನಡಿಗರಿಗೆ ನನ್ನ ನಮನಗಳು. ಜೀವನೋಪಾಯದ ಹಾದಿ ಹಿಡಿದು ನಮ್ಮ ರಾಜ್ಯಕ್ಕೆ ಬಂದಿರುವ ಹೊರ ರಾಜ್ಯದ ಕಾರ್ಮಿಕರೊಡನೆ ನಾವು ಕನ್ನಡದಲ್ಲಿ ಮಾತಾಡದೆ ಅವರ ಭಾಷೆಯನ್ನೇ ನಾವು ಕಲಿತು ಅವರಿಗೆ ನಮ್ಮ ಭಾಷೆಯ ಕಲಿಯುವ ಅರಿವು ಮೂಡಿಸುತ್ತಿಲ್ಲ. ಕನ್ನಡ ಭಾಷೆಯನ್ನು ಕಲಿಸಿ ಮಾತನಾಡಿ ಅನ್ನುವುದಕ್ಕಿಂತ ಮೊದಲು ಈ ಪುಣ್ಯಭೂಮಿಯಲ್ಲಿ ಜನಿಸಿರುವಂತಹ ಕನ್ನಡಿಗರಾದ ನಾವುಗಳೇ ಮೊದಲು ಕನ್ನಡ ಭಾಷೆಯನ್ನು ಬಳಸಬೇಕು.

ನಮ್ಮ ಕನ್ನಡ ನಾಡು–ನುಡಿಗೆ ಜೀವ ತೆತ್ತಂತಹ ಹಲವಾರು ವೀರ ಶೂರರ ಗುರಿಯು ಮತ್ತು ಮನದ ಆಸೆ ಒಂದೇ ಆಗಿತ್ತು. ಅನೇಕ ಗಣ್ಯಾತಿಗಣ್ಯರು ಕನ್ನಡ ನೆಲಕ್ಕಾಗಿ ಕನ್ನಡ ಭಾಷೆಗಾಗಿ ತಮ್ಮ ಜೀವನವನ್ನೇ ಸಮರ್ಪಣೆಗೈದಿದ್ದಾರೆ. ಅವರು ನೀಡಿರುವಂತಹ ಭವ್ಯವಾದ ಕ್ರಿಯಾಶೀಲವಾದ ಕರುನಾಡನ್ನು ನಾವು ಉಳಿಸಬೇಕಿಲ್ಲ. ಏಕೆಂದರೆ ನಮಗೆ ಯಾರ ಭಯವೂ ಇಲ್ಲ.

ಕಲೆ–ಸಾಹಿತ್ಯ ಸಂಸ್ಕೃತಿಗೆ ಮತ್ತೊಂದು ಹೆಸರು ನಮ್ಮ ಭಾರತದ ಸ್ವರ್ಗದ ಬೀಡು ಹಚ್ಚಸಿರ ವನಸಿರಿ ನಾಡು ನಮ್ಮ ಕರುನಾಡು. ಅನೇಕ ತಲೆಮಾರುಗಳಿಂದ ವಚನಕಾರರು, ಸಾಹಿತ್ಯಗಾರರು, ಕವಿಗಳು, ಜನಪದ ಕಲಾವಿದರು ತಮ್ಮ ಕಲಾ ಚಾತುರ್ಯದಿಂದ ದಿವ್ಯ ಸಂದೇಶ ಮತ್ತು ಕರುನಾಡಿನ ಸೊಬಗನ್ನು ಹಾಡಿ, ಬರೆದು ನಮಗೆ ತಿಳಿಸಿದ್ದಾರೆ. ಕನ್ನಡ ಭಾಷೆಗೆ ಶ್ರೇಷ್ಠ ಪ್ರಶಸ್ತಿಗಳ ಕಿರೀಟವನ್ನು ಕನ್ನಡ ತಾಯಿಯ ಮುಡಿಗೆ ಅರ್ಪಿಸಿದ್ದಾರೆ. ಶಿಕ್ಷಣ, ಕ್ರೀಡಾ ಮುಂತಾದ ಆರ್ಥಿಕ ಚಟುವಟಿಕೆಗಳ ಕ್ಷೇತ್ರದಲ್ಲಿ ನಮ್ಮ ನಾಡಿಗೆ ತಮ್ಮ ಚಾಣಾಕ್ಷತನದಿಂದ ಕರುನಾಡ ಹಿರಿಮೆಯನ್ನು ಮುಗಿಲು ಮುಟ್ಟುವ ಹಾಗೆ ಉತ್ತುಂಗಕ್ಕೇರಿಸಿದ್ದಾರೆ. ಎಲ್ಲಾ ಕನ್ನಡದ ಕಣ್ಮಣಿಗಳು ನೀಡಿರುವ ಸಿರಿಗನ್ನಡವನ್ನು ನಾವೇನು ಬೆಳಸಬೇಕಿಲ್ಲ. ಬದಲಿಗೆ ಅವರು ನೀಡಿದ ಲಿಪಿಗಳ ರಾಣಿ ಎಂದೇ ಕರೆಯಲ್ಪಡುವ ಕನ್ನಡವನ್ನು ನಾಭಿಯಿಂದ ಎಳೆದು ಸ್ವಚ್ಛಂದ ಮನಸ್ಸಿನಿಂದ ಉಚ್ಛ್ವಾಸದಿಂದ ಉಚ್ಚರಿಸಿದರೆ ಸಾಕು. ಕನ್ನಡ ಭಾಷೆಯೂ ನಮ್ಮ ಭೂಮಂಡಲದಲ್ಲಿ ಸೂರ್ಯ– ಚಂದ್ರರಿರುವರೆಗೂ ಗಿರಿಗೋಪುರ ಶಿಖರಗಳಲ್ಲಿ ಹರಿಯುವ ಪರಿಶುದ್ಧವಾದ ನದಿಗಳಲ್ಲಿ ಕನ್ನಡ ಭಾಷೆ ನರ್ತಿಸುತ್ತಾ ಝೇಂಕರಿಸುತ್ತಲೇ ಇರುತ್ತದೆ. ದಯವಿಟ್ಟು ಕನ್ನಡ ಭಾಷೆಯನ್ನು ಉಳಿಸಬೇಕಿಲ್ಲ, ಬೆಳಸಬೇಕಿಲ್ಲ ನಿಮ್ಮ ಮಗುವಿನ ಮನಸ್ಸಿಂದ ವರ್ಣಮಾಲೆಯಿಂದ ರಂಜಿತವಾಗಿರುವ ನಮ್ಮ ಮಾತೃ ಭಾಷೆಯಾದ ಕನ್ನಡ ಭಾಷೆಯನ್ನು ಬಳಸಿ.

**–ಜಿ. ಸೂರ್ಯಕುಮಾರ್, ಜನಪದ ಕಲಾವಿದರು, ಮಾವಿನಹಳ್ಳಿ**

### ಹೇಳುವವರು– ಕೇಳುವವರಿಲ್ಲದ ಎಟಿಎಂ?




ಮಾನ್ಯರೆ,

ಮೈಸೂರಿನ ಚಾಮರಾಜಪುರಂ ಜಯಲಕ್ಷ್ಮಿ ವಿಲಾಸ ರಸ್ತೆಯಲ್ಲಿರುವ ಎಟಿಎಂ ಇದು. ಕಳೆದ ತಿಂಗಳು ನಾಲ್ಕು ದಿವಸ ಆಫ್‌ಲೈನ್ ಆಗಿದ್ದು ಈಗ ಆರು ದಿವಸಗಳಿಂದ ಮತ್ತೆ ಆಫ್‌ಲೈನ್ ಆಗಿದ್ದು ಬ್ಯಾಂಕ್ ಗ್ರಾಹಕರಿಗೆ ಅದರಲ್ಲೂ ವಿಶೇಷವಾಗಿ ಹಿರಿಯ ನಾಗರಿಕರಿಗೆ ಬಹಳ ತೊಂದರೆಯಾಗುತ್ತಿದೆ. ಬ್ಯಾಂಕಿನ ಸಿಬ್ಬಂದಿಗೆ ವಿಚಾರ ತಿಳಿಸಿದರೂ ಏನೂ ಕ್ರಮ ತೆಗೆದುಕೊಳ್ಳದಿರುವುದು ಆಕ್ಷೇಪಾರ್ಹವಾಗಿದೆ. ಬ್ಯಾಂಕಿನ ಹಿರಿಯ ಅಧಿಕಾರಿಗಳು ಈ ಬಗ್ಗೆ ಗಮನಹರಿಸುವರೇ?

**–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.**

### ಸಂತ ಎಂಬ ಪದಕ್ಕೆ ನಿಜವಾದ ರೂಪ ಕೊಟ್ಟವರು ಸಿದ್ದೇಶ್ವರ ಸ್ವಾಮಿಗಳು



ಮಾನ್ಯರೆ,

ಡಾ.ಹೆಚ್.ವಿ ನಾಗರಾಜರಾವ್ ಅವರ 'ನಾನು ಕಂಡ ಸ್ಥಿತಪ್ರಜ್ಞ ಸಿದ್ದೇಶ್ವರ ಸ್ವಾಮಿಗಳು' ಲೇಖನ ಸ್ವಾಮಿಗಳ ವ್ಯಕ್ತಿತ್ವದ ಸಮಗ್ರ ಮಾಹಿತಿಯಿಂದ ಕೂಡಿದ ಉತ್ತಮ ಲೇಖನವಾಗಿತ್ತು. ರಾಜಕೀಯದವರೊಂದಿಗೆ ಸಂಬಂಧಗಳನ್ನು ಹೊಂದುವುದು, ಆಸ್ತಿ ಮಾಡುವುದು, ಜಾತಿ ರಾಜಕಾರಣ ಮಾಡುವುದು, ಲಾಬಿ ಮಾಡಿ ಪ್ರಶಸ್ತಿಗಳನ್ನು ಪಡೆಯುವುದು ಮಾಡದೇ ನಿಸ್ವಾರ್ಥವಾಗಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಸಿದ್ದೇಶ್ವರ ಸ್ವಾಮೀಜಿ ಅವರು 'ಸಂತ' ಎಂಬ ಪದಕ್ಕೆ ನಿಜವಾದ ಅರ್ಥ ಕಲ್ಪಿಸಿದವರು.

**–ರಾಘವೇಂದ್ರ ಜೋಯಿಸ್, ಮೈಸೂರು**

### ಕರ ಸೇವಕರ ಬಂಧನ, ಬಿಜೆಪಿಗೆ ಚುನಾವಣಾ ಆಹಾರ

ಮಾನ್ಯರೆ.

ಕಾಕತಾಳೀಯ ಎಂಬಂತೆ ಅಯೋಧ್ಯೆಯ ರಾಮಮಂದಿರ ಉದ್ಘಾಟನಾ ಸಮಯದಲ್ಲೇ ಮೂವತ್ತು ವರ್ಷದ ಹಳೆಯ ಪ್ರಕರಣದಲ್ಲಿ ಕರಸೇವಕರ ಬಂಧನವಾಗಿರುವುದು ಬಿಜೆಪಿಗೆ ಆಹಾರವಾಗಿದ್ದು, ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ.

ಪ್ರಕರಣದ ವಾಸ್ತವಾಂಶ ಜನತೆ ಅರಿತರೆ ಒಳ್ಳೆಯದು. ರಾಜಕಾರಣಿಗಳು ಏನಾದರು ಹೇಳಿಕೊಳ್ಳಲಿ. ಇದು ಕಾಂಗ್ರೆಸ್‌ನ ಷಡ್ಯಂತರವಲ್ಲ. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಸರ್ಕಾರಕ್ಕೆ ಸೂಚನೆ ನೀಡಿದೆ. ಈ ವಿಚಾರವಾಗಿ ಸರ್ಕಾರದ ಅಧೀನ ಕಾರ್ಯದರ್ಶಿಯವರಿಗೂ ನೋಟಿಸ್ ಜಾರಿಯಾಗಿದೆ. ಅದರಂತೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ ಅಷ್ಟೇ. ಬಂಧನದಿಂದ ಕಾಂಗ್ರೆಸ್‌ಗೆ ಏನೂ ಲಾಭವಿಲ್ಲ. ಬಿಜೆಪಿಗೆ ಬಂಡವಾಳವಾಗಿರುವುದು ಸುಳ್ಳಲ್ಲ. ಕೆಲವರು ಎಸ್‌ಡಿಪಿಐ ಇನ್ನಿತರ ಸಂಘಟನೆಯ ಕೇಸ್‌ಗಳನ್ನು ಸರ್ಕಾರ ವಾಪಸ್ ಪಡೆದಿದೆ. ರಾಮ ಭಕ್ತರನ್ನು ಮಾತ್ರ ಬಂಧಿಸುತ್ತಿದೆ ಎಂದು ಆರೋಪಿಸುತ್ತಿದ್ದಾರೆ. ಈಗ ಆರೋಪಿಸುವ ಬದಲು ಬಿಜೆಪಿ ಸರ್ಕಾರ ಆಡಳಿತದ ಅವಧಿಯಲ್ಲಿ ಈ ಕೇಸ್‌ಗಳನ್ನು ವಾಪಸ್ ಪಡೆಯಬಹುದಿತ್ತಲ್ಲವೆ? ಅದನ್ನು ಬಿಜೆಪಿ ಸರ್ಕಾರ ಏಕೆ ಮಾಡಲಿಲ್ಲ. ಈಗ ಎಲ್ಲಿಲ್ಲದ ಪ್ರೀತಿ ತೋರಿಸುತ್ತಿರುವುದಾದರೂ ಏಕೆ ಎಂಬುದನ್ನು ಜನತೆ ಅರಿತರೆ ಯಾವುದೇ ಕೋಮು ಸಂಘರ್ಷಕ್ಕೆ ಎಡೆ ಮಾಡಿಕೊಡುವುದಿಲ್ಲ. ರಾಜಕಾರಣಿಗಳಿಗೆ ಜಾತಿ, ಧರ್ಮದ ಹೆಸರಿನಲ್ಲಿ ವಿಷಬೀಜ ಬಿತ್ತಿ ವಿವಾದ ಸೃಷ್ಟಿಸಿ ತಾವು ಗೆಲ್ಲುವುದೇ ಅವರ ಗುರಿ. ಇದಕ್ಕೆ ಬಲಿಯಾಗುವುದು ಕಾರ್ಯಕರ್ತರೆ ವಿನಾ ನಾಯಕರಲ್ಲ. ಎಲ್ಲಾ ಪಕ್ಷದ ನಾಯಕರು ಅಭಿವೃದ್ಧಿ ವಿಚಾರ ಇಟ್ಟುಕೊಂಡು ಚುನಾವಣೆಗೆ ಬನ್ನಿ, ಜಾತಿ ಧರ್ಮವನ್ನಲ್ಲ.

**–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ**

## ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

# ಹೊಸ ವರ್ಷದ ಸಂಕಲ್ಪ ರೂಢಿಸಿಕೊಂಡರೆ ಬದುಕು ಸುಂದರ




> “ಒಂದು ಅಧ್ಯಯನದ ಪ್ರಕಾರ, ಪ್ರತಿ ವರ್ಷ ಜನವರಿ 1ರಂದು ಶೇಕಡಾ 90ರಷ್ಟು ಜನ ಹೊಸ ವರ್ಷದಂದು ಏನಾದರೊಂದು ಸಂಕಲ್ಪವನ್ನು ಕೈಗೊಳ್ಳುತ್ತಾರೆ. ಅದರಲ್ಲಿ ಶೇಕಡಾ 35ರಷ್ಟು ಜನ ಯಶಸ್ವಿಯಾಗುವುದಿಲ್ಲ, ಶೇಕಡಾ 23ರಷ್ಟು ಜನ ಏನು ಸಂಕಲ್ಪ ಮಾಡಿಕೊಂಡಿದ್ದೆವು ಎನ್ನುವುದನ್ನೇ ಮರೆತುಬಿಡುತ್ತಾರಂತೆ. ಸಂಕಲ್ಪಗಳನ್ನು ತೆಗೆದುಕೊಳ್ಳುವುದು ಸುಲಭವೇ, ಆದರೆ ಅದಕ್ಕೆ ಬದ್ಧರಾಗಿರುವುದರಲ್ಲಿ ನಮ್ಮ ಆತ್ಮವಿಶ್ವಾಸ, ದೃಢಚಿತ್ತ, ಅವಶ್ಯಕತೆ, ಅನಿವಾರ್ಯತೆಗಳು ಕೆಲಸ ಮಾಡುತ್ತವೆ.

ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ಈ ಬಾರಿ 2024 ಬೇಗನೇ ಬಂದಿತೆಂಬ ಭಾವ ಪ್ರತಿಬಾರಿ ಅನ್ನಿಸುವಂತೆ ಬಹುತೇಕ ಎಲ್ಲರನ್ನೂ ಆವರಿಸಿದೆ. 2022ರಿಂದ ಇನ್ನೂ ಈಗಲೂ 2023ರದ್ದೇ ದಿನಾಂಕ ನಮೂದಿಸುವ ಅಭ್ಯಾಸ ತಪ್ಪಿಹೋಗಿಲ್ಲ ಎನ್ನುವಷ್ಟರಲ್ಲಿಯೇ, 2024 ಬಂದೇ ಬಿಟ್ಟಿತು ಎನ್ನಿಸುತ್ತಿದೆ. ಪ್ರತೀ ವರ್ಷವೂ ಹೀಗನ್ನಿಸುವುದು ಸಹಜವೇ, ಈ ಬಾರಿ ಸ್ವಲ್ಪ ಹೆಚ್ಚು.

ಹೊಸ ವರ್ಷ ಎಂದಾಕ್ಷಣ ಕ್ಯಾಲೆಂಡರ್‌ನ ಜೊತೆಗೆ ಎಲ್ಲ ಬದಲಾಗುತ್ತದೆ ಎಂಬ ಭಾವ ನಮ್ಮದು. ಹೊಸ ವರ್ಷದೊಂದಿಗೆ ತಳುಕು ಹಾಕಿಕೊಳ್ಳುವ ನಮ್ಮ ಜೀವನದ ನಿರ್ಧಾರಗಳು ಹಲವು. ಹೊಸವರ್ಷದಿಂದ ಇದು ಮಾಡುತ್ತೇನೆ, ಅದು ಮಾಡುತ್ತೇನೆ, ಇದು ಬಿಡುತ್ತೇನೆ, ಅದರ ರೂಢಿ ಮಾಡಿಕೊಳ್ಳುತ್ತೇನೆ? ಹೀಗೆ ಪ್ರತಿ ಹೊಸವರ್ಷದಲ್ಲೂ ಹೊಸ ಸಂಕಲ್ಪ ತೆಗೆದುಕೊಳ್ಳುವ ನಿರ್ಧಾರ, ನಿರ್ಧಾರ ಪಾಲಿಸುವ ನಿರ್ಧಾರ ನಿರ್ಧಾರದಂತೆ ನಡೆದಿರುತ್ತದೆ! ಆದರೆ ಎಷ್ಟನ್ನು ಪೂರೈಸುತ್ತೇವೆ, ಎಷ್ಟನ್ನು ಕನಿಷ್ಠ ಆರಂಭವಾದರೂ ಮಾಡುತ್ತೇವೆ, ಎಷ್ಟನ್ನು ಮರೆತೇ ಬಿಡುತ್ತೇವೆ ಎನ್ನುವುದನ್ನು, ಯಾರೂ ಕೇಳಬಾರದು!

ಈ ಹೊಸ ವರ್ಷದ ಸಂಕಲ್ಪ, ಅಂದರೆ, New Year Resolution, ನಾವು ಇತ್ತೀಚೆಗೆ ರೂಢಿ ಮಾಡಿಕೊಂಡಿದ್ದಲ್ಲ. ಇತ್ತೀಚೆಗೆ ಅದರ ಭರಾಟೆ ಹೆಚ್ಚಾಗಿದೆಯಷ್ಟೇ. ಆದರೆ, ಇದು ಸಾವಿರಾರು ವರ್ಷಗಳಿಂದಲೇ ಚಾಲ್ತಿಯಲ್ಲಿತ್ತು ಎನ್ನುವುದು ನಿಮಗೆ ತಿಳಿದರೆ ಆಶ್ಚರ್ಯವಾದೀತು.

ಹೌದು, 4000 ವರ್ಷಗಳ ಹಿಂದೆಯೇ ಬ್ಯಾಬಿಲೋನಿಯನ್ನರು ಹೊಸ ವರ್ಷದ ಸಂಭ್ರಮಾಚರಣೆಯನ್ನು ಅಕಿಟು ಎಂಬ ಹೆಸರಿನಲ್ಲಿ, 12 ದಿನಗಳ ಕಾಲ ವೈಭವದಿಂದ ಮಾಡುತ್ತಿದ್ದರು. ಬ್ಯಾಬಿಲೋನಿಯನ್ನರ ಹೊಸ ವರ್ಷ ಮಾರ್ಚ್‌ನಲ್ಲಿ ಪ್ರಾರಂಭವಾಗುತ್ತಿದ್ದರಿಂದ, ಈ ಸಮಯದಲ್ಲಿ ತಮ್ಮ ದೇವರುಗಳ ಮೆರವಣಿಗೆ ಮಾಡಿ, ಪೂಜಿಸುತ್ತಿದ್ದರು. ರಾಜನಿಗೆ ಕಾಣಿಕೆಗಳನ್ನು ಸಲ್ಲಿಸಿ ತಮ್ಮ ಪ್ರೀತಿ ಮತ್ತು ನಿಷ್ಠೆಯನ್ನು ತೋರುತ್ತಿದ್ದರು. ವರ್ಷದ ಈ ಆರಂಭ ಕಾಲದಲ್ಲಿ, ಹಳೆಯ ಸಾಲವನ್ನು ತೀರಿಸುವ ಪ್ರತಿಜ್ಞೆ ಮಾಡುತ್ತಿದ್ದರು. ಹೊಸವರ್ಷದ ಸಂದರ್ಭದಲ್ಲಿ ಕೈಗೊಂಡ ಸಂಕಲ್ಪಗಳನ್ನು ಪೂರೈಸಿದರೆ ದೈವ ಮುನಿಯುವುದಿಲ್ಲವೆಂಬುದು ಅವರ ನಂಬಿಕೆಯಾಗಿತ್ತು.

ನಂತರ ಪ್ರಾಚೀನ ರೋಮನ್ನರೂ ಹೊಸವರ್ಷದ ಆಚರಣೆಯ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದರು. ಮಾರ್ಚ್ 15ರಂದು ಆಚರಿಸುತ್ತಿದ್ದ, ಐಡ್ಸ್ ಆಫ್ ಮಾರ್ಚ್ (ಜೂಲಿಯಸ್ ಸೀಝರನ ಹತ್ಯೆ ಅಂದೇ ಆಗಿದ್ದು) ಅವರ ಹೊಸವರ್ಷವಾಗಿತ್ತು. ಅಂದೇ ಇಟಲಿಯ ದೇವತೆ ಅನ್ನಾ ಪೆರೆನಾಳ ಆರಾಧನೆಯನ್ನೂ ಮಾಡಿ ವಸಂತವನ್ನು ಸ್ವಾಗತಿಸುತ್ತಿದ್ದರು. ಅಂದೇ ರೋಮ್‌ನ ಕಾನ್ಸುಲೇಟ್‌ನ ಮುಖ್ಯ ನಿರ್ಧಾರಗಳು ಪ್ರಕಟಗೊಳ್ಳುತ್ತಿದ್ದವು ಮತ್ತು ಅವರೆಲ್ಲರೂ ದೇಶದ ಒಳಿತಿಗಾಗಿ ಪ್ರತಿಜ್ಞೆಗೈಯ್ಯುತ್ತಿದ್ದರು.

ಜೂಲಿಯಸ್ ಸೀಝರ್ ಜನವರಿ 1ನ್ನು ಹೊಸವರ್ಷದ ಮೊದಲ ದಿನ ಎಂದು ನಿಗದಿ ಮಾಡಿದ ಮೇಲೆ, ರೋಮನ್ನರು ಜನವರಿ 1ನ್ನು ಹೊಸವರ್ಷದ ಮೊದಲ ದಿನವಾಗಿ ಆಚರಿಸುವ ಸಂಪ್ರದಾಯವನ್ನು ಹುಟ್ಟು ಹಾಕಿದರು. ರೋಮನ್ ದೇವತೆ ಜೇನಸ್‌ನ ಗೌರವಾರ್ಥ ಜನವರಿ ಎಂದು ತಿಂಗಳಿಗೆ ನಾಮಕರಣ ಮಾಡಿದ ಸೀಝರ್, ಜೇನಸ್‌ಗೆ ಬಲಿ ನೀಡಿ ಪೂಜೆಗೈಯ್ಯುತ್ತಿದ್ದ. ಅಂದು ದೇವರ ಹೆಸರಿನಲ್ಲಿ ರಾಜ್ಯದ ಒಳಿತಿಗಾಗಿ, ರಾಜನಿಷ್ಠೆಯನ್ನು ಕಾಪಾಡಿಕೊಂಡು ಹೋಗುವುದಕ್ಕಾಗಿ ಎಲ್ಲರೂ ಪ್ರಮಾಣಗಳನ್ನು ಮಾಡುತ್ತಿದ್ದರು. ಇದು ಧಾರ್ಮಿಕ ಆಚರಣೆಯಂತೆ ಕಂಡರೂ ಇದಕ್ಕೆ. ಸಾಮಾಜಿಕ, ರಾಜಕೀಯ ಮುಖಗಳಿದ್ದವು.

ಜೂಡಾಯಿಸಮ್‌ನಲ್ಲಿ ಕೂಡ ಹೊಸ ವರ್ಷದಂದು, ಶತ್ರುಗಳನ್ನು ಕ್ಷಮಿಸುವ, ಕೆಟ್ಟ ಸಂಗತಿಯನ್ನು ಮರೆಯುವ ಸಂಕಲ್ಪ ಮಾಡುತ್ತಿದ್ದರು. ಜೊತೆಗೆ ಕಳೆದು ಹೋದ ವರ್ಷದಲ್ಲಿ ತಾವು ಮಾಡಿದ ತಪ್ಪುಗಳ ಅವಲೋಕನವನ್ನೂ ಮಾಡಿಕೊಳ್ಳುತ್ತಿದ್ದರು.

ನಂತರ, ಮಧ್ಯಯುಗದಲ್ಲಿ(500–1500), ರಾಜನ ಸೈನ್ಯದಲ್ಲಿದ್ದ ರಾವುತರು ಮತ್ತು ಅಶ್ವದಳದ ಸೈನಿಕರು ತಮ್ಮ ಶೌರ್ಯ ಮತ್ತು ರಾಜನಿಷ್ಠೆಯನ್ನು ಪ್ರತಿಪಾದಿಸುವುದಕ್ಕಾಗಿ ಪ್ರತಿ ಹೊಸವರ್ಷದ ಮೊದಲ ದಿನದಂದು ಸಂಕಲ್ಪ ಮಾಡುತ್ತಿದ್ದರು. ಅವರ ಪ್ರತಿಜ್ಞೆ ಮಾಡುವ ವೈಖರಿ ವಿಶೇಷವಾಗಿತ್ತು. ಜೀವಂತವಾಗಿರುವ ನವಿಲು ಅಥವಾ ಹುರಿದ ನವಿಲಿನ ಮಾಂಸದ ಮೇಲೆ ಕೈಯ್ಯಿರಿಸಿ ಪ್ರತಿಜ್ಞೆ ಮಾಡುತ್ತಿದ್ದರು. ಇದನ್ನು, The Vow of the Peacock ಅಥವಾ Pheasant ಎನ್ನುತ್ತಿದ್ದರು.

ಇನ್ನು ಆಧುನಿಕ ಯುಗದಲ್ಲಿ New Year Resolution ಹೆಚ್ಚು ಹೆಚ್ಚು ಪ್ರಸಿದ್ಧವೇ ಆಯಿತು ಎನ್ನಬಹುದು. 13ನೇ ಪೋಪ್ ಗ್ರೆಗೊರಿ, ಗ್ರೇಗೋರಿಯನ್ ಕ್ಯಾಲೆಂಡರ್ ಅನ್ನು 1582 ರಲ್ಲಿ ಅಧಿಕೃತವಾಗಿ ಜಾರಿ ಮಾಡಿದ ಮೇಲೆ, ಜನವರಿ 1 ಅಧಿಕೃತವಾಗಿ ಹೊಸವರ್ಷದ ಮೊದಲ ದಿನವಾಯಿತು. ಜಾತಿ ಪಂಥ ಧರ್ಮಗಳನ್ನು ಮೀರಿ, ಹೊಸವರ್ಷದ ಸಂಕಲ್ಪ ಕೈಗೊಳ್ಳುವುದಕ್ಕೆ ಜನರ ಮನೆ ಮನ ಮುಟ್ಟಿದವು.

ಈಗ ನಾವು ಬಳಸುವ The New Year Resolution ಎಂಬ ಪದಪುಂಜ ಮೊದಲ ಬಾರಿಗೆ ಬಳಕೆಯಾಗಿದ್ದು ಬೋಸ್ಟನ್ ದಿನಪತ್ರಿಕೆಯ 1813ರ ಜನವರಿ 1ರ ಸಂಚಿಕೆಯಲ್ಲಿ.

ಒಂದು ಅಧ್ಯಯನದ ಪ್ರಕಾರ, ಪ್ರತಿ ವರ್ಷ ಜನವರಿ 1ರಂದು ಶೇಕಡಾ 90ರಷ್ಟು ಜನ ಹೊಸ ವರ್ಷ ದಂದು ಏನಾದರೊಂದು ಸಂಕಲ್ಪವನ್ನು ಕೈಗೊಳ್ಳುತ್ತಾರೆ. ಅದರಲ್ಲಿ ಶೇಕಡಾ 35ರಷ್ಟು ಜನ ಯಶಸ್ವಿಯಾಗುವುದಿಲ್ಲ, ಶೇಕಡಾ 23ರಷ್ಟು ಜನ ಏನು ಸಂಕಲ್ಪ ಮಾಡಿಕೊಂಡಿದ್ದೆವು ಎನ್ನುವುದನ್ನೇ ಮರೆತುಬಿಡುತ್ತಾರಂತೆ. ಸಂಕಲ್ಪಗಳನ್ನು ತೆಗೆದುಕೊಳ್ಳುವುದು ಸುಲಭವೇ, ಆದರೆ ಅದಕ್ಕೆ ಬದ್ಧರಾಗಿರುವುದರಲ್ಲಿ ನಮ್ಮ ಆತ್ಮವಿಶ್ವಾಸ, ದೃಢಚಿತ್ತ, ಅವಶ್ಯಕತೆ, ಅನಿವಾರ್ಯತೆಗಳು ಕೆಲಸ ಮಾಡುತ್ತವೆ.

ಪ್ರತಿ ಹೊಸ ವರ್ಷಕ್ಕೆ ನಾವು ಮಾಡಲು ಶುರು ಹಚ್ಚಿಕೊಳ್ಳುತ್ತೇವೆ? ಎನ್ನುವ ಕೆಲಸಗಳು, ಅಸಲಿಗೆ ಬಹುತೇಕ ಅಂತಹಾ ಮುಖ್ಯವಾಗಿರುವುದಲ್ಲ. ಅವುಗಳ ಅಭ್ಯಾಸ, ರೂಢಿ ನಮಗಿಲ್ಲದಿದ್ದರೂ, ನಮ್ಮ ದೈನಂದಿನ ಜೀವನ ಸರಾಗವಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ನಮ್ಮ ದೈನಂದಿನ ಚಟುವಟಿಕೆಗಳು, ನಮಗೆ ಅನ್ನ ಕೊಡುವ ಕೆಲಸಗಳನ್ನು ಮಾಡುತ್ತಲೇ ಇರುತ್ತೇವೆ. ಏಳುವುದು, ಮನೆಕೆಲಸ ಮಾಡುವುದು, ಸ್ನಾನ ಮಾಡುವುದು, ಅಡುಗೆ ಮಾಡುವುದು, ಊಟ ಮಾಡುವುದು, ಕೆಲಸಕ್ಕೆ ಹೋಗುವುದು, ಅವಶ್ಯಕ ಮನರಂಜನೆಯನ್ನು ಪಡೆಯುವುದು, ಹೀಗೆ? ಜನವರಿ ಬರುತ್ತಿದೆ ಎನ್ನುವಾಗ ನಮ್ಮ ಮನಸ್ಸು ಯೋಚಿಸತೊಡಗುತ್ತದೆ. ನಾವು ಮಾಡಲೇಬೇಕಾದ ಕೆಲಸಗಳ ಪಟ್ಟಿ ನಮ್ಮ ತಲೆಯಲ್ಲಿ ಓಡಲು ಪ್ರಾರಂಭವಾಗುತ್ತದೆ. ಶೇಕಡಾ 64ರಷ್ಟು ಜನ ಯಾವ ಸಂಕಲ್ಪದ ನಿರ್ಧಾರ ಮಾಡುವುದೆಂದು ಯೋಚಿಸಿಯೇ ಒತ್ತಡಕ್ಕೆ ಒಳಗಾಗುತ್ತಾರಂತೆ.

ನಾನು ಹೇಳಿದ ಹಾಗೆ, ಈ ಹೊಸ ಸಂಕಲ್ಪಗಳನ್ನು ತೆಗೆದುಕೊಳ್ಳದಿದ್ದರೆ, ಜೀವನ ಸ್ತಬ್ಧವಾಗುವುದಿಲ್ಲ. ಆದರೆ ಅವುಗಳನ್ನು ರೂಢಿಸಿಕೊಂಡರೆ, ಬದುಕು ಸುಂದರವಾಗುತ್ತದೆ, ಶಿಸ್ತು ಮೈಗೂಡುತ್ತದೆ, ಆರೋಗ್ಯ ಸುಧಾರಿಸಿ ನಮ್ಮ ವ್ಯಕ್ತಿತ್ವದಲ್ಲಿಯೇ ಲವಲವಿಕೆ ಉಂಟಾಗುತ್ತದೆ. ನಾವು ಆಕರ್ಷಕವಾಗಿ ಕಾಣತೊಡಗುತ್ತೇವೆ. ನಮ್ಮ ಸುತ್ತ ನಮಗೇ ತಿಳಿಯದಂತೆ ಪ್ರಭಾವಲಯವೊಂದು ನಿರ್ಮಾಣವಾಗುತ್ತದೆ. ನಾವು ಜೀವಿಸುವ ಸಮಾಜಕ್ಕೆ ನಮಗೆ ಅರಿಯಂತೆಯೇ ಮಹತ್ವದ ಕೊಡುಗೆ ಕೊಟ್ಟಿರುತ್ತೇವೆ.

ಸ್ವಲ್ಪ ಹಾಗೆಯೇ ಮೆಲುಕು ಹಾಕಿ ನೋಡಿ; ಸಾಮಾನ್ಯವಾಗಿ ನಾವು ಮಾಡುವ ಸಂಕಲ್ಪಗಳೆಂದರೆ, ದೇಹದ ತೂಕ ಇಳಿಸುತ್ತೇನೆ, ಡಯೆಟ್ ಮಾಡುತ್ತೇನೆ, ಯೋಗ, ವ್ಯಾಯಾಮ ಮಾಡುತ್ತೇನೆ, ಮೊಬೈಲ್ ಮತ್ತು ಜಾಲತಾಣಗಳನ್ನು ಆದಷ್ಟು ಕಡಿಮೆ ಬಳಸುತ್ತೇನೆ, ಹೊರಗಿನ ತಿಂಡಿ ತಿನ್ನುವುದಿಲ್ಲ, ಬೆಳಗ್ಗೆ ಬೇಗ ಏಳುತ್ತೇನೆ, ವಾಕಿಂಗ್‌ಗೆ ಹೋಗುತ್ತೇನೆ, ಇಷ್ಟು ಪುಸ್ತಕಗಳನ್ನು ಓದಿ ಮುಗಿಸುತ್ತೇನೆ, ಅಂದಿನ ಪಾಠ ಅಂದೇ ಓದಿಕೊಳ್ಳುತ್ತೇನೆ, ಇಂತಲ್ಲಿಗೆ ಪ್ರವಾಸಕ್ಕೆ ಹೋಗಿಯೇ ಹೋಗುತ್ತೇನೆ, ಮುನಿದವರೊಂದಿಗೆ ಸಂಬಂಧ ಸರಿ ಮಾಡಿಕೊಳ್ಳುತ್ತೇನೆ, ದಿನವೂ ಇಸ್ತ್ರಿ ಮಾಡಿದ ಬಟ್ಟೆಗಳನ್ನೇ ಹಾಕುತ್ತೇನೆ, ಸಮಯ ಪರಿಪಾಲನೆ ಮಾಡುತ್ತೇನೆ, ಹಣ ಉಳಿಸುತ್ತೇನೆ, ದುಂದು ವೆಚ್ಚ ಮಾಡುವುದಿಲ್ಲ, ದುರಭ್ಯಾಸಗಳನ್ನು ಬಿಡುತ್ತೇನೆ, ಸಾರ್ವಜನಿಕ ಸಾರಿಗೆ ಬಳಸುತ್ತೇನೆ, ಪರಿಸರ ಕಾಪಾಡುತ್ತೇನೆ, ನೀರನ್ನು ಪೋಲು ಮಾಡುವುದಿಲ್ಲ, ಎಲ್ಲೆಂದರಲ್ಲಿ ಕಸ ಬಿಸಾಡುವುದಿಲ್ಲ, ಸಾರ್ವಜನಿಕ ಆಸ್ತಿಗಳ ಕಾಳಜಿ ವಹಿಸುತ್ತೇನೆ, ಯಾರನ್ನೂ ದ್ವೇಷಿಸುವುದಿಲ್ಲ, ಸಿಟ್ಟನ್ನು ಕಡಿಮೆ ಮಾಡಿಕೊಳ್ಳುತ್ತೇನೆ, ಅಪ್ಪ ಅಮ್ಮಂದಿರೊಂದಿಗೆ ಅಥವಾ ಕುಟುಂಬದ ಜೊತೆ ಸಮಯ ಕಳೆಯುತ್ತೇನೆ ಹೀಗೆ ಹತ್ತು ಹಲವಷ್ಟು ನಮ್ಮ ಪಟ್ಟಿಯಲ್ಲಿರುತ್ತವೆ.

ಈ ಪಟ್ಟಿಯನ್ನು ಗಮನಿಸಿ ನೋಡಿ ಬೇಕಾದಲ್ಲಿ, ಇವಾವುದನ್ನು ಮಾಡದೆಯೂ ನಾವು ಆರಾಮಾಗಿ ನಮ್ಮ ದಿನಗಳನ್ನು ಕಳೆಯಬಹುದು. ಇವುಗಳನ್ನು ರೂಢಿಸಿಕೊಳ್ಳದಿದ್ದಲ್ಲಿ ನಮ್ಮ ಜೀವನ ಅಸ್ತವ್ಯಸ್ತವಂತೂ ಆಗುವುದಿಲ್ಲ ನಿಜ. ಆದರೆ ಒಂದೊಮ್ಮೆ ರೂಢಿಸಿಕೊಂಡಲ್ಲಿ? ನಮ್ಮ ಜೀವನ ಅದೆಷ್ಟು ಸುಂದರವಾಗಬಹುದು ಯೋಚಿಸಿ ನೋಡಿ? ನಿಜ ಹೇಳಬೇಕೆಂದರೆ, ಅದು ನಮಗೂ ಗೊತ್ತು. ಹಾಗಾಗಿಯೇ, ಈ New Year Resolution ನಮ್ಮನ್ನು ಅಷ್ಟು ಕಾಡುವುದು. ಹಾಗಾಗಿ ನಾವು ಎಲ್ಲರಂತಾಗಲು ಸಂಕಲ್ಪವನ್ನು ತೆಗೆದುಕೊಂಡು ಬಿಡುತ್ತೇವೆ.

ನಂತರ ಜನವರಿಯಲ್ಲಿ ನಮ್ಮ ನಿರ್ಧಾರ ಬಹಳ ಗಟ್ಟಿಯಾಗಿರುತ್ತದೆ. ಅರ್ಧ ತಿಂಗಳು ಕಳೆದು ಹೊಸ ವರ್ಷದ ಸಂಭ್ರಮದ ಅಮಲು ಇಳಿದ ಮೇಲೆ, ನಮ್ಮ ಉತ್ಸಾಹವೂ, ಗಾಳಿ ಕಳೆದುಕೊಂಡ ಬಲೂನಿನಂತೆ ನಿಧಾನಕ್ಕೆ ಧರಾಶಾಹಿಯಾಗತೊಡಗುತ್ತದೆ. ಫೆಬ್ರವರಿಯಲ್ಲಿ ಸ್ವಲ್ಪ ಉಸಿರಾಡುವ ನಮ್ಮ ದೃಢ ನಿಶ್ಚಯ, ಮಾರ್ಚ್‌ನಲ್ಲಿ ಏದುಸಿರು ಬಿಡತೊಡಗುತ್ತದೆ. ಏಪ್ರಿಲ್‌ನ ರಜೆಯ ವಾತಾವರಣದಲ್ಲಿ ತಾನೂ ಮುಂದಿನ ಜನವರಿಯವರೆಗೂ ರಜೆ ಹೋಗಿಬಿಡುತ್ತದೆ!

ಇದೇ ನಮ್ಮ ದೃಢ ನಿರ್ಣಯದ ಹಣೆಬರಹ. ಈ ಮಾತು ಎಲ್ಲರಿಗೂ ಅನ್ವಯವಾಗುವುದಿಲ್ಲ. ತೆಗೆದು ನಿರ್ಧಾರಕ್ಕೆ ಬದ್ಧರಾಗಿ, ತಪಸ್ಸಿನಂತೆ ಆಚರಿಸಿ, ಬೇಕಾದ ಫಲಿತಾಂಶ ಪಡೆದವರನ್ನು ನಾವು ಕಾಣುತ್ತಲೇ ಇರುತ್ತೇವೆ. ಈಗಂತೂ ರೀಲ್ಸ್‌ನ ಜಮಾನ. ರೀಲ್ಸ್‌ನಲ್ಲಿ ಅಂತಹ ಯಶೋಗಾಥೆಗಳು ಅದೆಷ್ಟೋ ದಿನನಿತ್ಯ ಬರುತ್ತಲೇ ಇರುತ್ತವೆ. ಆದರೆ ಅಂತಹವರ ಸಂಖ್ಯೆ ಕಡಿಮೆ ಎನ್ನುವುದು ವಿಷಾದ.

ಏಕೆ ನಾವು ಹೀಗೆ ನಾವೇ ತೆಗೆದುಕೊಂಡ ನಿರ್ಧಾರಗಳನ್ನು ಜಾರಿ ಮಾಡದೆ ಸೋಲುತ್ತೇವೆ ಎಂದರೆ ಅದಕ್ಕೆ ಸಾಕಷ್ಟು ಕಾರಣಗಳು. ಭೌತಿಕ, ತಾತ್ವಿಕ! ನನಗನ್ನಿಸುವುದೆಂದರೆ, ಮುಖ್ಯ ಕಾರಣ, ನಾವು ಹೊಸ ವರ್ಷಕ್ಕೇ ಕಾಯುವುದು! ಹೌದು, ದೊಡ್ಡವರು ಹೇಳಿದ್ದಾರಲ್ಲ, “ಕೆಟ್ಟದ್ದನ್ನು ಮಾಡಬೇಕೆಂದಿದ್ದರೆ ನೂರು ಬಾರಿ ಯೋಚಿಸು. ಒಳಿತನ್ನು ಮಾಡುವುದಿದ್ದರೆ, ಕ್ಷಣವೂ ಯೋಚಿಸಬೇಡ” ಅಂತಾ. ಹಾಗೆಯೇ ನಾವು, ಏನಾದರೂ ಒಳ್ಳೆಯದನ್ನು ಮಾಡಬೇಕು ಎಂದುಕೊಂಡಿರುವಾಗ, ಅದಕ್ಕಾಗಿ ದಿನ, ಸಮಯ, ವಾರ, ನಕ್ಷತ್ರ,, ತಿಥಿಗಳನ್ನು ನೋಡುವ ಅಗತ್ಯ ಖಂಡಿತಾ ಇಲ್ಲ. ದಾಸರು ಹೇಳಿಲ್ಲವೇ.

**ಇಂದಿನ ದಿನವೇ ಶುಭದಿನವು**
**ಇಂದಿನ ವಾರ ಶುಭವಾರ**
**ಇಂದಿನ ತಾರೆ ಶುಭತಾರೆ**
**ಇಂದಿನ ಯೋಗ ಶುಭಯೋಗ**
**ಇಂದಿನ ಕರಣ ಶುಭ ಕರಣ**
**ಇಂದು ಪುರಂದರ ವಿಟ್ಠಲ ರಾಯನ**
**ಸಂದರ್ಶನ ಫಲವೆಮಗಾಯಿತು! ಎಂದು?**

**ಕಬೀರರೂ ಅದನ್ನೇ ಹೇಳಿರುವುದು,**
**ಕಲ್ ಕರೇಸೋ ಆಜ್ ಕರ್**
**ಆಜ್ ಕರೇ ಸೊ ಅಬ್**
**ಪಲ್ ಮೆ ಪರಲಯ್ ಹೋವೇಗಿ**
**ಬಹುರಿ ಕರೆಗಾ ಕಬ್? ಅಂತಾ**

ನಾವು ಏನೇ ಒಳ್ಳೆಯದನ್ನು ಮಾಡಲು ಕಾಯಬೇಕಿಲ್ಲ. ಕಾಯುವ ಮನಸ್ಥಿತಿ ನಮ್ಮ ಸೋಮಾರಿತನ, ಮಾನಸಿಕ ದೌರ್ಬಲ್ಯ ಮತ್ತು ಎಲ್ಲವನ್ನೂ ಮುಂದಕ್ಕೆ ಹಾಕುವ ನಮ್ಮ ಅಭ್ಯಾಸವಷ್ಟೇ. ಅನ್ನಿಸಿದ್ದನ್ನು ತಕ್ಷಣ ಮಾಡುವ ಪರಿಪಾಠ ಇಟ್ಟುಕೊಂಡರೆ, ನಮಗೆ ಯಶಸ್ಸು ಖಂಡಿತವಾಗಿ ದೊರಕುತ್ತದೆ.

ಜನವರಿ ಒಂದರಂದೇ ನಾನು ಹೊಸತನ್ನು ಪ್ರಾರಂಭಿಸುವುದು ಎಂದರೆ ಖಂಡಿತಾ ತಪ್ಪಲ್ಲ. ಹಾಗೆಯೇ ಅನಿಸಿದ್ದನ್ನು ತಕ್ಷಣ ಮಾಡುವುದೂ ಕೆಟ್ಟದಲ್ಲ. ನಮ್ಮ ವಿವೇಚನೆ ಸರಿಯಾದ ದಾರಿಯಲ್ಲಿ ಇರಬೇಕಷ್ಟೇ. ಮೊದಲಿಗೆ ಸಂಕಲ್ಪವನ್ನು ಪೂರೈಸುವ ಗಟ್ಟಿ ಸಂಕಲ್ಪವನ್ನು ಮಾಡಬೇಕು. ನಂತರವಷ್ಟೇ ಎಲ್ಲವೂ ಸುಲಲಿತ. ಈ ಹೊಸ ವರ್ಷ ನಿಮ್ಮೆಲ್ಲರ ಸಂಕಲ್ಪಗಳನ್ನು, ಕನಸುಗಳನ್ನು, ನಿರೀಕ್ಷೆಗಳನ್ನು ನನಸು ಮಾಡಲಿ.

# ದೇಶ ರಕ್ಷಣೆ ನಂತರ ಪರಿಸರ ರಕ್ಷಣೆಯಲ್ಲಿ ನಿರತರಾಗಿದ್ದ ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ



ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಭಾರತೀಯ ಸೇನೆಯ ಪ್ರಥಮ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಸಂಬಂಧಿಕರಾದ ಸಿ.ಕೆ.ಕರುಂಬಯ್ಯ ಅವರು ಜನಿಸಿದ್ದು ಕೊಡಗಿನ ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿಯೇ. 1936ರ ಡಿಸೆಂಬರ್ 3 ರಂದು ಡಾ.ಸಿ.ಬಿ. ಕಾರ್ಯಪ್ಪ ಅವರ ಪುತ್ರರಾಗಿ ಜನಿಸಿದ ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸೇನೆಗೆ ಸೇರಬೇಕೆಂಬ ಹಂಬಲವಿತ್ತು. ಅದಕ್ಕೆ ಅವರ ಸಂಬಂಧಿಕರು ಸೇನೆಯಲ್ಲಿ ಇದ್ದದ್ದು ಕೂಡ ಕಾರಣವಾಗಿತ್ತು.

ಮಡಿಕೇರಿಯ ಸೆಂಟ್ರಲ್ ಪ್ರೌಢಶಾಲೆ ಹಾಗೂ ಸರ್ಕಾರಿ ಕಾಲೇಜಿನಲ್ಲಿ ಶಿಕ್ಷಣ ಪಡೆದ ಸಿ.ಕೆ.ಕರುಂಬಯ್ಯ ಅವರು ವಿದ್ಯಾರ್ಥಿ ದೆಸೆಯಲ್ಲೇ ಸ್ಕೌಟ್ ಮತ್ತು ಎನ್‌ಸಿಸಿಯಲ್ಲಿ ಸಕ್ರಿಯರಾಗಿದ್ದರು. ಶಾಲೆ ಹಾಗೂ ಕಾಲೇಜು ಮಟ್ಟದ ಕ್ರಿಕೆಟ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಸೇನೆಗೆ ಸೇರಬೇಕೆಂಬ ಹಂಬಲ ಹೊಂದಿದ್ದ ಅವರು ಅದಕ್ಕನುಗುಣವಾಗಿ ತಮಿಳುನಾಡಿನ ವೆಲ್ಲಿಂಗ್ಟನ್ ರಕ್ಷಣಾ ಸೇವೆಗಳ ಸ್ಟಾಫ್ ಕಾಲೇಜಿಗೆ ಸೇರಿ ಪದವಿ ಪಡೆದರು. ಸೇನೆಗೆ ಸೇರಬೇಕೆಂಬ ಅವರ ಉತ್ಸಾಹಕ್ಕೆ ಕುಟುಂಬದವರ ಪ್ರೋತ್ಸಾಹವೂ ಇತ್ತು. 1957ರ ಜನವರಿ 7 ರಂದು ಡೆಹ್ರಾಡೂನ್‌ನ ಭಾರತೀಯ ಮಿಲಿಟರಿ ಅಕಾಡೆಮಿಗೆ ಸೇರ್ಪಡೆಯಾದ ಅವರು ಅಲ್ಲಿ ಅಧೀನಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು. 1958ರ ಡಿಸೆಂಬರ್ 14 ರಂದು ಮರಾಠ ಲಘು ಪದಾತಿದಳದ (ಲೈಟ್ ಇನ್‌ಫ್ರೆಂಟಿ) 5ನೇ ಬೆಟಾಲಿಯನ್‌ನಲ್ಲಿ ಸೇನಾಧಿಕಾರಿಯಾಗಿ ನಿಯೋಜನೆಗೊಂಡರು.

ತ್ರಿಪುರಾ, ನಾಗಾಲ್ಯಾಂಡ್, ಮಿಜೋರಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಲಘು ಪದಾತಿದಳದ ಹಲವು ಕಾರ್ಯಾಚರಣೆಗಳನ್ನು ಸಿ.ಕೆ.ಕರುಂಬಯ್ಯ ಅವರು ಯಶಸ್ವಿಯಾಗಿ ನಡೆಸಿದ್ದರು. 1965ರಲ್ಲಿ ಭಾರತ–ಪಾಕಿಸ್ತಾನದ ನಡುವೆ ನಡೆದ ಯುದ್ಧದಲ್ಲಿ ರಾಜಸ್ಥಾನ ಗಡಿಯಲ್ಲಿ ನಿಯೋಜನೆಗೊಂಡಿದ್ದ ಸಿ.ಕೆ.ಕರುಂಬಯ್ಯ ನೇತೃತ್ವದ ಸೇನಾಪಡೆ ದಿಟ್ಟ ಹೋರಾಟ ನಡೆಸಿ, ಪಾಕಿಸ್ತಾನವು ವಶಪಡಿಸಿಕೊಂಡಿದ್ದ ಹಲವಾರು ಗ್ರಾಮಗಳನ್ನು ಮರು ವಶಪಡಿಸಿಕೊಳ್ಳುವಲ್ಲಿ ಸಿ.ಕೆ.ಕರುಂಬಯ್ಯ ಅವರು ವಿಶೇಷ ಪಾತ್ರ ವಹಿಸಿದ್ದರು.

1971ರಲ್ಲಿ ನಡೆದ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಸಾವಿರಾರು ಪಾಕಿಸ್ತಾನ ಸೈನಿಕರು ಭಾರತೀಯ ಸೇನೆಗೆ ಶರಣಾಗುವುದರ ಹಿಂದೆ ಸಿ.ಕೆ.ಕರುಂಬಯ್ಯ ಅವರ ಪಾತ್ರವೂ ಪ್ರಮುಖವಾಗಿತ್ತು. ಅಲ್ಲದೇ ಮಗುರಾದಲ್ಲಿ ಶಸ್ತ್ರಾಸ್ತ್ರ ಸಾಗಾಣೆ ಮಾಡುತ್ತಿದ್ದ ಪಾಕಿಸ್ತಾನದ 300 ಟ್ರಕ್‌ಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲೂ ಸಿ.ಕೆ.ಕರುಂಬಯ್ಯನವರು ಮುಂಚೂಣಿಯಲ್ಲಿದ್ದರು. ಇದಕ್ಕಾಗಿ ಅವರಿಗೆ ರಾಷ್ಟ್ರಪತಿ ಗೌರವ ದೊರೆತಿತ್ತು. 1972ರಲ್ಲಿ ಉತ್ತರ ಪ್ರದೇಶದ ಜಹಾಂಗೀರಬಾದ್‌ನಲ್ಲಿ ನಡೆದ ದಂಗೆ ಜೋರಾಗಿತ್ತು. ಆಗ ಸೇನೆ ಮಧ್ಯ ಪ್ರವೇಶ ಮಾಡಬೇಕಿತ್ತು. ಸೇನಾಧಿಕಾರಿಯಾಗಿದ್ದ ಸಿ.ಕೆ.ಕರುಂಬಯ್ಯನವರ ನೇತೃತ್ವದಲ್ಲಿ ಈ ದಂಗೆಯನ್ನು ಹತ್ತಿಕ್ಕಲಾಯಿತು. ಈ ವೇಳೆ ಸಿ.ಕೆ.ಕರುಂಬಯ್ಯ ಅವರು ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದರು. ಸಿಕ್ಕಿಂನ ನಾತೂಲಾದಲ್ಲಿ ನಡೆಸಿದ ಕಾರ್ಯಾಚರಣೆಗಾಗಿ ಇವರ ನೇತೃತ್ವದ ಬೆಟಾಲಿಯನ್‌ಗೆ ಬ್ಲಾಕ್ ಕ್ಯಾಟ್ ಟ್ರೋಫಿ ನೀಡಲಾಗಿತ್ತು. ಸಿ.ಕೆ.ಕರುಂಬಯ್ಯ ಅವರು ಬೆಳಗಾವಿ ಹಾಗೂ ಹಿಮಾಚಲ ಪ್ರದೇಶದ ಯೋಲ್ ಸೇನಾ ಶಾಲೆಗಳ ಸ್ಟೇಷನ್ ಕಮಾಂಡರ್ ಹಾಗೂ ಕಂಟೋನ್ಮೆಂಟ್ ಬೋರ್ಡ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಲಡಾಕ್‌ನ ಸೂಕ್ಷ್ಮ ಪ್ರದೇಶವಾದ ಕಾರ್ಗಿಲ್‌ನಲ್ಲಿ 1983ರಿಂದ 1985ರವರೆಗೆ 121 ಇನ್‌ಫೆಂಟ್ರಿ ಬ್ರಿಗೇಡ್ ಗ್ರೂಪ್ ಮುನ್ನಡೆಸಿದ್ದ ಸಿ.ಕೆ.ಕರುಂಬಯ್ಯನವರು ಹೆಚ್ಚುವರಿ ಮಿಲಿಟರಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು. 35 ವರ್ಷಗಳ ಕಾಲ ಭಾರತೀಯ ಸೇನೆಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಅವರು 1991 ಡಿಸೆಂಬರ್ 31 ರಂದು ನಿವೃತ್ತರಾದರು.

ನಿವೃತ್ತಿ ನಂತರ ಮೈಸೂರಿನ ಕೆ.ಹೆಮ್ಮನಹಳ್ಳಿ ಬಳಿ ತೋಟ ಖರೀದಿಸಿ ಪತ್ನಿ ದೇಶು ಕರುಂಬಯ್ಯ ಅವರೊಂದಿಗೆ ವಾಸ ಮಾಡುತ್ತಿದ್ದರು. ಇವರ ಪುತ್ರಿ ಶಬರಿ ಯುಎಸ್‌ನಲ್ಲಿ ಉನ್ನತ ವ್ಯಾಸಂಗ ಮಾಡಿದ್ದು, ಪ್ರಸ್ತುತ ಸಿಂಗಾಪುರ್‌ನ ಅಮೆರಿಕನ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿದ್ದಾರೆ. ಪುತ್ರ ಸಿ.ಕೆ.ಸೋಮಣ್ಣ ಆಸ್ಟ್ರೇಲಿಯಾದಲ್ಲಿ ಹಾರ್ಸ್ ಬಿಸಿನೆಸ್ ಮ್ಯಾನೇಜ್ಮೆಂಟ್ ಕೋರ್ಸ್ ಮುಗಿಸಿ ರಾಷ್ಟ್ರೀಯ ಮಟ್ಟದ ಇಕ್ವೆಸ್ಟ್ರಿಯನ್ ರೈಡರ್ ಆಗಿದ್ದಾರೆ.

ಮೂರೂವರೆ ದಶಕ ಕಾಲ ದೇಶ ರಕ್ಷಣೆಗಾಗಿ ಸೇನೆಯಲ್ಲಿ ಸೇವೆ ಸಲ್ಲಿಸಿದ ಸಿ.ಕೆ.ಕರುಂಬಯ್ಯ ಅವರು ನಿವೃತ್ತಿಯ ನಂತರ ಸುಮ್ಮನೆ ಕುಳಿತವರಲ್ಲ. ಭಾರತದಲ್ಲಿ ಜನಸಾಮಾನ್ಯರ ಬದುಕು ಗುಣಾತ್ಮಕವಾಗಿರಬೇಕು. ಸಾಮಾಜಿಕ ಬದಲಾವಣೆಯಾಗಬೇಕು ಎಂದು ಬಯಸಿದ್ದರು. ವನ್ಯಜೀವಿ ಮತ್ತು ಪರಿಸರ ರಕ್ಷಣೆಗೆ ಒತ್ತು ನೀಡುತ್ತಿದ್ದರು. ಮೈಸೂರಿನ ಪರಿಸರ, ವನ್ಯಜೀವಿ ನೀರಿನ ಸೆಲೆಗಳ ರಕ್ಷಣೆಗೆ ಸಂಬಂಧಿಸಿದ ಯಾವುದೇ ಹೋರಾಟವಿದ್ದರೂ, ಅದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಸಿ.ಕೆ.ಕರುಂಬಯ್ಯ ಅವರು ಇತ್ತೀಚೆಗೆ ನಡೆದ ಕುಕ್ಕರಹಳ್ಳಿ ಕೆರೆ ಉಳಿಸಿ, ಪೂರ್ಣಯ್ಯ ನಾಲೆ ಸಂರಕ್ಷಿಸುವ ಅಭಿಯಾನದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೈಸೂರು ಗ್ರಾಹಕ ಪರಿಷತ್ ಸದಸ್ಯರಾಗಿದ್ದು, ನಿರಂತರವಾಗಿ ನಾಗರಿಕರ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು. ಸಿ.ಕೆ.ಕರುಂಬಯ್ಯನವರು ಹಿರಿಯ ನಾಗರಿಕರ ವೇದಿಕೆ, ಮೈಸೂರು ಸ್ಪೋರ್ಟ್ಸ್ ಕ್ಲಬ್, ಗಾಲ್ಫ್ ಕ್ಲಬ್‌ನ ಸದಸ್ಯರಾಗಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಬಡವನ ಸ್ವಾವಲಂಬಿ ಬದುಕಿಗೆ ಪೂರಕವಾಗಿ ಸಹಕಾರ ಸಂಸ್ಥೆಗಳು ಸ್ವಾಯತ್ತ, ಸ್ವತಂತ್ರವಾಗಿರಬೇಕು

●ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡರ ಆಶಯ ●ಸಹಕಾರಿ ಕ್ಷೇತ್ರದಲ್ಲಿ ತಮ್ಮ ಸಾಧನೆಯ ಸವಿಸ್ತಾರವಾಗಿ ವಿವರಿಸಿದ ಗೌಡರು ●ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದರೆ ಮನುಷ್ಯ ತನಗೆ ತಾನೇ ಮುಂದೆ ಬರುತ್ತಾನೆ

ಮೈಸೂರು, ಜ.4(ಎಂಕೆ)– ಸಹಕಾರ ಕ್ಷೇತ್ರ ಪವಿತ್ರವಾದ ಕ್ಷೇತ್ರವಾಗಿದ್ದು, ಸಹಕಾರ ಸಂಸ್ಥೆಗಳು ಸ್ವಾಯತ್ತತೆಯಿಂದ ಸ್ವತಂತ್ರವಾಗಿ ಬೆಳೆಯಬೇಕು. ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ಅಧಿಕಾರಿಗಳು ಕಾರ್ಯ ನಿರ್ವಹಿಸುವಂತೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷ ಜಿ.ಟಿ.ದೇವೇಗೌಡ ಕಿವಿಮಾತು ಹೇಳಿದರು.

ನಗರದ ಲಿ ರುಚಿ ಹೋಟೆಲ್‌ನಲ್ಲಿ ಗುರುವಾರ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ ವತಿಯಿಂದ ಆಯೋಜಿಸಿದ್ದ 'ರಾಜ್ಯದ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಆಡಳಿತ ಕಾರ್ಯವಿಧಾನ ಮತ್ತು ಸಹಕಾರ ಚಳವಳಿಯಲ್ಲಿ ಇತ್ತೀಚಿನ ಪ್ರವೃತ್ತಿ ಕುರಿತ ಎರಡು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರ ಪವಿತ್ರವಾದ ಕ್ಷೇತ್ರವಾಗಿದೆ. ಒಂದು ಸಹಕಾರ ಸಂಘದಿಂದ ಹೈನುಗಾರಿಕೆ, ಕೃಷಿ, ಗುಡಿ ಕೈಗಾರಿಕೆ, ಕುರಿ ಸಾಕಾಣಿಕೆ ಸೇರಿದಂತೆ ಓರ್ವ ರೈತನ ಅಥವಾ ಬಡ ವ್ಯಕ್ತಿಯ ಅಭಿವೃದ್ಧಿಗೆ ಹಾಗೂ ಆತನ ಆರ್ಥಿಕ ಸ್ವಾವಲಂಬನೆಗೆ ಏನೆಲ್ಲಾ ಸಹಕಾರ ನೀಡಬಹುದು ಅದೆಲ್ಲವನ್ನೂ ನೀಡಬೇಕು. ಸಹಕಾರ ಸಂಘ ಬೆಳೆಯುತ್ತಿದೆ ಎಂದರೆ, ಸಂಘದಿಂದ ಸಾಲ ಪಡೆದವರು ಆರ್ಥಿಕವಾಗಿ ಸ್ವಾವಲಂಬನೆ ಹೊಂದುತ್ತಿದ್ದಾರೆ ಎಂದರ್ಥ. ಇಂತಹ ಸಹಕಾರ ಸಂಸ್ಥೆಗಳು ಸ್ವಾಯತ್ತತೆಯಿಂದ ಉಳಿದು, ಸ್ವತಂತ್ರವಾಗಿ ಬೆಳೆಯಬೇಕು ಎಂದು ಹೇಳಿದರು.

ಸರ್ಕಾರದ ಮಟ್ಟದಲ್ಲಿ ಸಹಕಾರ ಸಂಘಗಳಿಗೆ ಪೂರಕವಾಗಿ ಕಾಯ್ದೆಗಳನ್ನು ರೂಪಿಸಬೇಕೆಂಬ ಚರ್ಚೆಗಳನ್ನು ಮಾಡಲಾಗುತ್ತಿದೆ. ಸಹಕಾರ ಸಚಿವರಾದ ರಾಜಣ್ಣ ಅವರು ಕೂಡ ಅಷ್ಟೇ ಗಟ್ಟಿಯಾಗಿದ್ದಾರೆ. ಆದರೆ, ಅವರ ಮನಸ್ಸು ಒಪ್ಪದ ಇರುವ ಕೆಲಸವನ್ನು ಮಾಡಿಸಿಕೊಳ್ಳಲಾಗುತ್ತಿದೆ. ಅದ್ದರಿಂದ ಸಹಕಾರ ಇಲಾಖೆಯ ಅಧಿಕಾರಿಗಳು, ಅಧಿಕಾರಿಗಳಾಗಿರದೇ ಸಹಕಾರಿಗಳಾಗಿ ನಿಮ್ಮ ವ್ಯಾಪ್ತಿಯಲ್ಲಿ ಬರುವವರನ್ನು ಉಳಿಸಿ. ಸಹಕಾರ ಸಂಘಗಳನ್ನು ಉಳಿಸುವ ಪ್ರಯತ್ನ ಮಾಡಿ ಎಂದು ತಿಳಿ ಹೇಳಿದರು.

ಮೊದಲು ಶಿಕ್ಷಣ ಶೇ.20ರಷ್ಟಿತ್ತು ಸಂಸ್ಕಾರ ಶೇ.80ರಷ್ಟಿತ್ತು. ಆದರೆ ಇವತ್ತು ಶಿಕ್ಷಣ ಶೇ.80ರಷ್ಟಾಗಿದ್ದು, ಸಂಸ್ಕಾರ ಶೇ.20ಕ್ಕೆ ಇಳಿದಿದೆ. ನಾವುಗಳು ನಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುವ ಅನಿವಾರ್ಯತೆ ಇದೆ. ಹಿಂದೆ ರಾಜಕಾರಣಕ್ಕೆ ದುಡ್ಡು ಕೊಡುತ್ತಿರಲಿಲ್ಲ, ಗೆದ್ದು ಬಂದು ಜನರ ಸೇವೆ ಮಾಡುತ್ತಿದ್ದೆವು. ಈಗ ಚುನಾವಣೆ ಎಂಬುದು 'ಇನ್‌ವೆಸ್ಟ್‌ಮೆಂಟ್' ಆಗಿದೆ. ರಿಸಲ್ಟ್ ಬಂದ ಮೇಲೆ ಇನ್‌ಕಮ್ ಮಾಡಬೇಕು. ಇಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳಾದ ನೀವು ಜೀವನ ಮಾಡುವುದಕ್ಕೆ ಕಷ್ಟವಾಗಿರುವಾಗ ಲಂಚ ಕೊಟ್ಟು ಬರಲು ಸಾಧ್ಯವಾ? ಅದ್ದರಿಂದ ನಿಮಗೆ ಸಿಕ್ಕಿರುವ ಅಧಿಕಾರವನ್ನು ಸದ್ಬಳಕೆ ಮಾಡಿಕೊಳ್ಳಿ. ಬಡವರಿಗೆ ಸಹಾಯ ಮಾಡಿ. ಧರ್ಮ ಬಿಡಬೇಡಿ. ಉತ್ತಮ ಅಧಿಕಾರಿಗಳ ಸೇವೆಯಿಂದಾಗಿ ಎಂಡಿಸಿಸಿ ಬ್ಯಾಂಕ್ ಇಂದು ರಾಜ್ಯದಲ್ಲೇ ದೊಡ್ಡ ಸಹಕಾರ ಬ್ಯಾಂಕ್ ಆಗಿ ಬೆಳೆದಿದೆ ಎಂದು ಶ್ಲಾಘಿಸಿದರು.

**ಮುಖ್ಯಮಂತ್ರಿಗಳಿಂದ ಉದ್ಘಾಟನೆ:** ಮೊದಲು ಸಹಕಾರ ಸಂಘಗಳ ಕಾರ್ಯಕ್ರಮಗಳಿಗೆ ರಾಜಕಾರಣಿಗಳು ಬರುತ್ತಿರಲಿಲ್ಲ. ಆದರೆ, ನಾನು ಮಹಾಮಂಡಳದ ಅಧ್ಯಕ್ಷನಾದಾಗ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ದೇವೇಗೌಡರನ್ನು ಕರೆಸಿ ಸಹಕಾರ ಸಪ್ತಾಹದ ಉದ್ಘಾಟನೆ ಮಾಡಿಸಿದ್ದೆ. ಅಂದಿನಿಂದ ಇಂದಿನವರೆಗೂ ಮುಖ್ಯಮಂತ್ರಿಗಳಿಂದಲೇ ಸಹಕಾರ ಸಪ್ತಾಹ ಉದ್ಘಾಟನೆಯಾಗುತ್ತಿದೆ. ಇದರಿಂದಾಗಿ ಸರ್ಕಾರದಿಂದ ಸಹಕಾರ ಸಂಘಗಳಿಗೆ ಅವಶ್ಯವಿರುವ ಯೋಜನೆಗಳನ್ನು ಘೋಷಣೆ ಮಾಡಿಸಲು ಅನುಕೂಲವಾಗುತ್ತಿದೆ. ಹಾಗೆಯೇ ಮೊದಲು ಸಹಕಾರ ಸಂಘದಲ್ಲಿ ಅಧಿಕಾರಿಗಳು ಮತ್ತು ಸಹಕಾರಿಗಳಿಗೆ ತರಬೇತಿ ಇರಲಿಲ್ಲ. ಅದನ್ನೂ ಕೂಡ ಅಂದಿನ ಎಂಡಿ ಜಯದೇವ ಅವರೊಂದಿಗೆ ಚರ್ಚಿಸಿ ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು ಎಂದು ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದವರಿಗೆ 25 ಸಾವಿರ ರೂ. ಸಾಲ ಮನ್ನಾ ಘೋಷಣೆ ಮಾಡಿದರು. ಅಂದು ನಾನು ಕೆಲವೇ ದಿನಗಳು ಸಹಕಾರ ಸಚಿವನಾಗಿದ್ದೆ. ಕೇವಲ 20 ದಿನಗಳಲ್ಲಿ ಫಲಾನುಭವಿಗಳ ಮನೆ ಮನೆಗೆ ರಸೀದಿಗಳನ್ನು ತಲುಪಿಸಲಾಗಿತ್ತು. ಒಂದೇ ಒಂದು ರೂಪಾಯಿ ಲಂಚ ಮುಟ್ಟದೆ ಸಾಲ ಮರುಪಾವತಿಯಾಗಿದೆ ಎಂಬ ರಸೀದಿಯನ್ನು ನೀಡಿದ್ದೇವೆ ಎಂದು ಸ್ಮರಿಸಿದರಲ್ಲದೆ ಕೆಲಸದಲ್ಲಿ ಪ್ರಾಮಾಣಿಕರಾಗಿರಬೇಕು ಎಂದು ತಿಳಿಸಿದರು.

**ಪ್ರಾಮಾಣಿಕತೆಗೆ ದೈವ ಬಲ:** ಪ್ರಾಮಾಣಿಕವಾಗಿ ಬಡ ಜನರ ಕಣ್ಣೀರು ಒರೆಸಿದರೆ ಅವರಿಗೆ ದೈವ ಬಲ ದೊರಕಲಿದೆ. ದೇವರು ಯಾವಾಗಲೂ ಕೂಡ ಅವರ ಪಾಲಿಗೆ ಇರಲಿದ್ದಾನೆ ಎಂಬುದಕ್ಕೆ ನಾನು ಸಣ್ಣ ಉದಾಹರಣೆಯಾಗಿದ್ದೇನೆ. ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದವನು ಮಹಾಮಂಡಳದ ಅಧ್ಯಕ್ಷನಾಗಲೂ ಸಾಧ್ಯವಾ? ಎಂದ ಜಿಟಿಡಿ, ನಾನು 1969–70ರಲ್ಲಿ ಮೈಸೂರು ಜಿಲ್ಲಾ ಸಹಕಾರ ಯೂನಿಯನ್‌ನಲ್ಲಿ ಟ್ರೈನಿಂಗ್ ಪಡೆಯಲು ಹೋಗಿದ್ದೆ. ಕಾರಣ ಅಂದಿನ ಪ್ರಧಾನಿಗಳಾದ ಇಂದಿರಾ ಗಾಂಧಿಯವರು ವಾಣಿಜ್ಯ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಿದ್ದರಿಂದ ಹಳ್ಳಿ ಹಳ್ಳಿಯಲ್ಲೂ ಶಾಖೆಗಳನ್ನು ತೆರೆಯಲು ಬ್ಯಾಂಕ್‌ನವರು ಬರುತ್ತಿದ್ದರು. ಅದರಂತೆ ನಮ್ಮೂರಿಗೂ ಬಂದಿದ್ದರು.

ಆಗ ನಾನು ಬರೀ 12 ಸಾವಿರ ಸಾಲಕ್ಕೆ ಅರ್ಜಿ ಹಾಕಿದ್ದೆ. ಆದರೆ, ಬ್ಯಾಂಕ್‌ನಲ್ಲಿ ನೀನು 10ನೇ ಕ್ಲಾಸ್ ಪಾಸ್ ಮಾಡಿಲ್ಲ ಎಂದೇಳಿ ಸಾಲ ಕೊಡಲಿಲ್ಲ. ಹಾಗೆಯೇ ಬಿ.ಕಾಂ, ಬಿಎ ಓದಿದವರೆಲ್ಲಾ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿ ಕೆಲಸಕ್ಕೆ ಸೇರುತ್ತಿದ್ದರು. ನಾನು ಕೂಡ ಕಾರ್ಯದರ್ಶಿಯಾಗಿ ಕೆಲಸಕ್ಕೆ ಸೇರಬೇಕು ಎಂದುಕೊಂಡಿದ್ದೆ. ಅದೇ ಸಂದರ್ಭದಲ್ಲಿ ಶ್ರವಣಬೆಳಗೊಳದಿಂದ ಬಂದು ನಮ್ಮೂರಿನ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದ ಮರೀಗೌಡನಿಗೆ ಸಹಾಯ ಮಾಡುತ್ತಾ ಅವನ ಕೆಲಸವನ್ನು ಮಾಡುತ್ತಿದ್ದೆ. ಮುಂದೆ ಆತ ಬೇರೆ ಕಡೆ ಕೆಲ್ಸ ಸಿಕ್ತು ಎಂದು ಕೆಲಸ ಬಿಟ್ಟು ಹೋದ. ಆಗ ಸಂಘದ ನಿರ್ದೇಶಕರೆಲ್ಲರೂ ನನ್ನನ್ನೇ ಕಾರ್ಯದರ್ಶಿ ಮಾಡಬೇಕು ಎಂದು ಯೂನಿಯನ್ ಕಾರ್ಯದರ್ಶಿ ಹಾಗೂ ವಕೀಲರೂ ಆಗಿದ್ದ ಆರ್.ಕೆ.ಕಾಳೇಗೌಡ ಅವರ ಬಳಿಗೆ ಕರೆದುಕೊಂಡು ಹೋಗಿ ಕೇಳಿದಾಗ ನಿನ್ನನ್ನು ಕಾರ್ಯದರ್ಶಿ ಮಾಡಕ್ ಬರಲ್ಲ ಅಂದರು. ನಂತರ ಅಲ್ಲಿಂದ ದೊಡ್ಡ ಸಿದ್ದೇಗೌಡರ ಬಳಿ ಹೋದಾಗ ಅವರು, ನಿಮ್ಮ ಕೋ–ಆಪರೇಟಿವ್ ಬ್ಯಾಂಕ್‌ನವರು ಲೆಟರ್ ಕೊಟ್ಟರೆ ಆಗುತ್ತೆ. ಅದಕ್ಕೂ ಮುನ್ನ ಟ್ರೈನಿಂಗ್‌ಗೆ ಹೋಗು ಎಂದರು.

ಅದರಂತೆ ನಾನು ಟ್ರೈನಿಂಗ್ ಮುಗಿಸಿ ನಮ್ಮೂರಿನ ಸಹಕಾರ ಸಂಘದ ಕಾರ್ಯದರ್ಶಿಯಾದೆ ಎಂದು ತಮ್ಮ ಹಳೇ ದಿನಗಳನ್ನು ಮೆಲುಕು ಹಾಕಿದರು.

ಮುಂದೆ 1972ರಲ್ಲಿ ಕೆನರಾ ಬ್ಯಾಂಕ್‌ನ ಕೇಂದ್ರ ಕಚೇರಿಯಿಂದ ಮೈಸೂರು ಭಾಗದಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳ ಕಾರ್ಯದರ್ಶಿಯೊಬ್ಬರಿಗೆ ಬೆಸ್ಟ್ ವರ್ಕಿಂಗ್ ಅವಾರ್ಡ್ ಕೊಡಬೇಕು ಎಂದು ಕರೆದಿದ್ದರು. 250 ರೂ. ನಗದು ಬಹುಮಾನದ ಅವಾರ್ಡ್ ಮೊದಲ ಬಾರಿಗೆ ನನಗೆ ಸಿಕ್ಕಿತು. ರೆಕಾರ್ಡ್ ಬುಕ್ ನಿರ್ವಹಣೆ, ಸಾಲ ವಸೂಲಿ ಮತ್ತು ಕೆಲಸವನ್ನು ಗಮನಿಸಿ ನನಗೆ ಅವಾರ್ಡ್ ನೀಡಿದರು. ಮೊದಲು ಸಹಕಾರ ಸಂಘದಲ್ಲೇ ಪಡಿತರ ವಿತರಣೆ ಮಾಡಲಾಗುತ್ತಿತ್ತು. ರಾತ್ರಿ ವೇಳೆ ಅಲ್ಲಿಯೇ ಮಲಗಿಕೊಂಡು ಕೈಗಾರಿಕೆಗಳಿಂದ ಕೆಲಸ ಮಾಡಿಕೊಂಡು ಬರುವ ಕಾರ್ಮಿಕರಿಗೆ ಅಕ್ಕಿ ಕೊಡುತ್ತಿದ್ದೆ. ಅಕ್ಕಿ ತೆಗೆದುಕೊಂಡವರು ರಾತ್ರಿ ವೇಳೆ ನೆಮ್ಮದಿಯಿಂದ ಊಟ ಮಾಡಿ ಮಲಗುತ್ತಾರಲ್ಲಾ ಎಂಬುದಷ್ಟೇ ನನಗೆ ಸಂತೋಷ ನೀಡುತ್ತಿತ್ತು. ಇದನ್ನೇ ಇಟ್ಟುಕೊಂಡು ನಾನು ರಾಜಕೀಯಕ್ಕೆ ಬಂದಾಗ ಕೆಲವರು ಅಕ್ಕಿ ತೂಗುತ್ತಿದ್ದ, ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದ ಎಂದೇಳಿ ಟೀಕೆ ಮಾಡುತ್ತಿದ್ದರು. ಆದರೆ, ಅವರ ಟೀಕೆಗಳನ್ನು ಸಂತೋಷದಿಂದ ಸ್ವೀಕರಿಸಿದರ ಫಲವಾಗಿ ಕಾರ್ಯದರ್ಶಿಯಾಗಿದ್ದವನೂ ಮಹಾ ಮಂಡಳದ ಅಧ್ಯಕ್ಷನಾಗಿದ್ದೇನೆ. ನಾನೇನು ಶ್ರೀಮಂತನೂ ಅಲ್ಲ. ದುಡ್ಡು ನನ್ನ ಬಳಿಯಿಲ್ಲ. ಯಾರಾದರೂ ಪ್ರಾಮಾಣಿಕವಾಗಿ ಬಡ ಜನರ ಕಣ್ಣೀರು ಒರೆಸಿದರೆ ಅವರಿಗೆ ದೈವ ಬಲ ದೊರಕಲಿದೆ. ದೇವರು ಯಾವಾಗಲೂ ಕೂಡ ಅವರ ಪಾಲಿಗೆ ಇರಲಿದ್ದಾನೆ ಎಂಬುದು ನನ್ನ ವಿಚಾರದಲ್ಲಿ ನಿಜವಾಗಿದೆ ಎಂದು ತಿಳಿಸುವ ಮೂಲಕ ಪ್ರಾಮಾಣಿಕತೆ ಇದ್ದರಷ್ಟೇ ಇದೆಲ್ಲಾ ಸಾಧ್ಯ ಎಂಬುದನ್ನು ತಮ್ಮ ಅನುಭವದ ಮೂಲಕ ತಿಳಿಸಿಕೊಟ್ಟರು.

**ಸಾಯುವವರೆಗೂ ಕಲಿಯುತ್ತಿರಬೇಕು:** ಸಹಕಾರ ಸಂಘಗಳ ಅಧಿಕಾರಿಗಳಿಗೆ ನಿಮಗೆ ತರಬೇತಿ ಬೇಕಾ ಎಂದು ಪ್ರಶ್ನಿಸಿದ ಜಿಟಿಡಿ, ನಿಮಗೆ ಈಗಾಗಲೇ ಸಾಕಷ್ಟು ವೃತ್ತಿ ಅನುಭವವಿದೆ. ಬೇರೆಯವರಿಗೆ ತಿಳುವಳಿಕೆ ನೀಡುವ ಹಂತದಲ್ಲಿದ್ದೀರಿ. ಆದರೂ ತರಬೇತಿ ಕಾರ್ಯಕ್ರಮಕ್ಕೆ ಆಸಕ್ತಿಯಿಂದ ಭಾಗವಹಿಸಿರುವುದು ಪ್ರತಿಯೊಬ್ಬ ಮನುಷ್ಯ ಸಾಯುವ ದಿನದವರೆಗೂ ನಿರಂತರವಾಗಿ ಕಲಿಯುತ್ತಿರಬೇಕು ಎಂಬುದನ್ನು ತೋರಿಸುತ್ತದೆ. ಅದು ಸತ್ಯವೂ ಆಗಿದೆ. ಸಂಪೂರ್ಣವಾಗಿ ಕಲಿಯಲು ಯಾರಿಂದಲೂ ಸಾಧ್ಯವಿಲ್ಲ. ಸಾಯೋ ದಿನದವರೆಗೂ ಕಲಿಯುವುದು ತುಂಬಾನೇ ಇರುತ್ತೆ ಎಂದು ಕಲಿಕೆಯ ಮಹತ್ವ ತಿಳಿಸಿಕೊಟ್ಟರು.

ಬಳಿಕ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸಲಹೆಗಾರ ಪಿ.ರುದ್ರಪ್ಪ ಅವರಿಂದ ಉಪನ್ಯಾಸ ನಡೆಯಿತು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಬಿ.ಸಿ.ಲೋಕಪ್ಪಗೌಡ, ಕಾರ್ಯದರ್ಶಿ ಲಕ್ಷ್ಮಿಪತಯ್ಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಲಿ ರುಚಿ ಹೋಟೆಲ್‌ನಲ್ಲಿ 'ರಾಜ್ಯದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಆಡಳಿತ ಕಾರ್ಯವಿಧಾನ ಮತ್ತು ಸಹಕಾರ ಚಳವಳಿಯಲ್ಲಿ ಇತ್ತೀಚಿನ ಪ್ರವೃತ್ತಿ ಕುರಿತ ಎರಡು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಉಪಸ್ಥಿತರಿದ್ದರು.

## ಸಹಕಾರ ಕ್ಷೇತ್ರ ಬಹು ಮಹತ್ವದ ಕ್ಷೇತ್ರ: ಹೆಚ್.ವಿ.ರಾಜೀವ್

ಗ್ರಾಮೀಣ ಜನರ ಆರ್ಥಿಕ ಸುಭದ್ರತೆಗಾಗಿ ಕೆಲಸ ಮಾಡುತ್ತಿರುವ ಬಹು ಮಹತ್ವದ ಕ್ಷೇತ್ರವೆಂದರೆ ಸಹಕಾರ ಕ್ಷೇತ್ರವಾಗಿದೆ ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು. ಸಹಕಾರ ಇಲಾಖೆ ಎಂಬುದೇ ಒಂದು ವಿಶೇಷ. ಗ್ರಾಮೀಣ ಜನರ ಆರ್ಥಿಕ ಸುಭದ್ರತೆಗಾಗಿ ಕೆಲಸ ಮಾಡುತ್ತಿರುವ ಬಹು ಮಹತ್ವದ ಕ್ಷೇತ್ರವೆಂದರೆ ಅದು ಸಹಕಾರ ಕ್ಷೇತ್ರವಾಗಿದೆ. ನಗರೀಕರಣದ ಅಲೆಯನ್ನು ಗೋಡೆಯ ರೀತಿಯಲ್ಲಿ ತಡೆದು ಗ್ರಾಮೀಣ ಬದುಕನ್ನು ಉಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವುದು ಸಹಕಾರ ಕ್ಷೇತ್ರ. ಸಹಕಾರ ಕ್ಷೇತ್ರದ ಭಾಗವಾಗಿರುವ ಹೈನುಗಾರಿಕೆ, ಮಳೆ–ಬೆಳೆ ಕಡಿಮೆಯಾದಾಗಲೂ ರೈತ ಆರ್ಥಿಕ ಸಮಸ್ಯೆಯನ್ನು ಬಗೆಹರಿಸುತ್ತಿದೆ ಎಂದು ಹೇಳಿದರು.

## ಕೊನೆಗೆ ಉಳಿಯುವುದು ಸತ್ಯವೆ...!

ನಾನು ಯಾರಿಗೆ ಒಳ್ಳೆಯದನ್ನು ಮಾಡಿದ್ದರು ಎಲ್ಲಿಯೂ ಹೇಳಿಲ್ಲಾ.. ಹೊರಗಡೆ ತೋರಿಸಿಕೊಂಡಿಲ್ಲ. 1983ರಲ್ಲಿ ಮೂರ್‍ನಾಲ್ಕು ಜನರನ್ನು ಸೇರಿಸಿಕೊಂಡು ಸಿದ್ದರಾಮಯ್ಯ ಅವರನ್ನು ಅಭ್ಯರ್ಥಿ ಮಾಡಿದ್ದು ನಾನೆ. ಅವರಿಗಾಗಿ 25 ವರ್ಷ ದುಡಿದಿದ್ದೇನೆ. ಅವರ ಬಾಯಲ್ಲೂ ಜಿ.ಟಿ.ದೇವೇಗೌಡ ಮಾಡಿದ್ದಾನೆ ಎಂಬುದು ಬಂದಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕು ಎಂಬುದು ನಮ್ಮ ಗುರಿಯೂ ಆಗಿತ್ತು. ನಾನು ಮೊದಲು ಸಿದ್ದರಾಮಯ್ಯ ಅವರು ಚುನಾವಣೆಗೆ ನಿಲ್ಲುತ್ತಾರಲ್ಲಾ ಅವರ ವಿರುದ್ಧ ನಿಲ್ಲಬಾರದೆಂದೇ ಹುಣಸೂರಿನಲ್ಲೇ ಉಳಿದುಕೊಂಡೆ. ನಂತರ ಪಕ್ಷ ಬೇರೆ ಬೇರೆಯಾಯಿತು. ಎಲ್ಲಾ ಹೊರಟು ಹೋದರು. ನಾನೊಬ್ಬ ಉಳಿದುಕೊಂಡೆ. ಅವರು ಮತ್ತೆ ಸತ್ಯನಾರಾಯಣ ಅವರನ್ನು ನಿಲ್ಲಿಸಿದರು. ಇನ್ನೂ ಸಿದ್ದರಾಮಯ್ಯ ಅವರು ಬರೋದಿಲ್ಲವಲ್ಲಾ ಎಂದು ಚಾಮುಂಡೇಶ್ವರಿಗೆ ಬಂದೆ. ಜಿಪಂ ಅಧ್ಯಕ್ಷನಾದೆ, ಎಂಪಿ ಚುನಾವಣೆಗೆ ನಿಂತು ಸೋತಿದ್ದೆ. ನೋಡಿ... ಅವರಿಗೇನ್ ಬುದ್ಧಿ ಬಂತೋ ನನ್ನನ್ನು ಸೋಲಿಸಬೇಕು ಅಂತ ಇಲ್ಲಿಗೆ ಬಂದು ನಿಂತುಕೊಂಡರು. ಇದನ್ನು ರಾಜಕೀಯವಾಗಿ ಜಂಬದಿಂದ ಹೇಳುತ್ತಿಲ್ಲ. ದೇವರು ಕೈಬಿಡುವುದಿಲ್ಲ ಎಂಬ ಅರ್ಥದಲ್ಲಿ ಹೇಳುತ್ತಿದ್ದೇನೆ. ಮುಖ್ಯಮಂತ್ರಿಯಾಗಿದ್ದವರ ವಿರುದ್ಧವೇ ಜನ ನನ್ನನ್ನು 33 ಸಾವಿರ ಮತಗಳಿಂದ ಗೆಲ್ಲಿಸಿದರು. ಕೇಂದ್ರಕ್ಕೂ ಈ ಮಾಹಿತಿ ಮುಟ್ಟುವಂತೆ ಟಿವಿ ಮಾಧ್ಯಮಗಳಲ್ಲಿ ವರದಿಯಾಯಿತು. ಯಾವತ್ತು ಕೂಡ ಸತ್ಯ ಮುಚ್ಚಿಡಲು ಸಾಧ್ಯವಿಲ್ಲ. ಕೊನೆಗೆ ಉಳಿಯುವುದು ಸತ್ಯವೆ. 25 ವರ್ಷಕ್ಕೆ ಇದೊಂದು ನಿದರ್ಶನವಾಯಿತು. ನಮ್ಮ ನಡೆ ಸತ್ಯವಾಗಿದ್ದರೆ ಆ ಸತ್ಯ ನಮ್ಮನ್ನು ಕಾಪಾಡಲಿದೆ.

–ಜಿ.ಟಿ.ದೇವೇಗೌಡ, ಶಾಸಕ, ಚಾಮುಂಡೇಶ್ವರಿ ಕ್ಷೇತ್ರ

"ನನಗೆ ಗೊತ್ತಿರುವ ಪ್ರಕಾರ 1965–66ನೇ ಇಸವಿಯಲ್ಲಿ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟರ್ ಜೀಪ್‌ನಲ್ಲಿಯೇ ನಮ್ಮೂರಿಗೆ ಬರುತ್ತಿದ್ದರು. ಅವರು ಬರುತ್ತಿದ್ದಂತೆ ಸಾಲಗಾರರೆಲ್ಲಾ ಓಡಿಹೋಗುತ್ತಿದ್ದರು. ಅಂದಿನ ಸೊಸೈಟಿಗಳಲ್ಲಿ ದೊಡ್ಡ ದೊಡ್ಡೋರು ಬಡವರ ಹೆಸರಿನಲ್ಲಿ ಸಾಲ ಮಾಡಿ ಬಿಡುತ್ತಿದ್ದರು. ಇದರಿಂದ ಸಾಲ ಮರು ಪಾವತಿಯಾಗದ ಪರಿಸ್ಥಿತಿ ಇತ್ತು. ಇದರಿಂದ ಅಧಿಕಾರಿಗಳ ಬಗ್ಗೆ ಭಯ ಇರುತ್ತಿತ್ತು. ಫೀಲ್ಡ್ ಆಫೀಸರ್‌ಗಳು ಸಾಲ ಪಡೆದವರು ಜಮೀನು ಇನ್ನಿತರೆ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ನಡೆಸಿದರೆ, ಸೂಪರ್‌ವೈಸರ್‌ಗಳು ಸಹಕಾರ ಸಂಘಗಳಿಗೆ ಭೇಟಿ ನೀಡಿ, ರೈತರಿಗೆ ಸಾಲ ಪಾವತಿ ರೆಕಾರ್ಡ್ ಬುಕ್, ಸ್ಟಾಕ್ ಬುಕ್ ಸೇರಿದಂತೆ ಎಲ್ಲವನ್ನು ಪರಿಶೀಲನೆ ಮಾಡುತ್ತಿದ್ದರು. ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಆದರೆ ಇಂದು ಮೊದಲಿನ ರೀತಿಯಲ್ಲಿ ಉನ್ನತ ಅಧಿಕಾರಿಗಳು ಸಹಕಾರ ಸಂಘಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದು ಕಡಿಮೆಯಾಗಿದೆ ಎಂದು ತಿಳಿಸಿದರಲ್ಲದೆ ಸಹಕಾರ ಸಂಘದ ಉಳಿಯಬೇಕಾದರೆ ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಸಂಘ ಉಳಿಸಲು ಅವಶ್ಯವಿರುವ ಪರಿಹಾರಗಳನ್ನು ಕಂಡುಕೊಳ್ಳಬೇಕು. –ಜಿ.ಟಿ.ದೇವೇಗೌಡ

## ಸಾಲ ಮನ್ನಾ ಸಮಸ್ಯೆ

ಹಿಂದೆ ಬರಗಾಲ ಬಂದಾಗ ಸಾಲ ಕಟ್ಟಲಾಗದ ರೈತರ ಬಳಿ ಕಂದಾಯ ರೂಪದಲ್ಲಿ ಸಾಲ ವಸೂಲಿ ಮಾಡಿ, ಮತ್ತೆ ಸಾಲ ಕೊಡುವ ವ್ಯವಸ್ಥೆ ಇತ್ತು. ಆದರೆ ಸಾಲ ಮನ್ನಾ ಯೋಜನೆ ಜಾರಿಗೆ ಬಂದ ಬಳಿಕ ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುತ್ತಿರುವವರು ಇನ್ನೂ ಕಟ್ಟುತ್ತಲೇ ಇದ್ದಾರೆ. ಸಾಲ ಕಟ್ಟದ ಕೆಲವೇ ವ್ಯಕ್ತಿಗಳ ಸಾಲ ಮನ್ನಾ ಆಗುತ್ತಿರುವುದರಿಂದ ಪ್ರಾಮಾಣಿಕವಾಗಿ ಸಾಲ ಕಟ್ಟುವವನಲ್ಲಿ ನಾನ್ಯಾಕೆ ಕಟ್ಟಬೇಕು ಎಂಬ ಪ್ರಶ್ನೆ ಮೂಡುವಂತಾಗಿದೆ. ಇದರಿಂದ ಸಹಕಾರ ಸಂಘಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ಜಿಟಿಡಿ ಮನವರಿಕೆ ಮಾಡಿಕೊಟ್ಟರು.

## ನಾಳೆ ಪಾರಂಪರಿಕ ನಿರ್ಮಾಣ ಸಂರಕ್ಷಣೆ ಕುರಿತು ವಿಚಾರಗೋಷ್ಠಿ

ಮೈಸೂರು,ಜ.4(ಪಿಎಂ)–ಇಂಟಾಚ್ ಬೆಂಗಳೂರು ಘಟಕ, ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಮೈಸೂರು ಮತ್ತು ಎಸ್ಥೆಟಿಕ್ ಆರ್ಕಿಟೆಕ್ಟ್ಸ್ ಸಂಯುಕ್ತಾಶ್ರಯದಲ್ಲಿ 'ಮಾರುಕಟ್ಟೆಗಳು ಜೀವಂತ ಪರಂಪರೆ; ಸಂರಕ್ಷಣೆ ಮತ್ತು ಮನರುಜ್ಜೀವನದ ಸಂದರ್ಭ' ಕುರಿತು ಜ.6ರಂದು ವಿಚಾರಗೋಷ್ಠಿ ಆಯೋಜಿಸಲಾಗಿದೆ.


ಅಂದು ಬೆಳಗ್ಗೆ 7.30ಕ್ಕೆ ದೇವರಾಜ ಮಾರುಕಟ್ಟೆ ಚಿಕ್ಕಗಡಿಯಾರ ಆವರಣದಲ್ಲಿ ಅರ್ಬನ್ ಸ್ಕೆಚರ್ಸ್ ಮೈಸೂರು ವತಿಯಿಂದ ಸ್ಕೆಚಿಂಗ್ ಕಾರ್ಯಕ್ರಮ ನಡೆಯಲಿದೆ. ಬಳಿಕ ಬೆಳಗ್ಗೆ 9.30ಕ್ಕೆ ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಸಭಾಂಗಣದಲ್ಲಿ ವಿಚಾರಗೋಷ್ಠಿ ನಡೆಯಲಿದೆ.

ಇದರಲ್ಲಿ ಮುಖ್ಯ ಅತಿಥಿಯಾಗಿ ಮೈಸೂರು ರಾಜವಂಶಸ್ಥ ಯದುವೀರ ಶ್ರೀಕಂಠದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳಲಿದ್ದಾರೆ. ಖ್ಯಾತ ಪಾರಂಪರಿಕ ತಜ್ಞರಾದ ಡಾ.ಶಿಖಾ ಜೈನ್, ಪ್ರೊ.ಸಂಘಮಿತ್ರ ಬಸು, ಸ್ಟ್ರಕ್ಚರಲ್ ಇಂಜಿನಿಯರ್‌ಗಳಾದ ಡಾ.ಎಸ್.ರಘುನಾಥ್, ಪ್ರೊ.ರಂಜಿತ್ ಪಾಟೀಲ್ ವಿಚಾರ ಮಂಡನೆ ಮಾಡಲಿದ್ದಾರೆ. ಬಳಿಕ ಮಧ್ಯಾಹ್ನ ದೇವರಾಜ ಮಾರುಕಟ್ಟೆ ಸುತ್ತಮುತ್ತ ಹೆರಿಟೇಜ್ ವಾಕ್ ಕಾರ್ಯಕ್ರಮ ಆಯೋಜಿಸಿದ್ದು, ಇದರಲ್ಲಿ ಪಾಲ್ಗೊಳ್ಳಲು ನೋಂದಣಿಗಾಗಿ ಭುವನೇಶ್ವರಿ (90081 00827) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಲಕ್ಷದ್ವೀಪದ ಸೌಂದರ್ಯಕ್ಕೆ ಮಾರುಹೋದ ಪ್ರಧಾನಿ

### ಸ್ನಾರ್ಕೆಲಿಂಗ್ ಅನುಭವ ಬಿಚ್ಚಿಟ್ಟ ನಮೋ





**ಕವರತ್ತಿ (ಲಕ್ಷ ದ್ವೀಪ):** ಪ್ರವಾಸಿಗರ ಸ್ವರ್ಗ ಲಕ್ಷದ್ವೀಪಕ್ಕೆ ಭೇಟಿ ನೀಡಿ ವಾಪಸ್ಸಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿನ ಪ್ರಕೃತಿಯ ಸೌಂದರ್ಯಕ್ಕೆ ಮಾರುಹೋಗಿ, ಪ್ರಕೃತಿಯ ಮಡಿಲಲ್ಲಿ ಕೆಲ ಸಮಯ ಕಳೆದು ಬಂದಿದ್ದಾರೆ. ಇದಕ್ಕೆ ಸಂಬಂಧಿಸಿದ ಫೋಟೋಗಳನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, ಸಿಕ್ಕಾಪಟ್ಟೆ ವೈರಲ್ ಆಗುತ್ತಿವೆ. ಪ್ರಧಾನಿ ಮೋದಿ ಅವರ ಉತ್ಸಾಹಕ್ಕೆ ನೆಟ್ಟಿಗರು ಫಿದಾ ಆಗಿದ್ದಾರೆ.

ಸುಂದರ ಹಾಗೂ ವಿಶಾಲವಾದ ಕಡಲ ಕಿನಾರೆಯ ಮುಂದೆ ನಿಂತು ಪ್ರಧಾನಿ ಮೋದಿ ಕ್ಯಾಮೆರಾಗೆ ಪೋಸ್ ನೀಡಿದ್ದಾರೆ. ಇದರೊಂದಿಗೆ ಸ್ನಾರ್ಕೆಲಿಂಗ್ ಎಂಜಾಯ್ ಮಾಡಿದ್ದಾರೆ. ಲಕ್ಷದ್ವೀಪ ಭೇಟಿ ಬಗ್ಗೆ ಬರೆದು ಕೊಂಡಿರುವ ಮೋದಿ, ಪ್ರಾಚೀನ ಕಡಲತೀರಗಳ ಉದ್ದಕ್ಕೂ ಆ ಮುಂಜಾನೆ ನಡಿಗೆಗಳು ಆನಂದದ ಕ್ಷಣಗಳಾಗಿವೆ ಎಂದಿದ್ದಾರೆ. ಇತ್ತೀಚೆಗಷ್ಟೇ ಲಕ್ಷದ್ವೀಪದ ಜನರ ಮಧ್ಯೆ ಇರುವ ಅವಕಾಶ ಸಿಕ್ಕಿತು. ಅದರ ದ್ವೀಪಗಳ ಅದ್ಭುತ ಸೌಂದರ್ಯ ಮತ್ತು ಅಲ್ಲಿನ ಜನರ ಆತ್ಮೀಯತೆಗೆ ನಾನಿನ್ನೂ ವಿಸ್ಮಯಗೊಂಡಿದ್ದೇನೆ. ಅಗತ್ತಿ, ಬಂಗಾರಂ ಮತ್ತು ಕವರಟ್ಟಿಯಲ್ಲಿ ಜನರೊಂದಿಗೆ ಸಂವಾದ ನಡೆಸುವ ಅವಕಾಶ ಸಿಕ್ಕಿತು. ಅವರ ಆತಿಥ್ಯಕ್ಕಾಗಿ ನಾನು ದ್ವೀಪಗಳ ಜನರಿಗೆ ಧನ್ಯವಾದ ಹೇಳುತ್ತೇನೆ. ಲಕ್ಷದ್ವೀಪದ ವೈಮಾನಿಕ ನೋಟಗಳು ಸೇರಿದಂತೆ ಕೆಲವು ಫೋಟೋಗಳು ಇಲ್ಲಿವೆ ಎಂದು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.


ಅಂದಹಾಗೆ ಮೋದಿ 1150 ಕೋಟಿ ರೂ.ಗೂ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಇದೇ ವೇಳೆ ಉದ್ಘಾಟಿಸಿದ್ದಾರೆ. ಲಕ್ಷದ್ವೀಪದ ಪ್ರಶಾಂತತೆಯು 140 ಕೋಟಿ ಭಾರತೀಯರ ಕಲ್ಯಾಣಕ್ಕಾಗಿ ಇನ್ನಷ್ಟು ಶ್ರಮಿಸುವುದು ಹೇಗೆ ಎಂದು ಪ್ರತಿಬಿಂಬಿಸಲು ಅವಕಾಶವನ್ನು ನೀಡಿತು ಎಂದಿದ್ದಾರೆ. ಪ್ರವಾಸದ ವೇಳೆ ಮೋದಿ ಸ್ನಾರ್ಕೆಲಿಂಗ್ ಅನ್ನು ಸಹ ಪ್ರಯತ್ನಿಸಿದ್ದಾರೆ. ಇದೆಂಥಾ ಉಲ್ಲಾಸದಾಯಕ ಅನುಭವವಾಗಿತ್ತು ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ತಮ್ಮಲ್ಲಿರುವ ಸಾಹಸ ಪ್ರವೃತ್ತಿಯನ್ನು ಅಪ್ಪಿಕೊಳ್ಳಲು ಬಯಸುವವರಿಗೆ, ಲಕ್ಷದ್ವೀಪವು ಪ್ರಮುಖ ಆದ್ಯತೆಯಾಗಿರಲಿ ಎನ್ನುವ ಮೂಲಕ ಲಕ್ಷದ್ವೀಪದ ಪ್ರವಾಸೋದ್ಯಮವನ್ನು ಉತ್ತೇಜಿಸಿದರು.

## ವಾರ್ಷಿಕ ಮಹಾಸಭೆ

**ಮೈಸೂರು:** ಮೈಸೂರಿನ ಶ್ರೀ ಶಂಕರ ಜಯಂತಿ ಸಭಾದ ವಾರ್ಷಿಕ ಮಹಾಸಭೆಯು ಜ.7ರಂದು ಬೆಳಗ್ಗೆ 11ಕ್ಕೆ ಸರಸ್ವತಿಪುರಂನಲ್ಲಿರುವ ತೆಂಗಿನ ತೋಪು ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಇದರ ಅಂಗವಾಗಿ ಜ.6ರಂದು ಮಧ್ಯಾಹ್ನ 2ಕ್ಕೆ ಸಭಾ ಸದಸ್ಯರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

## ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ

ಮೈಸೂರು,ಜ.4–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜ.5ರಿಂದ 31ರವರೆಗೆ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 99860 82215, ದೂ. 0821–2548231 ಸಂಪರ್ಕಿಸಿ.




## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ, ಮೈಸೂರು ಸಿಟಿ, ಶ್ರೀರಾಂಪುರ 2ನೇ ಹಂತ, ಬಿ.ಇ.ಎಂ.ಎಲ್., ಬಡಾವಣೆ, 9ನೇ ಬ್ಲಾಕ್, ಮನೆ ನಂ.01, ರಲ್ಲಿ ವಾಸವಾಗಿರುವ ಎಂ ಭರತ್ ಬಿನ್ ಸಿ ಎನ್ ಮಂಚೇಗೌಡ ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ, ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು, ಸಂತೇಮರಳ್ಳಿ ಹೋಬಳಿ, ಕಮರವಾಡಿ ಗ್ರಾಮದ ಸರ್ವೆ ನಂ. 117/1ರಲ್ಲಿ ಶ್ರೀ. ಡಿ. ಪರಶಿವಮೂರ್ತಿ ಬಿನ್ ಲೇಟ್. ದೊಡ್ಡಸಿದ್ದಯ್ಯರವರ ಮಾಲೀಕತ್ವಕ್ಕೆ ಒಳಪಟ್ಟಿರುವ 2 ಎಕರೆ ಜಮೀನು **(MR No. 23/97-98)** ಮತ್ತು ಅವರ ಸಹೋದರ ಶ್ರೀ ಡಿ. ಕೆಂಪರಾಜು ಬಿನ್ ಲೇಟ್ ದೊಡ್ಡಸಿದ್ದಯ್ಯರವರ ಮಾಲೀಕತ್ವಕ್ಕೆ ಒಳಪಟ್ಟಿರುವ 3 ಎಕರೆ 12 ಗುಂಟೆ ಜಮೀನು **(MR No. 07/97-98)** ಸೇರಿದಂತೆ ಒಟ್ಟು ವಿಸ್ತೀರ್ಣ 5 ಎಕರೆ 12 ಗುಂಟೆ ಜಮೀನನ್ನು ಅದರ ಮಾಲೀಕರುಗಳಾದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಾಡು ಕೊತ್ತನಹಳ್ಳಿ ಗ್ರಾಮದ ನಿವಾಸಿಗಳಾದ ಲೇಟ್. ದೊಡ್ಡಸಿದ್ದಯ್ಯರವರ ಮಕ್ಕಳುಗಳಾದ ಶ್ರೀ ಡಿ. ಪರಶಿವಮೂರ್ತಿ ಮತ್ತು ಶ್ರೀ ಡಿ. ಕೆಂಪರಾಜು, ರವರುಗಳಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ.

ಸದರಿ ಮಾರಾಟ ವ್ಯವಹಾರದ ಸಂಬಂಧವಾಗಿ ಯಾರಿಗಾದರೂ ಯಾವುದೇ ರೀತಿಯ ತಂಟೆ ತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಇಂದಿನಿಂದ 7 ದಿನಗಳ ಒಳಗಾಗಿ, ಖುದ್ದಾಗಿ ಅಥವಾ ವಕೀಲರ ಮೂಲಕ ಹಾಗೂ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ತಿಳಿಸಿರುವ ವಕೀಲರನ್ನು ಸಂಪರ್ಕಿಸಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ತಂಟೆ ತಕರಾರುಗಳೂ ಇಲ್ಲವೆಂದು ಭಾವಿಸಿ ಸದರಿ ಸ್ವತ್ತನ್ನು ಖರೀದಿ ಮಾಡಲು ಹಕ್ಕುಳ್ಳವರಾಗಿರುತ್ತಾರೆ. ನಂತರ ಬಂದಂತಹ ತಂಟೆ ತಕರಾರು ಇನ್ನಿತರೆ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರಾದ ಖರೀದಿದಾರರು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು, ಸಂತೇಮರಳ್ಳಿ ಹೋಬಳಿ, ಕಮರವಾಡಿ ಗ್ರಾಮದ ಸರ್ವೆ ನಂ.117/ 1ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 12 ಗುಂಟೆ ಜಮೀನಿಗೆ ಚಕ್ಕುಬಂಧಿ:

ಪೂರ್ವಕ್ಕೆ: ಸಿದ್ದರಾಜುರವರ ಜಮೀನು ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ : ಅಮವಾಸೆ ಮಾದಯ್ಯರವರ ಜಮೀನು.

Sd/- T.N. Nagananda, MA, LL.B, PGDCA, D.E.H.M., Advocate, KAR 615/2000. Chamber: #2547/1, 1st Floor, Kantharaja Urs Road, K.G. Koppal, Mysuru-570 009. Mob: 9880620588

**04-01-2024**

## PUBLIC NOTICE

Notice is hereby given that **M/S FRIENDLY LOGISTICS (INDIA) PRIVATE LIMITED,** is desirous to sell the Schedule Property hereunder written, to my client and any person or persons claiming any interest on the under mentioned Schedule Property or any part thereof, is hereby required to communicate the same to me with documentary evidence at my office, situated at **Door No.2765/1A D13/A1, "KEY-ANS", 5th Main Road, V.V. Puram (V.V. Mohalla), Mysore – 570 002, within 15 (Fifteen) days** from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

**SCHEDULE PROPERTY**

Undeveloped project having sital area bearing Site Nos.1 to 175 of various dimensions as mentioned in the table hereunder, which are as per approved layout plan, which project sital area is measuring 20,779.72 Square Meters in Converted Land for Residential Purpose bearing Survey No.17/5, situated at Vaddarahalli Village, Bilikere Hobli, Hunsur Taluk, Mysore District, bounded on: **East:** Land bearing Survey No.17/4 and Survey No.24, **West:** Road and Land bearing Survey No.18, **North:** Land bearing Survey No.17/1, 17/2, 17/3 and 17/4 and **South:** Road and Land bearing Survey No.20.

**Sd/- Dhirendra Kumar R. Mehta**
Advocate, KEY-ANS LAW SOLUTIONS
Place: Mysore Date: 4-1-2024

## In the Court of the Additional Civil Judge and JMFC at Chamarajanagar

**O.S. No. 5/2022**

**Plaintiff: Karnataka Gramin Bank, Chamarajanagar.**

**V/s**

**Defendants: 1) K. Meghana, W/o Chandan, aged about 31 years.**
**2) S. Malakumar, W/o Kumar, aged about 56 years, Both are R/o #22/264, 2nd Floor, 3rd Cross, Bramarambha Extension, Near R.K. Enterprises, Chamarajanagar.**

**PAPER PUBLICATION**

**Whereas an original suit in O.S. No. 5/2022 has been insituted by plaintiff against the defendants as mentioned above for recovery or loan amount on the file of the learned Addl. Civil Judge and JMFC at Chamarajanagar and the summons has been issued through paper pubication for the appearance of the Defendants before the Court on 02-02-2024 at 11 am either in person or through their advocate/s to answer the said suit. Take notice that in default of your appearance on the days before mentioned, the suit will be heard and determined in your absence.**

**By the order of Court**
**Sd/- Chief Ministerial Officer, Principal Civil Judge and JMFC, Chamarajanagar.**
**Advocate for plaintiff**
**Sd/- M. Shivalingegowda, M.A., LL.B., Chamarajanagar.**

# ಹಲವು ರೋಗಗಳಿಗೆ ಆಯುರ್ವೇದ ಚಿಕಿತ್ಸಾ ಪದ್ಧತಿ ರಾಮಬಾಣ

●ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು ●ಆಯುರ್ವೇದಕ್ಕೆ ವಿಶೇಷ ಶಕ್ತಿ ಇದೆ



ಮೈಸೂರು,ಜ.4(ಆರ್‌ಕೆ)–ಭಾರತದ ಸಾಂಪ್ರದಾಯಿಕ ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಹಲವು ರೋಗಗಳಿಗೆ ಪರಿಹಾರ ಸಿಗಲಿದೆ ಎಂದು ಶಾಸಕ ಜಿ.ಟಿ. ದೇವೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ.

ಆಯುಷ್ ಇಲಾಖೆಯಿಂದ ಮೈಸೂರು ತಾಲೂಕು, ಲಿಂಗಾಂಬುದಿ ಪಾಳ್ಯದಲ್ಲಿ ಏರ್ಪಡಿಸಿದ್ದ ಆಯುಷ್ ಸೇವಾ ಗ್ರಾಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪುರಾತನ ಕಾಲದಿಂದ ನಮ್ಮ ಪೂರ್ವಿಕರು ಬಳಸಿಕೊಂಡು ಬಂದಿರುವ ಆಯುರ್ವೇದ ಪದ್ಧತಿ ಚಿಕಿತ್ಸೆಗೆ ತನ್ನದೇ ಆದ ಶಕ್ತಿ ಇದೆ. ಇದು ನಮ್ಮ ಪಂಚೇಂದ್ರಿಯಗಳನ್ನು ನಿಯಂತ್ರಿಸುತ್ತದೆ ಎಂದರು.

ಆಯುರ್ವೇದವನ್ನು ನಾವು ಚಿಕಿತ್ಸೆಗಿಂತ ಮುಖ್ಯವಾಗಿ ಬದುಕಿನ ಭಾಗ ಎಂಬುದಾಗಿ ಪರಿಗಣಿಸಬೇಕಾಗಿದೆ. ಮುಂದಿನ ಪೀಳಿಗೆಗೆ ಈ ಪದ್ಧತಿಯನ್ನು ತಲುಪಿಸುವ ಕಾರ್ಯ ಮಾಡಬೇಕು. ಆಯುರ್ವೇದವು ಅನೇಕ ರೋಗಗಳನ್ನು ಗುಣಪಡಿಸುವ ಶಕ್ತಿಯನ್ನು ಹೊಂದಿದೆ. ಆಯುರ್ವೇದದ ಮೂಲಕ ಅನೇಕ ರೋಗಗಳನ್ನು ಗುಣಪಡಿಸುವ ಪದ್ಧತಿ ಯುಗ–ಯುಗದಿಂದಲೂ ಇದೆ. ಈ ಪದ್ಧತಿ ಮನಸ್ಸು ಮತ್ತು ದೇಹ ಎರಡನ್ನೂ ಗುಣಪಡಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಆದರೆ ಆಯುರ್ವೇದ ಪದ್ಧತಿ ತಲೆಮಾರುಗಳಿಂದ ಇದ್ದರೂ, ಕೊರೊನಾ ವಕ್ಕರಿಸಿದ ಮೇಲೆ ಸಾಕಷ್ಟು ಜನಪ್ರಿಯವಾಗಿದೆ. ಆದರೆ ಅದರ ಅರಿವು ಮತ್ತು ಜ್ಞಾನದ ಕೊರತೆಯಿಂದ ಆಯುರ್ವೇದದ ಬಗ್ಗೆ ಕೆಲವು ತಪ್ಪು ಗ್ರಹಿಕೆಗಳಿವೆ. ಆದ್ದರಿಂದ ಆಯುರ್ವೇದದ ಬಗ್ಗೆ ನಾವು ತಿಳಿದುಕೊಳ್ಳಬೇಕು. ಈ ನಿಟ್ಟಿನಲ್ಲಿ ಆಯುಷ್ ಇಲಾಖೆ ಕೈಗೊಂಡಿರುವ ಈ ಕಾರ್ಯಕ್ರಮ ಶ್ಲಾಘನೀಯ ಎಂದು ಜಿ.ಟಿ.ದೇವೇಗೌಡರು ನುಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಗ್ರಾಮದ ಮುಖಂಡರಾದ ದೇವಯ್ಯ, ಯೋಗೇಶ್, ಬಂಗಾರಪ್ಪ ರಾಮಣ್ಣ, ಲಕ್ಷ್ಮಯ್ಯ, ದಾಸಯ್ಯ, ಮಲ್ಲಯ್ಯ, ಯಶೋಧ, ಪುಟ್ಟಯ್ಯ, ರಾಮಸ್ವಾಮಿ, ಕೃಷ್ಣಪ್ಪ ಸೇರಿದಂತೆ ಹಲವಾರು ಮುಖಂಡರು ಭಾಗವಹಿಸಿದ್ದರು.

"ಇಂದಿನ ಹೈಪರ್‌ಟೆನ್ಷನ್ ಪ್ರಪಂಚದಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಪ್ರತಿ ನಿತ್ಯ ಯೋಗ, ಧ್ಯಾನಗಳನ್ನು ಮಾಡಬೇಕು. ಹಣ –ಆಸ್ತಿ ಸಂಪಾದನೆ, ಉಳಿತಾಯ ಮುಂತಾದ ವಿಚಾರಗಳತ್ತ ಗಮನಹರಿಸುವಂತೆಯೇ, ಆರೋಗ್ಯದತ್ತಲೂ ಗಮನಹರಿಸುವುದರಿಂದ, ಆರ್ಥಿಕ ಸಮಸ್ಯೆಗಳೂ ಪರಿಹಾರ ಕಾಣುತ್ತವೆ. ಭಾರತದ ಪಾರಂಪರಿಕ ಆಯುರ್ವೇದ ಚಿಕಿತ್ಸೆ ಪಡೆದುಕೊಳ್ಳುವುದರಿಂದ, ಆರೋಗ್ಯ ಸಮಸ್ಯೆಗಳು ದೂರವಾಗುತ್ತವೆ. ಜೊತೆಗೆ, ದೇಹ–ಮನಸ್ಸು ಸುಸ್ಥಿತಿಯಲ್ಲಿರುತ್ತದೆ. ಪ್ರಾಕೃತಿಕ ಆರೋಗ್ಯವನ್ನು ದಯಪಾಲಿಸುವ ನಿಟ್ಟಿನಲ್ಲಿ ಆಯುಷ್ ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. –ಜಿ.ಟಿ.ದೇವೇಗೌಡ

# ಬೆಂಗಳೂರಿಗೆ 10 ಟಿಎಂಸಿ ನೀರು

**● ಕೃಷಿಗೆ ಕಾವೇರಿ ನದಿ ನೀರು ಕಡಿತ ● ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಕ್ರೋಶ**



ಮಂಡ್ಯ, ಜ.4–ಕೃಷಿ ಉದ್ದೇಶಕ್ಕೆ ಅಧಿಕವಾಗಿ ಬಳಕೆ ಮಾಡುತ್ತಿರುವ ಕಾವೇರಿ ನದಿ ನೀರನ್ನು ಕಡಿತಗೊಳಿಸಿ ಬೆಂಗಳೂರು ನಗರಕ್ಕೆ 10 ಟಿಎಂಸಿ ಹೆಚ್ಚುವರಿ ನೀರನ್ನು ಪೂರೈಕೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಆರೋಪಿಸಿ ಜಿಲ್ಲಾ ರೈತ ರಕ್ಷಣಾ ಸಮಿತಿಯ ಕಾರ್ಯಕರ್ತರು ಗುರುವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ಧರಣಿ ನಡೆಸಿದರು.

ಬೆಂಗಳೂರು ಜಲಮಂಡಳಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ವರದಿ ನೀಡುವಂತೆ ಸರ್ಕಾರ ಸೂಚಿಸಿದ್ದು, ಕಾವೇರಿ ನೀರಾವರಿ ನಿಗಮದ ತಾಂತ್ರಿಕ ತಜ್ಞರ ನೇತೃತ್ವದ ಸಮಿತಿ ಭತ್ತ, ಕಬ್ಬು ಹಾಗೂ ಕೃಷಿ ಬೆಳೆಗಳಿಗೆ ಅಗತ್ಯಕ್ಕಿಂತ ಹೆಚ್ಚು ನೀರು ಬಳಸಲಾಗುತ್ತಿದೆ. ಇದನ್ನು ಕಡಿಮೆ ಮಾಡಿದರೆ ಬೆಂಗಳೂರು ಪ್ರದೇಶಕ್ಕೆ ಹೆಚ್ಚಿನ ನೀರು ಒದಗಿಸಬಹುದು ಎಂದು ನೀಡಿರುವ ವರದಿ ಆಧರಿಸಿ ಜಲಮಂಡಳಿಗೆ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಜಿಲ್ಲಾ ರೈತ ರಕ್ಷಣಾ ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಪ್ರತಿಭಟನೆಯಲ್ಲಿ ಆರೋಪಿಸಿದರು.

ಕೃಷಿಗೆ ನೀರು ಕಡಿತಗೊಳಿಸುವ ರೈತ ವಿರೋಧಿ ಸರ್ಕಾರದ ನಿಲುವನ್ನು ಒಪ್ಪುವುದಿಲ್ಲ. ಭತ್ತ ಕಬ್ಬು, ರಾಗಿ ಸೇರಿ ಕೃಷಿ ಬೆಳೆಗಳಿಗೆ ರೈತರು ಅಧಿಕ ನೀರನ್ನು ಎಲ್ಲಿ ಬಳಸುತ್ತಿದ್ದಾರೆ. ಕಟ್ಟು ಪದ್ಧತಿಯಲ್ಲಿ ನಾಲೆಗಳಿಗೆ ನೀರು ಬಿಡಲಾಗುತ್ತಿದೆ. ರೈತರು ಬಿತ್ತುವ ಬೆಳೆಗಳಿಗೆ ಸಕಾಲದಲ್ಲಿ ನೀರು ಇಲ್ಲದ ಬೆಳೆ ಕೈ ಸೇರುತ್ತಿಲ್ಲ. ಸಂಕಷ್ಟ ಕಾಲದಲ್ಲಿ ಬೆಳೆದು ನಿಂತಿರುವ ಬೆಳೆ ಒಣಗಿ ಹೋಗಿದೆ. ಈ ಪರಿಸ್ಥಿತಿ ಈಗಿರುವಾಗ ಬೆಳೆಗೆ ಅಧಿಕ ನೀರನ್ನು ಎಲ್ಲಿ ಬಳಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಕಾವೇರಿ ನ್ಯಾಯ ಮಂಡಳಿ ತೀರ್ಪಿನಲ್ಲಿ ನಿಗದಿ ಮಾಡಿರುವಷ್ಟು ನೀರಾವರಿ ಪ್ರದೇಶವನ್ನು ಮಾಡಲಾಗಿಲ್ಲ. ಕೃಷಿ ಉದ್ದೇಶದಿಂದ ಅಣೆಕಟ್ಟೆಗಳ ನಿರ್ಮಾಣ ಮಾಡಲಾಗಿದೆ. ಮೂಲ ಉದ್ದೇಶವನ್ನು ಮರೆತು ಕೃಷಿಗೆ ನೀರು ಕಡಿತ ಮಾಡಿ ಬೆಂಗಳೂರಿಗೆ ಕುಡಿಯುವ ನೀರು ಪೂರೈಸಲು ನಿರ್ಧಾರ ಮಾಡಿರುವ ರಾಜ್ಯ ಸರ್ಕಾರ ಕೃಷಿ ಮತ್ತು ರೈತ ವಿರೋಧಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾವೇರಿ ವಿಚಾರದಲ್ಲಿ ಕನ್ನಡಪರ ಸಂಘಟನೆಗಳು ಮತ್ತು ಇತರ ಹೋರಾಟದ ಸಂಘಟನೆಗಳು ಮಾತ್ರ ಚಳವಳಿ ನಡೆಸಿವೆ. ಹವಾ ನಿಯಂತ್ರಿತ ಕೊಠಡಿ ಹಾಗೂ ಮನೆಗಳಲ್ಲಿ ಕುಳಿತಿದ್ದವರಿಗೆ ರೈತರ ಹಿತ ಬಲಿ ಕೊಟ್ಟು ಕಾವೇರಿ ನದಿ ನೀರು ಕೊಡಬೇಕಾ? ರೈತರ ಭೂಮಿ ಉಳಿಯಬೇಕು. ಅದಕ್ಕಾಗಿ ಹೋರಾಟ ಮಾಡಲು ಸಿದ್ಧರಿದ್ದೇವೆ, ರೈತರು ಎಚ್ಚೆತ್ತುಕೊಂಡು ಹೋರಾಟ ನಡೆಸಬೇಕು ಎಂದು ಎಚ್ಚರಿಸಿದರು.

ಧರಣಿಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಬೋರಯ್ಯ ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ನೀರಾವರಿ ನಿಗಮ ಕಚೇರಿಗೆ ರೈತರ ಮುತ್ತಿಗೆ



ಶ್ರೀರಂಗಪಟ್ಟಣ, ಜ.4– ಜನಜಾನುವಾರುಗಳಿಗೆ ಕುಡಿಯಲು ಹಾಗೂ ರೈತರ ಬೆಳೆಗಳ ರಕ್ಷಣೆಗೆ ಕೆಆರ್‌ಎಸ್ ಅಣೆಕಟ್ಟೆ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ನೀರು ಹರಿಸಲು ಒತ್ತಾಯಿಸಿ ರೈತರು ಗುರುವಾರ ಕೆಆರ್ ಎಸ್‌ನ ನೀರಾವರಿ ನಿಗಮ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಭೂಮಿ ತಾಯಿ ಹೋರಾಟ ಸಮಿತಿಯ ನಂಜುಂಡೇಗೌಡ ಹಾಗೂ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ನೇತೃತ್ವದಲ್ಲಿ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಎದುರು ಧರಣಿ ನಡೆಸಿ, ನೀರಾವರಿ ಸಚಿವ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಕೆ.ಎಸ್.ನಂಜುಂಡೇಗೌಡ ಮಾತನಾಡಿ, ಕಾವೇರಿ ನದಿ ನೀರಿನ ವಿಚಾರದಲ್ಲಿ ಕಾವೇರಿ ಜಲಾನಯನ ಪ್ರದೇಶದ ರೈತರು ನಿರಂತರವಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಹಿಂದೆ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಡಲಾಗುತ್ತಿತ್ತು. ಆದರೆ, ಈ ಬಾರಿ ಕುಡಿಯಲು ನೀರಿಲ್ಲದೆ ಜನಜಾನುವಾರುಗಳು ತೊಂದರೆ ಅನುಭವಿಸುವಂತಾಗಿದೆ. ಕೊಳವೆ ಬಾವಿಗಳಲ್ಲಿ ಅಂತರ್ಜಲ ಬತ್ತಿಹೋಗಿವೆ. ಬೆಳೆಗಳು ಒಣಗಿ ಹೋಗುತ್ತಿವೆ. ಕನಿಷ್ಠ ತಿಂಗಳಿಗೊಮ್ಮೆ ನಾಲೆಗಳಿಗೆ ನೀರು ಹರಿಸಬೇಕು, ಇಲ್ಲದಿದ್ದರೆ ಜನತೆ ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಕಿಡಿಕಾರಿದರು.

ಸಮಿತಿ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ನಾಲೆಗಳಿಗೆ ನೀರು ಹರಿಸದ ಹಿನ್ನೆಲೆಯಲ್ಲಿ ಜನಜಾನುವಾರುಗಳಿಗೆ ಕುಡಿಯಲು ನೀರು ಇಲ್ಲದೆ ಸಮಸ್ಯೆಗಳು ಎದುರಾಗುತ್ತದೆ. ಆದರೆ, ಸರ್ಕಾರ ಹಾಗೂ ಕಾವೇರಿ ನೀರಾವರಿ ನಿಗಮ ನಾಲೆಗಳಿಗೆ ನೀರು ಹರಿಸದೆ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ರಾಜಧಾನಿ ಬೆಂಗಳೂರಿಗೆ, ಮೈಸೂರು ಹಾಗೂ ಮಂಡ್ಯ ಸೇರಿದಂತೆ ಇತರೆ ನಗರಗಳಿಗೆ ಕುಡಿಯುವ ನೀರಿಗೆ ಆದ್ಯತೆ ನೀಡುವ ಸರ್ಕಾರ ಕಾವೇರಿ ಅಚ್ಚುಕಟ್ಟು ಪ್ರದೇಶದ ಜನಜಾನುವಾರಗಳ ಕುಡಿಯುವ ನೀರಿಗೆ ಆದ್ಯತೆ ನೀಡುತ್ತಿಲ್ಲ. ಕಾವೇರಿ ಜಲಾನಯನ ಪ್ರದೇಶದ ರೈತ ಸಮೂಹಕ್ಕೆ ಅನ್ಯಾಯ ಮಾಡುತ್ತಿದೆ. ಕೂಡಲೇ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಭೂಮಿತಾಯಿ ಹೋರಾಟ ಸಮಿತಿ ಕಾರ್ಯದರ್ಶಿ ಎಂ.ವಿ.ಕಷ್ಣ, ದರ್ಶನ್, ಪುಟ್ಟಮಾದು, ವಿಷಕಂಠು, ಸುನೀಲ್, ರವಿಲಕ್ಷ್ಮಣ, ಶಿವಣ್ಣ, ಮಹಾಲಿಂಗು, ಕಡತನಾಳು ಶ್ರೀಧರ್ ಇತರರು ಭಾಗವಹಿಸಿದ್ದರು.

## ಕೊಟ್ಟಿಗೆಯಲ್ಲಿದ್ದ ಕುರಿ ಕಳವು

ಕಿಕ್ಕೇರಿ, ಜ.4–ಕಿಕ್ಕೇರಿ ಹೋಬಳಿಯ ರಾಮನಹಳ್ಳಿ ಹಾಗೂ ಬೀಚೇನಹಳ್ಳಿ ಗ್ರಾಮದಲ್ಲಿ ಬುಧವಾರ ತಡರಾತ್ರಿ 16 ಕುರಿ ಹಾಗೂ 1 ಮೇಕೆಯನ್ನು ಕಳುವು ಮಾಡಲಾಗಿದೆ. ಬೀಚೇನಹಳ್ಳಿ ಗ್ರಾಮದ ಬಿ.ಎಂ.ರವಿ ಅವರ ಕೊಟ್ಟಿಗೆ ಬಾಗಿಲು ಮುರಿದು ಕಳ್ಳರು 2 ಕುರಿ ಹಾಗೂ ರಾಮನಹಳ್ಳಿ ಗ್ರಾಮದಲ್ಲಿ ಮಂಜೇಗೌಡರ ಕೊಟ್ಟಿಗೆಯಲ್ಲಿದ್ದ 14 ಕುರಿ ಹಾಗೂ ಮೇಕೆಯನ್ನು ಕಳವು ಮಾಡಿದ್ದಾರೆ.

ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಿ.ಚಂದ್ರಶೇಖರ್ ನಿಧನ

ಪಾಂಡವಪುರ, ಜ.4–ತಾಲೂಕಿನ ಚಿಕ್ಕಮರಳಿ ಗ್ರಾಮದ ಕಾಂಗ್ರೆಸ್ ಮುಖಂಡ ಹಾಗೂ ಡೇರಿ ಮಾಜಿ ಅಧ್ಯಕ್ಷ ಸಿ.ಬಿ.ಚಂದ್ರಶೇಖರ್ (55) ಹೃದಯಾಘಾತದಿಂದ ಬುಧವಾರ ರಾತ್ರಿ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಗ್ರಾಮದ ಹೊರವಲಯದ ಮೃತರ ಜಮೀನಿನಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕೆಪಿಸಿಸಿ ಸದಸ್ಯ ಎಚ್.ತ್ಯಾಗರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್ ಸೇರಿದಂತೆ ಮತ್ತಿತರ ಗಣ್ಯರು ಅಂತಿಮ ದರ್ಶನಪಡೆದರು.

## ಪರೀಕ್ಷಾ ಕಿಂಗ್‌ಪಿನ್ ಶಿಕ್ಷಕ ರಮೇಶ್ ಅಮಾನತು

### ಅಕ್ರಮ ಪಿಯು ಪರೀಕ್ಷೆ ನಡೆಸಿದ ಆರೋಪ ಹಿನ್ನೆಲೆ

ನಾಗಮಂಗಲ, ಜ.4– ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಅದ್ದಿಹಳ್ಳಿ ಹ್ಯಾಂಡ್‌ಪೋಸ್ಟ್ ಬಳಿಯ ಶಾಂತಿನಿಕೇತನ ಪ್ರೌಢಶಾಲೆಯಲ್ಲಿ ಅಕ್ರಮವಾಗಿ ಪಿಯು ಪರೀಕ್ಷೆ ನಡೆಸಿರುವ ಆರೋಪದ ಹಿನ್ನೆಲೆಯಲ್ಲಿ



ಪಟ್ಟಣದ ಜಿಜೆಸಿ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಹಶಿಕ್ಷಕ ಕೆ.ಎನ್.ರಮೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಬೆಂಗಳೂರಿನ ಭಾರತ್ ಇನ್ಸಿಟ್ಯೂಟ್ ಆಫ್ ಸ್ಕೂಲ್ ಇನ್ ಎಜುಕೇಷನ್ ಸಂಸ್ಥೆಯೊಂದಿಗೆ ಕೆ.ಎನ್.ರಮೇಶ್ ಕೈಜೋಡಿಸಿ ವಿದ್ಯಾರ್ಥಿಗಳಿಗೆ ಡಿಸೆಂಬರ್‌ನಲ್ಲಿ ಅಕ್ರಮವಾಗಿ ಪರೀಕ್ಷೆ ನಡೆಸಿದ್ದರು. ಅಕ್ರಮ ಪರೀಕ್ಷೆ ಹಿನ್ನೆಲೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ನೇತೃತ್ವದಲ್ಲಿ ಜಂಟಿ ತನಿಖೆಗೆ ಆದೇಶಿಸಲಾಗಿತ್ತು. ತನಿಖಾ ತಂಡ ಶಾಂತಿನಿಕೇತನ ಪ್ರೌಢಶಾಲೆ ಮತ್ತು ನಾಗಮಂಗಲದ ಜೂನಿಯರ್ ಕಾಲೇಜಿಗೆ ಭೇಟಿ ನೀಡಿ ಸಮಗ್ರ ತನಿಖೆ ನಡೆಸಿತ್ತು.

ತನಿಖೆ ವೇಳೆಯಲ್ಲಿ ಪರೀಕ್ಷೆಗೆ ಹಲವಾರು ವಿದ್ಯಾರ್ಥಿಗಳನ್ನು ಶಿಕ್ಷಕ ರಮೇಶ್ ಸೇರ್ಪಡೆಗೊಳಿಸಿ ಕರೆದುಕೊಂಡು ಬರುತ್ತಿದ್ದುದ್ದನ್ನು ಪ್ರೌಢಶಾಲೆಯ ನೌಕರರು ಖಚಿತಪಡಿಸಿದ್ದರು. ಜೊತೆಗೆ ಈತ ಪ್ರಭಾವ ಬಳಸಿ ಇದೇ ಪ್ರೌಢಶಾಲೆಗೆ ಕೆಲದಿನ ಉಪಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಅದೇ ರೀತಿ ಶಿಕ್ಷಕ ಕೆ.ಎನ್.ರಮೇಶ್ ಅಕ್ರಮ ಪರೀಕ್ಷೆಗೆ ಮಾರ್ಗದರ್ಶನ ನೀಡಿರುವುದನ್ನ ತನಿಖೆಯಲ್ಲಿ ಒಪ್ಪಿಕೊಂಡಿದ್ದಾರೆ ಹಾಗೂ ಪರೀಕ್ಷಾ ವೇಳೆಯಲ್ಲಿ ಹಾಜರಿರುವ ಬಗ್ಗೆ ದೃಢಪಟ್ಟಿದ್ದು ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಶಿಕ್ಷಕ ಕೆ.ಎನ್.ರಮೇಶ್ ಅವರನ್ನು ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಿವರಾಮೇಗೌಡ ಆಮಾನತುಗೊಳಿಸಿ ಆದೇಶಿಸಿದ್ದಾರೆ.

# ಭೈರವೇಶ್ವರಸ್ವಾಮಿ ಭಕ್ತಿಗೀತೆ ರಚನೆ ಶ್ಲಾಘನೀಯ



ಕೆಆರ್.ಪೇಟೆ, ಜ.4– ಸರಳ ಕವಿತೆಗಳ ಮೂಲಕ ಲಕ್ಷಾಂತರ ಕುಟುಂಬಗಳ ಮನೆ ದೇವರಾಗಿರುವ ಶ್ರೀ ಕೋಟೆ ಭೈರವೇಶ್ವರ ಸ್ವಾಮಿಯ ಬಗ್ಗೆ ಭಕ್ತಿಗೀತೆಗಳನ್ನು ರಚಿಸಿರುವ ಲೇಖಕ ಮಾರೇನಹಳ್ಳಿ ಲೋಕೇಶ್ ಅವರ ಕಾರ್ಯ ಶ್ಲಾಘನೀಯವಾದುದು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಹೊಸಹೊಳಲು ಗ್ರಾಮದ ಕೋಟೆ ಭೈರವೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ಶಿಕ್ಷಕ ಹಾಗೂ ಲೇಖಕ ಮಾರೇನಹಳ್ಳಿ ಲೋಕೇಶ್ ಬರೆದಿರುವ ಶ್ರೀಕ್ಷೇತ್ರ ಹೊಸಹೊಳಲು ಕೋಟೆ ಭೈರವೇಶ್ವರ ಸ್ವಾಮಿಯ ಭಕ್ತಿಗೀತೆಗಳ ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಭೈರವಾಷ್ಟಮಿಯ ಶುಭ ದಿನದಂದು ಭೈರವೇಶ್ವರನನ್ನು ಕುರಿತ ಭಕ್ತಿ ಗೀತೆಗಳ ಪುಸ್ತಕ ಬಿಡುಗಡೆ ಮಾಡುತ್ತಿರುವುದು ನನಗೆ ಸಂತೋಷ ತಂದಿದೆ. ಭಗವಂತನನ್ನು ಒಲಿಸಿಕೊಳ್ಳಲು ಭಕ್ತಿ ಮಾರ್ಗವೇ ನಮಗಿರುವ ಸರಳ ಮಾರ್ಗ. ಭಗವಂತ ಎಂದಿಗೂ ಅದ್ದೂರಿ ಪೂಜೆಗಳನ್ನು ಒಪ್ಪುವುದಿಲ್ಲ. ನಮ್ಮ ಎಲ್ಲಾ ಸಾಧು–ಸಂತರು ಭಕ್ತಿ ಮಾರ್ಗದ ಮಹತ್ವವನ್ನು ಸಾರಿದ್ದಾರೆ ಎಂದರು.

ಆದಿಚುಂಚನಗಿರಿ ಹೇಮಾಗಿರಿ ಶಾಖಾಮಠದ ಕಾರ್ಯದರ್ಶಿ ಜೆ.ಎನ್.ರಾಮಕೃಷ್ಣೇಗೌಡ ಮಾತನಾಡಿ, ಮನುಷ್ಯನ ಶಾಂತಿ–ನೆಮ್ಮದಿಯನ್ನು ಯಾವುದೇ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಲು ಸಾಧ್ಯವಿಲ್ಲ. ಕೇವಲ ದಾನ–ಧರ್ಮದಿಂದ, ಧರ್ಮದ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯ. ಹಾಗಾಗಿ ಪ್ರತಿಯೊಬ್ಬರು ದಾನದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಧರ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಲೇಖಕ ಮಾರೇನಹಳ್ಳಿ ಲೋಕೇಶ್, ಶಾಸಕ ಹೆಚ್.ಟಿ. ಮಂಜು ಅವರ ಪತ್ನಿ ರಮಾಮಂಜು, ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿ ಮಲ್ಲೇಶ್, ಪುರಸಭಾ ಸದಸ್ಯ ಎಚ್.ಡಿ.ಅಶೋಕ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ.ಲೋಕೇಶ್, ಹೊಸಹೊಳಲು ಕೋಟೆ ಭೈರವೇಶ್ವರಸ್ವಾಮಿ ದೇವಾಲಯ ಟ್ರಸ್ಟ್ ಅಧ್ಯಕ್ಷೆ ಮಂಜುಳಾ ಚನ್ನಕೇಶವ, ತಾಲೂಕು ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಪಿ.ಜೆ.ಕುಮಾರ್, ಕಾರ್ಯ ದರ್ಶಿ ಎಸ್.ಆರ್.ಆನಂದಕುಮಾರ್ ಉಪಸ್ಥಿತರಿದ್ದರು.

**ವಿವಾದಾತ್ಮಕ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ವಿಚಾರಣೆ ನಡೆಸಬೇಕು ಎಂದು ಬಿಜೆಪಿ ಮುಖಂಡರು ಗುರುವಾರ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರಿಗೆ ಮನವಿ ಸಲ್ಲಿಸಿದರು. ಬಿಜೆಪಿ ಮುಖಂಡರಾದ ಸಿ.ಟಿ.ಮಂಜುನಾಥ್, ಎಸ್.ಶಿವಕುಮಾರ್ ಆರಾಧ್ಯ, ಪ್ರಸನ್ನಕುಮಾರ್, ಆನಂದ್, ಹೊಸಹಳ್ಳಿ ಶಿವು, ಇತರರಿದ್ದರು.**




ಒಂದನೇ ಪುಟದಿಂದ

## ಬಂದ್ ಸಂಪೂರ್ಣ ಯಶಸ್ವಿ

ಬಳಿ ತಹಶೀಲ್ದಾರ್ ಶಿವಪ್ರಸಾದ್ ಅವರಿಗೆ ಮನವಿ ಸಲ್ಲಿಸುವ ಮೂಲಕ ಅಂತ್ಯಗೊಂಡಿತು. ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಶಾಸಕರಿಗೆ ತಾಲೂಕು ಆಡಳಿತ, ಕಾನೂನು ಸುವ್ಯವಸ್ಥೆ ನಿಯಂತ್ರಿಸಲು ಆಗುತ್ತಿಲ್ಲ. ನಂಜನಗೂಡಿನಲ್ಲಿ ಕಾನೂನು–ಸುವ್ಯವಸ್ಥೆ, ಆಡಳಿತ ಸಂಪೂರ್ಣ ಕುಸಿ ದಿರುವುದರಿಂದ ಈ ದುರ್ಘಟನೆಗಳು ಸಂಭವಿಸುತ್ತಿವೆ. ನಾನು ಶಾಸಕನಾಗಿದ್ದ ವೇಳೆ 5 ವರ್ಷ ಇದೇ ಕಾರ್ಯಕ್ರಮ ನಡೆಸಲಾಗಿತ್ತು. ಆಗ ಇಂತಹ ಘಟನೆಗಳು ನಡೆದಿರಲಿಲ್ಲ. ದೇವಾಲಯದ ಇಓ ಸಹ ಇಡೀ ದಿನ ಗೊಂದಲ ಸೃಷ್ಟಿಸಿದ್ದಾರೆ ಎಂದರು. ಪೊಲೀಸರು ಸಹ ಯಾವುದೇ ರಕ್ಷಣೆ ನೀಡದೆ ವಿಫಲರಾಗಿದ್ದಾರೆ. ಘಟನೆ ನಡೆದ ಮಾರನೇ ದಿನ ಶಾಂತಿ ಸಭೆ ಕರೆಯಬೇಕಿದ್ದ ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸಿದೆ. ನಾನು ಪತ್ರಿಕಾಗೋಷ್ಠಿ ನಡೆಸಿದ ನಂತರ, ಭಕ್ತರು ಗೃಹ ಸಚಿವರಿಗೆ ಮನವಿ ಮಾಡಿದ ಬಳಿಕ ಶ್ರೀಕಂಠೇಶ್ವರನ ಭಕ್ತರಿಗೆ ಮಾಹಿತಿ ನೀಡದೆಯೇ ಕಾಟಾಚಾರಕ್ಕೆ ಶಾಂತಿ ಸಭೆ ನಡೆಸಿದೆ. ಅಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡ ಬೇಕಾದ ಜಿಲ್ಲಾಡಳಿತವೇ ಅಧಿಕಾರಿಗಳ ಮೂಲಕ ಅರ್ಚಕರಿಗೆ ಬೆದರಿಕೆಯೊಡ್ಡಿ ಒತ್ತಡದಲ್ಲಿ ಪತ್ರಕ್ಕೆ ಸಹಿ ಪಡೆದು ಬಂದ್ ಅನ್ನು ಹತ್ತಿಕ್ಕುವ ಪ್ರಯತ್ನವನ್ನೂ ನಡೆಸಿದ್ದಾರೆ ಎಂದು ಆಪಾದಿಸಿದರು. ಯುವ ಬ್ರಿಗೇಡ್ ದಕ್ಷಿಣ ವಲಯ ಸಂಚಾಲಕ ಚಂದ್ರಶೇಖರ್ ಮಾತನಾಡಿ ಅಂಧಕಾಸುರ ಕಾರ್ಯಕ್ರಮ ಸರ್ಕಾರದ ಕಾರ್ಯಕ್ರಮ, ಧಾರ್ಮಿಕ ದತ್ತಿ ಇಲಾಖೆಯ ಕೈಪಿಡಿಯಂತೆ ಜರುಗುತ್ತದೆ. ಅಂಧಕಾಸುರನನ್ನು ಮಹಿಷಾಸುರನೆಂದು ಬಿಂಬಿಸುವವರು ಈ ವ್ಯಾಜ್ಯವನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬೇಕಿತ್ತು. ಅದನ್ನು ಬಿಟ್ಟು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕಿ ದುರುದ್ದೇಶದಿಂದಲೇ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಜಮಾಯಿಸಿ ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ದೇವರ ಉತ್ಸವ ಮೂರ್ತಿಗೆ ಏಂಜಲು ನೀರು ಎರಚಿ ಭಕ್ತರ ಧಾರ್ಮಿಕ ಭಾವನೆಗೆ ದಕ್ಕೆ ಉಂಟುಮಾಡಿದ್ದಾರೆ ಎಂದರು.

## ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ನಿಧನ

ಇವರ ಪಾರ್ಥೀವ ಶರೀರವನ್ನು ನಾಳೆ (ಜ.5) ಬೆಳಗ್ಗೆ 10.30ರಿಂದ ಮಧ್ಯಾಹ್ನ 12 ಗಂಟೆವರೆಗೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಿ ನಂತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕರುಂಬಯ್ಯನವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಇಂದು ಬೆಳಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಮೈಸೂರು ರೇಸ್ ಕ್ಲಬ್(ಎಂಆರ್‌ಸಿ) ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ಸೇರಿದಂತೆ ಹಲವಾರು ಗಣ್ಯರು ತೆರಳಿ ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ನಮನ ಸಲ್ಲಿಸಿದರು.

## ಚಾಮರಾಜನಗರದಲ್ಲಿ ಸಾಧಾರಣ ಮಳೆ

ಬೀದಿಬದಿ ವ್ಯಾಪಾರಿಗಳು ಪರದಾಡಿದರು. ದ್ವಿಚಕ್ರ ವಾಹನ ಸವಾರರು ಮಳೆಯಲ್ಲೇ ತೋಯ್ದು ಸಾಗುತ್ತಿದ್ದರು. ಆದರೆ ಬೆಳಗ್ಗೆಯಿಂದಲೇ ಮೋಡವಿದ್ದ ಕಾರಣ ಕೆಲವರು ಜೊತೆಗೆ ತಂದಿದ್ದ ಛತ್ರಿ, ಜರ್ಕಿನ್‌ನಿಂದ ರಕ್ಷಣೆ ಪಡೆದರು. ಕೆಲ ಹೊತ್ತು ಬಿರುಸು ಮಳೆ ಯಾಗಿದ್ದರಿಂದ ರಸ್ತೆಗಳಲ್ಲಿ ನೀರು ಹರಿದಿತ್ತು. ಮಳೆ ಪರಿಣಾಮ ಜನ ಮನೆ ಸೇರಿದ್ದ ರಿಂದ ವ್ಯಾಪಾರ ವಹಿವಾಟು ಕಡಿಮೆಯಿತ್ತು ಆದರೆ ಚುರುಮುರಿ, ಪಾನಿಪುರಿ, ಗೋಬಿ, ವಡೆ–ಬಜ್ಜಿ ಇನ್ನಿತರ ಚಾಟ್ಸ್ ವ್ಯಾಪಾರ ಜೋರಾಗಿತ್ತು.

ವರ್ಷದ ಮೊದಲ ಮಳೆಯಿಂದ ವಾತಾವರಣ ಮತ್ತಷ್ಟು ತಂಪಾಯಿತು.

**ಮತ್ತೆ ಮೂರ್‍ನಾಲ್ಕು ದಿನ ಮಳೆ:** ಇನ್ನೂ ಮೂರ್‍ನಾಲ್ಕು ದಿನಗಳ ಕಾಲ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ. ಹಾಗಾಗಿ ಕೃಷಿ ಚಟುವಟಿಕೆಗೆ ರೈತರು ಎಚ್ಚರ ವಹಿಸುವುದು ಸೂಕ್ತ. ಮಳೆ ಕೊರತೆ, ನೀರಿನ ಸೌಲಭ್ಯದ ವ್ಯತ್ಯಯದ ನಡುವೆಯೂ ರೈತರು ಭತ್ತ, ರಾಗಿ, ಹುರುಳಿ ಇನ್ನಿತರ ಧಾನ್ಯಗಳನ್ನು ಬೆಳೆದಿದ್ದಾರೆ. ಬಹುತೇಕ ಎಲ್ಲಾ ಭಾಗದಲ್ಲೂ ಬೆಳೆ ಕಟಾವು ನಡೆಯುತ್ತಿದೆ. ಮಳೆ ವಾತಾವರಣ ಗಮನಿಸಿ ಕಟಾವಿಗೆ ನಿರ್ಧರಿಸಬೇಕು. ಈಗಾಗಲೇ ಕೊಯ್ಲು ಮಾಡಿ, ಮೆದೆ ಹಾಕಿರುವವರು ಅದಕ್ಕೆ ಟಾರ್ಪಲ್ ಮುಚ್ಚಿ, ಮಳೆಯಿಂದ ಧಾನ್ಯ ರಕ್ಷಿಸಿಕೊಳ್ಳುವುದು ಒಳ್ಳೆಯದು.

ಈ ಬಗ್ಗೆ ಪ್ರತಿಕ್ರಿಯಿಸಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್, ಮೈಸೂರು ಜಿಲ್ಲೆಯಲ್ಲಿ ಭತ್ತದ ಕಟಾವು ಶೇ.80ರಷ್ಟು ಮುಗಿದಿದೆ. ಮೈಸೂರು, ಕೆ.ಆರ್.ನಗರ, ಹುಣಸೂರು, ತಿ.ನರಸೀಪುರ ತಾಲೂಕಿನಲ್ಲಿ ಬಹುತೇಕ ಕೊಯ್ಲು ಮುಗಿದಿದೆ. ನಂಜನಗೂಡಿನಲ್ಲಿ ಸ್ವಲ್ಪ ಬಾಕಿ ಇದೆ. ಹುಲ್ಲನ್ನು ಪಿಂಡಿ ಕಟ್ಟುವ ಯಂತ್ರದ ಮೂಲಕ ಬಹುತೇಕ ಕಡೆ ಕಟಾವು ಮಾಡಿರುವುದರಿಂದ ಮೇವಿನ ನಷ್ಟವೂ ಆಗುವುದಿಲ್ಲ. ಇನ್ನು ರಾಗಿ ಕೊಯ್ಲು ಮಾಡಿ ಮೆದೆ ಹಾಕಿದ್ದಾರೆ. ಹುರುಳಿ ಒಕ್ಕಣೆಯೂ ಮುಗಿದಿದೆ. ಇನ್ನು ತುಂತುರು ಮಳೆಯಿಂದ ಮುಸುಕಿನ ಜೋಳ ಬೆಳೆಗೆ ತೊಂದರೆ ಆಗುವುದಿಲ್ಲ. ಒಟ್ಟಾರೆ ಜಿಲ್ಲೆಯಲ್ಲಿ ಮಳೆಯಿಂದ ಬೆಳೆ ನಷ್ಟವಾಗುವ ಸಾಧ್ಯತೆ ಇಲ್ಲ ಎಂದು ತಿಳಿಸಿದ್ದಾರೆ.

ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಈಗಾಗಲೇ ಕರಾವಳಿ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲೂ ಸಾಧಾರಣ ಮಳೆಯಾಗುತ್ತಿದೆ.

## ಮೈಷುಗರ್‌ಗೆ 121 ಕೋಟಿ ನಷ್ಟ

ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದರು. ಆದರೆ ಈ ಪೈಕಿ ಕೇವಲ 29 ಕೋಟಿ ರೂ. ಮಾತ್ರ ಕಾರ್ಖಾನೆ ಅಭಿವೃದ್ಧಿಗೆ ಬಳಕೆಯಾಗಿದ್ದು, 121 ಕೋಟಿ ರೂ. ದುರುಪಯೋಗವಾಗಿದೆ ಎಂದು ಅಂದಿನ ಮಂಡ್ಯ ಶಾಸಕ ಎಂ.ಶ್ರೀನಿವಾಸ್ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಈ ದೂರಿನ ಆಧಾರದ ಮೇರೆಗೆ ತನಿಖೆ ನಡೆಸಿದ ಉಪಲೋಕಾಯುಕ್ತರು ಮೈಷುಗರ್‌ನ ಹಿಂದಿನ ಅಧ್ಯಕ್ಷ ನಾಗರಾಜಪ್ಪ ಅವರು ಕಾರ್ಖಾನೆಗೆ 121 ಕೋಟಿ ರೂ.ಗಳಷ್ಟು ನಷ್ಟವನ್ನುಂಟು ಮಾಡಿದ್ದಾರೆ ಎಂದು ವರದಿ ನೀಡಿದ್ದರು. ಈ ವರದಿ ಹಿನ್ನೆಲೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ನಷ್ಟದ ಹಣವನ್ನು ನಾಗರಾಜಪ್ಪ ಅವರಿಂದಲೇ ವಸೂಲಿ ಮಾಡಲು ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡುವುದು ಹಾಗೂ ವಸೂಲಿಗೆ ಅನುಕೂಲವಾಗುವಂತೆ ಅವರ ಆಸ್ತಿಗಳನ್ನು ಜಪ್ತಿ ಮಾಡಲು ನಿರ್ಧಾರ ಕೈಗೊಂಡಿದೆ.

## ಬಂಧಿಸಿದ ಮರ್ಮವೇನು?

ಮುಖ್ಯಮಂತ್ರಿಗಳ ದಾರಿ ತಪ್ಪಿಸಿದ್ದಾರೆ. ಇಲ್ಲವೇ ಮುಖ್ಯಮಂತ್ರಿಗಳಿಗೆ ಗೊತ್ತಾದ ನಂತರವೂ ಹಿಂದಿನ ಹೇಳಿಕೆಗೆ ಬದ್ಧರಾಗಿದ್ದಾರೆ. ಯಾರೋ ಒಬ್ಬರು ಯಾಮಾರಿಸಿದ್ದಾರೆ. ಒಟ್ಟಾರೆ ರಾಜ್ಯದ ಜನರಿಗೆ ತಪ್ಪು ಸಂದೇಶ ರವಾನೆಯಾದಂತಿದೆ. ಇದು ಪೊಲೀಸರ ಯಡವಟ್ಟು, ಹುಬ್ಬಳ್ಳಿ ಪೊಲೀಸ್ ಆಯುಕ್ತರನ್ನು ಹೊಣೆಗಾರರನ್ನಾಗಿ ಮಾಡಬೇಕು. ಗೃಹ ಸಚಿವರು ಇನ್ಸ್‌ಪೆಕ್ಟರ್ ಬೆನ್ನಿಗೆ ನಿಲ್ಲುತ್ತೇನೆ ಎಂದಿದ್ದಾರೆ. ಮೊದಲು ಇಲಾಖೆಯ ಮಾಹಿತಿಯನ್ನು ಪರಿಶೀಲಿಸಿಕೊಳ್ಳಬೇಕು. ಹುಬ್ಬಳ್ಳಿ ಪೊಲೀಸ್ ಆಯುಕ್ತರು ಆರಂಭದಲ್ಲಿ ಹೇಳಿಕೆ ಕೊಟ್ಟು ನಂತರ ಮೌನಕ್ಕೆ ಶರಣಾಗುವ ಮೂಲಕ ಸಂಪೂರ್ಣವಾಗಿ ಮಿಸ್‌ಲೀಡ್ ಮಾಡಿದ್ದಾರೆ. 1992ರ ನಂತರ ಹಲವು ಬಾರಿ ಠಾಣೆಗೆ ಹಾಜರಾಗಿ ಶ್ರೀಕಾಂತ್ ಪೂಜಾರಿ ಮುಚ್ಚಳಿಗೆ ಬರೆದುಕೊಟ್ಟಿದ್ದಾರೆ. ಆಗ ಏಕೆ ಬಂಧಿಸಲಿಲ್ಲ. ಠಾಣೆಗೆ ಬಂದ ವ್ಯಕ್ತಿಯನ್ನು ಬಿಟ್ಟು ಕಳುಹಿಸಿ, ಈಗ ತಲೆ ಮರೆಸಿಕೊಳ್ಳಬಹುದು ಎಂದು ನ್ಯಾಯಾಲಯಕ್ಕೆ ಹೇಳುತ್ತಿದ್ದಾರೆ. ಹೀಗೆ ಮಾಡುತ್ತಿರುವುದು ಗಂಭೀರ ಅಪರಾಧ. ಮುಖ್ಯಮಂತ್ರಿಗಳ ಟ್ವೀಟ್ ನಂತರವಾದರೂ ಪೊಲೀಸರು ಸ್ಪಷ್ಟಪಡಿಸಬಹುದಿತ್ತು. ತಪ್ಪು ಮಾಹಿತಿಗೆ ಉತ್ತರ ಕೊಡುವುದು ಯಾರು?. ಕೇಸ್ ಮುಂದುವರೆಸಬೇಕಿತ್ತು. ಆದರೆ ಅರೆಸ್ಟ್ ಮಾಡಿ ಮೈಮೇಲೆ ಎಳೆದುಕೊಂಡಿದ್ದಲ್ಲದೆ ಅದೇ ಸರಿ ಎಂದು ಸಮರ್ಥಿಸಿಕೊಳ್ಳುವ ಯತ್ನ ನಡೆದಿದೆ. ನ್ಯಾಯಾಲಯ ಸೂಕ್ತ ತೀರ್ಮಾನ ಕೈಗೊಳ್ಳಲಿದೆ. ಜೊತೆಗೆ ತಪ್ಪು ಮಾಹಿತಿ ನೀಡಿದ ಹುಬ್ಬಳ್ಳಿ ಪೊಲೀಸ್ ಆಯುಕ್ತರ ವಿರುದ್ಧ ಕ್ರಮ ಜರುಗಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.

## ವಿಮಾನ ನಿಲ್ದಾಣಕ್ಕೆ ಅಗತ್ಯ ಜಾಗ

ವರ್ಗಾವಣೆ ಮಾಡುವ ನಿಟ್ಟಿನಲ್ಲೂ ಚರ್ಚಿಸಲಾಯಿತು. ಈ ಎಲ್ಲಾ ವಿಷಯಗಳ ಬಗ್ಗೆ ಕಂದಾಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು. ಸಭೆಯಲ್ಲಿ ಶಾಸಕರಾದ ಎ.ಎಸ್.ಪೊನ್ನಣ್ಣ, ಮಂತರ್‌ಗೌಡ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಡಗಿನಲ್ಲಿ ಮಿನಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ 2018ರಲ್ಲಿ ಸರ್ಕಾರ ಆದೇಶ ಹೊರಡಿಸಿತ್ತು. ಅದಕ್ಕಾಗಿ ಕೊಡಿಗೆ ಸೈನಿಕ ಶಾಲೆ ಹಿಂಭಾಗ 49 ಎಕರೆ ಭೂಮಿಯನ್ನು ಜಿಲ್ಲಾಡಳಿತ ಗುರುತಿಸಿತ್ತು. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ ವೇಳೆ ಮಿನಿ ವಿಮಾನ ನಿಲ್ದಾಣಕ್ಕೆ ಇನ್ನೂ ಹೆಚ್ಚಿನ ಭೂಮಿ ಅಗತ್ಯವಿದೆ ಎಂದು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಈಗ ಕೂಡಿಗೆ ಸಮೀಪದ ದೊಡ್ಡ ಆಳುವಾರ ಗ್ರಾಮದಲ್ಲಿ 130ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಮಿನಿ ವಿಮಾನ ನಿಲ್ದಾಣಕ್ಕಾಗಿ ಜಿಲ್ಲಾಡಳಿತ ಗುರುತಿಸಿದ್ದು, ಈ ಭೂಮಿ ಕಂದಾಯ ಇಲಾಖೆಗೆ ಸೇರಿದ್ದಾಗಿದೆ. ಇದನ್ನು ಕಂದಾಯ ಇಲಾಖೆಯು ಕೆಎಸ್‌ಐಐಡಿಸಿಗೆ ಹಸ್ತಾಂತರಿಸಿದ ನಂತರ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಜೊತೆ ಮಿನಿ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಜಿಲ್ಲಾಡಳಿತ ವ್ಯವಹರಿಸಲಿದೆ ಎಂದು ಹೇಳಲಾಗಿದೆ.

## ಶಾಲಾ ವಾಹನ ಸಿಬ್ಬಂದಿ ಪರಿಶೀಲನೆಗೆ ಸೂಚನೆ

ಪ್ರಮಾಣ ಪತ್ರ ಕಡ್ಡಾಯವಾಗಿ ಪಡೆಯಬೇಕು. ಪೊಲೀಸ್ ಠಾಣೆಗಳಿಂದ ಪಡೆದ ಅವರ ನಡವಳಿಕೆ ಪ್ರಮಾಣಪತ್ರವನ್ನು ಆಯಾಯ ಶಾಲೆಯ ಎಸ್‌ಎಟಿಎಸ್ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು. ಜೊತೆಗೆ ಸಹಾಯಕರಾಗಿ ಮಹಿಳಾ ಸಿಬ್ಬಂದಿ ನೇಮಿಸಿಕೊಳ್ಳಬೇಕು. ಪ್ರತಿ ಖಾಸಗಿ ಶಾಲಾ ವಾಹನಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರ ಅಳವಡಿಸಬೇಕು. ಶಾಲಾ ವಾಹನಗಳಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ಮಕ್ಕಳನ್ನು ಕರೆದುಕೊಂಡು ಹೋಗದಂತೆ ನಿರ್ಬಂಧಿಸಬೇಕು. ಶಾಲಾ ವಾಹನಗಳಲ್ಲಿ ಕೆಲಸ ನಿರ್ವಹಿಸುವ ಚಾಲಕರು ಮತ್ತು ಸಹಾಯಕರು ಪ್ರತಿದಿನ ಕೆಲಸ ಪ್ರಾರಂಭದ ಮೊದಲು ಮತ್ತು ಎಲ್ಲಾ ಮಕ್ಕಳನ್ನು ಮನೆಗೆ ಬಿಟ್ಟ ನಂತರ ಶಾಲೆಗೆ ಬಂದು ಹಾಜರಾತಿ ಪುಸ್ತಕದಲ್ಲಿ ಶಾಲಾ ಮುಖ್ಯಸ್ಥರ ಸಮ್ಮುಖದಲ್ಲಿ ಕಡ್ಡಾಯವಾಗಿ ಸಹಿ ಮಾಡಿಸಲು ಕ್ರಮ ವಹಿಸಬೇಕು. ಸದರಿ ಮಾಹಿತಿಗಳನ್ನು ಪ್ರತಿ ವರ್ಷ ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ಪಡೆಯಬೇಕು. ಈ ಎಲ್ಲಾ ಅಂಶಗಳನ್ನು ಎಲ್ಲಾ ಶಾಲೆಗಳು ಕಟ್ಟುನಿಟ್ಟಾಗಿ ಅನುಸರಿಸುತ್ತಿರುವುದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.

ಡಿಸಿಎಂ ಡಿ.ಕೆ.ಶಿವಕುಮಾರ್ ಪ್ಲಾನ್‌ಗೆ ಸಿದ್ದು ಆಪ್ತ ಉಲ್ಟಾ ಪ್ಲಾನ್!?

# ನಾನಾಗಲೀ, ನನ್ನ ಕುಟುಂಬದವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಲ್ಲ

**● ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟನೆ**
**● ಬೆಳಗಾವಿ, ಚಿಕ್ಕೋಡಿ ಇತರೆಡೆ ಕಾರ್ಯಕರ್ತರ ನಿಲ್ಲಿಸಿ ಗೆಲ್ಲಿಸ್ತೇವೆ**
**● ಮೂವರು ಉಪಮುಖ್ಯಮಂತ್ರಿ ಬೇಡಿಕೆಯಿಂದ ಹಿಂದೆ ಸರಿದಿಲ್ಲ**

ಬೆಂಗಳೂರು, ಜ. 4(ಕೆಎಂಶಿ)–



ನಾನಾಗಲೀ, ನನ್ನ ಕುಟುಂಬದವರಾಗಲೀ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ. ರಾಜ್ಯ ರಾಜ ಕಾರಣದಲ್ಲೇ ಮುಂದುವರೆಯುತ್ತೇನೆ ಎಂದು ಮುಖ್ಯಮಂತ್ರಿ ಅವರ ಆಪ್ತ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ, ಚಿಕ್ಕೋಡಿ ಸೇರಿದಂತೆ ರಾಜ್ಯದ ಯಾವುದೇ ಕ್ಷೇತ್ರದಿಂದಲೂ ನನ್ನ ಸ್ಪರ್ಧೆ ಇಲ್ಲ ಎಂದರು.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ದೆಹಲಿಯಲ್ಲಿಂದು ಎಐಸಿಸಿ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಬೆನ್ನಲ್ಲೇ ಜಾರಕಿಹೊಳಿ ಈ ಸ್ಪಷ್ಟನೆ ನೀಡಿದ್ದಾರೆ. ಬೆಳಗಾವಿ ಮತ್ತು ಚಿಕ್ಕೋಡಿಯಲ್ಲಿ ಈ ಬಾರಿ ಪಕ್ಷದ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಲಿ, ನಾವು ಅವರ ಪರ ನಿಂತು ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುತ್ತೇವೆ. ಬೆಳಗಾವಿ ಉಪಚುನಾವಣೆಯಲ್ಲಿ ಕಾರಣಾಂತರಗಳಿಂದಷ್ಟೇ ನಾನು ಸ್ಪರ್ಧಿಸಿ ಅಲ್ಪ ಮತಗಳಿಂದ ಪರಾಭವಗೊಂಡೆ. ಹಾಗೆಂದು ಈಗ ಸಾರ್ವತ್ರಿಕ ಚುನಾವಣೆಯಲ್ಲಿ ಕಣಕ್ಕಿಳಿಯುವ ಆಸಕ್ತಿ ಇಲ್ಲ. ಮುಖ್ಯಮಂತ್ರಿ ಅವರು ಒಳ್ಳೆ ಖಾತೆ ನೀಡಿ ಜನರ ಕೆಲಸ ಮಾಡುವಂತೆ ಅಧಿಕಾರ ಕೊಟ್ಟಿದ್ದಾರೆ, ಅದನ್ನು ನಿಷ್ಠೆಯಿಂದ ಮಾಡುತ್ತೇನೆ. ಮೂರು ಉಪಮುಖ್ಯಮಂತ್ರಿಗಳ ಬೇಡಿಕೆಯಿಂದ ನಾನು ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಮುಖ್ಯಮಂತ್ರಿ ದೆಹಲಿಗೆ ತೆರಳುವಾಗ ನಾನೂ ಅವರ ಕಾರಿನಲ್ಲೇ ವಿಮಾನ ನಿಲ್ದಾಣದವರೆಗೂ ಜೊತೆಯಲ್ಲೇ ಹೋಗಿದ್ದೆ, ನನ್ನ ಖಾತೆಗೆ ಸಂಬಂಧಿಸಿದ ವಿಷಯ ಮಾತ್ರ ಚರ್ಚಿಸಿದೆ ಎಂದರು. ಸತೀಶ್ ಜಾರಕಿಹೊಳಿ ಸೇರಿದಂತೆ ಕೆಲವು ಸಚಿವರು, ಶಾಸಕರನ್ನು ಈ ಬಾರಿ ಲೋಕಸಭಾ ಚುನಾವಣಾ ಕಣಕ್ಕಿಳಿಸಲು ಕೆಪಿಸಿಸಿ ಅಧ್ಯಕ್ಷರು ಆಸಕ್ತಿ ಹೊಂದಿದ್ದಾರೆ, ಅಷ್ಟೇ ಅಲ್ಲ, ವರಿಷ್ಠರಿಗೂ ಕ್ಷೇತ್ರಗಳನ್ನು ಮತ್ತು ಹೆಸರುಗಳನ್ನು ಶಿಫಾರಸು ಮಾಡಿದ್ದಾರೆ ಎನ್ನಲಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮುಂಬರುವ ಚುನಾವಣೆಯಲ್ಲಿ ಜಂಟಿಯಾಗಿ ಕಣಕ್ಕಿಳಿಯುವುದರಿಂದ ನಾವು ವರ್ಚಸ್ವಿ ಮತ್ತು ಸಮರ್ಥ ಅಭ್ಯರ್ಥಿಗಳನ್ನು ಕೆಲವು ಕ್ಷೇತ್ರಗಳಲ್ಲಿ ಇಳಿಸಲೇಬೇಕೆಂಬವಾದ ಶಿವಕುಮಾರ್ ಅವರದ್ದಾಗಿದೆ. ಶಿವಕುಮಾರ್ ದೂರದೃಷ್ಟಿ ಮತ್ತು ರಾಜಕೀಯ ಉದ್ದೇಶದಿಂದ ಕೆಲವರನ್ನು ಲೋಕಸಭಾ ಚುನಾವಣಾ ಕಣಕ್ಕಿಳಿಸಲು ತಂತ್ರಗಾರಿಕೆ ನಡೆಸುತ್ತಿದ್ದಾರೆ ಎಂಬ ಭಾವನೆ ಕೆಲವರಲ್ಲಿದೆ.

ಕೆಪಿಸಿಸಿ ಅಧ್ಯಕ್ಷರ ತಂತ್ರಗಾರಿಕೆಯನ್ನು ಅರಿತ ಕೆಲವರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ತಾವು ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದು, ಅವರಲ್ಲಿ ಜಾರಕಿಹೊಳಿ ಸಹಾ ಒಬ್ಬರು. ದೆಹಲಿಯಲ್ಲಿ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಚರ್ಚೆ ನಡೆಯುತ್ತಿದ್ದಂತೆ ಇತ್ತ ಜಾರಕಿಹೊಳಿ ಇಂತಹ ಹೇಳಿಕೆ ನೀಡಿರುವುದು ಮತ್ತಷ್ಟು ಕುತೂಹಲ ಮೂಡಿಸಿದೆ. ಈ ಮಧ್ಯೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸುದ್ದಿಗಾರರೊಂದಿಗೆ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸಚಿವರು ಕಣಕ್ಕಿಳಿಯಬೇಕಾದ ಅನಿವಾರ್ಯತೆ ಬಂದಲ್ಲಿ ಸ್ಪರ್ಧಿಸುತ್ತಾರೆ ಎಂದರು. ಕಳೆದ ಚುನಾವಣೆಯಲ್ಲಿ ಕೃಷ್ಣ ಬೈರೇಗೌಡ ಅವರು ಕಣಕ್ಕಿಳಿದಿದ್ದರಲ್ಲ, ಅಭ್ಯರ್ಥಿಗಳ ಆಯ್ಕೆಯ ಸಹಜ ಪ್ರಕ್ರಿಯೆ ನಡೆಯುತ್ತಿದೆ, ನನಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ ಎಂದರು.



ದತ್ತಾತ್ರೇಯ ಜಯಂತಿ ಪ್ರಯುಕ್ತ ಮೈಸೂರಿನ ಚಾಮರಾಜ ಜೋಡಿರಸ್ತೆಯಲ್ಲಿರುವ ಶ್ರೀ ಸತ್ಯನಾರಾಯಣ ದತ್ತಾತ್ರೇಯ ದೇವಸ್ಥಾನದಲ್ಲಿ ಸ್ವಾಮಿಯ ಉತ್ಸವ ಏರ್ಪಡಿಸಲಾಗಿತ್ತು. ಈ ಉತ್ಸವದಲ್ಲಿ ಹಲವರು ಪಾಲ್ಗೊಂಡಿದ್ದರು.



ಮೈಸೂರು ಕುವೆಂಪುನಗರದ ಕೆ ಬ್ಲಾಕ್ ನಿವಾಸಿಯಾದ, ಸಮಾಜ ಸೇವಕ ದೇವು (ಪ್ರದೀಪ್) ಅವರ ಹುಟ್ಟುಹಬ್ಬದ ಅಂಗವಾಗಿ ಎಸ್‌ಎಂ ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ, ಕಾಳ ಬೋರಪ್ಪ, ಹಡ ಸಿದ್ದಪ್ಪ, ಬೋರಪ್ಪ, ಸೊಸೈಟಿ ರಾಜು, ಅರವಿಂದ ನಗರ ರಘು, ರಾಜು, ಎಳನೀರು ರಾಮು, ಸುರೇಶ್(MGM) ಕೆ.ಟಿ. ಮಾದೇವ, ಕಜ್ಜಪ್ಪನ ಕೃಷ್ಣ, ಭರತ್, ದಿಲೀಪ್ ಅವರುಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

# ಮಲ್ಲಿಕಾರ್ಜುನ ಖರ್ಗೆ ಪ್ರಧಾನಿಯಾದರೆ ಇಡೀ ನಾಡಿಗೆ ಸಂತೋಷ ಅಲ್ಲವೇ

● ಶಾಸಕ ಜಿ.ಟಿ.ದೇವೇಗೌಡರ ಆಶಯ

● ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ

ಹುಣಸೂರು, ಜ.4– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಸಮರ್ಥ ನಾಯಕ ಎಂದಿದ್ದೇನೆಯೇ ಹೊರತು ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಮಾತನಾಡಿಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.



ಪ್ರಧಾನಿ ಮೋದಿಗೆ ಸರಿಸಮಾನರಾದ ನಾಯಕರಿಲ್ಲ ಎಂಬ ಹೇಳಿಕೆಗೆ ಹುಣಸೂರು ತಾಲೂಕು ಪತ್ರಕರ್ತರ ಭವನದಲ್ಲಿ ಸ್ಪಷ್ಟನೆ ನೀಡಿದ ಜಿಟಿಡಿ, ಕನ್ನಡಿಗರಾದ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿಯಾದರೆ ಇಡೀ ರಾಜ್ಯ ಸಂಭ್ರಮಿಸುತ್ತದೆ. ಆದರೆ ರಾಹುಲ್ ಗಾಂಧಿಯವರೇ ಪ್ರಧಾನಿ ಅಭ್ಯರ್ಥಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳುವ ಮೂಲಕ ಖರ್ಗೆಯವರು ಅಭ್ಯರ್ಥಿಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೋದಿಗೆ ಪರ್ಯಾಯ ನಾಯಕ ಯಾರೂ ಇಲ್ಲ ಎಂಬ ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ ಎಂದಿದ್ದಾರೆ.

ಮೋದಿ ಅವರು 13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿ, 10 ವರ್ಷ ದೇಶದ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅನುಭವಿ. ಇವರ ಮುಂದೆ ರಾಹುಲ್ ಗಾಂಧಿಯವರನ್ನು ಸರಿಸಮಾನರು ಎಂಬಂತೆ ಬಿಂಬಿಸುವುದು ಸರಿಯಲ್ಲ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಉಪ ಪ್ರಧಾನಿಯಾಗಿ ಅಥವಾ ಯಾವುದಾದರೂ ಇಲಾಖೆ ಜವಾಬ್ದಾರಿ ನಿರ್ವಹಿಸುವ ಮೂಲಕ ಅನುಭವ ಪಡೆಯಬಹುದಿತ್ತು. ಹಾಗಾಗಿ ಮೋದಿಗೆ ಸರಿಸಾಟಿಯಿಲ್ಲ ಎನ್ನುವ ಅರ್ಥದಲ್ಲಿ ನಾನು ಮಾತನಾಡಿದ್ದು. ಆದರೆ ವಿರೋಧ ಪಕ್ಷದ ಸಮರ್ಥ ನಾಯಕರಾಗಿರುವ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಮಾತನಾಡಿಲ್ಲ. ಕಾಂಗ್ರೆಸ್ ಕಟ್ಟಾಳು, ಹಿರಿಯರಾದ ಖರ್ಗೆ ಅವರು ನಮ್ಮ ರಾಜ್ಯದಲ್ಲೇ ಸಿಎಂ ಆಗಬೇಕಿತ್ತು. ಅವರು ಪ್ರಧಾನಿಯಾದರೆ ಇಡೀ ನಾಡಿಗೆ ಸಂತೋಷ ಎಂದು ಹೇಳಿದ್ದಾರೆ.

ಹೇಳುವುದು ಜಾತ್ಯಾತೀತ ಆದರೆ ಮಾಡುವುದು ಜಾತಿಗಟ್ಟಿ ಕೆಲಸ. ಇದರಿಂದಲೇ ನಾಯಕರಾಗಿ ಬೆಳೆಯಲು ಸಾಧ್ಯ ಎನ್ನುವುದು ಸರಿಯಲ್ಲ ಎಂದು ನಾನು ಹೇಳಿದ್ದೇನೆ. ಮೋದಿಯವರಾಗಲೀ, ಹೆಚ್.ಡಿ.ದೇವೇಗೌಡರಾಗಲೀ, ಸಿದ್ದರಾಮಯ್ಯನವರಾಗಲೀ, ಯಡಿಯೂರಪ್ಪನವರಾಗಲೀ ಯಾರೂ ಒಂದು ಜಾತಿಗೆ ನಾಯಕರಲ್ಲ. ಹಾಗೆಯೇ ಮಲ್ಲಿಕಾರ್ಜುನ ಖರ್ಗೆಯವರೂ ಎಲ್ಲಾ ವರ್ಗದ ನಾಯಕರು. ಅವರ ಬಗ್ಗೆ ಅಪಾರವಾದ ಗೌರವವಿದೆ ಎಂದು ಜಿಟಿಡಿ ಸ್ಪಷ್ಟಪಡಿಸಿದ್ದಾರೆ.

**ಜ.15ರ ನಂತರ ಚರ್ಚೆ:** ಬಿಜೆಪಿ–ಜೆಡಿಎಸ್ ಮೈತ್ರಿಯಡಿ ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ಇನ್ನೂ ನಿರ್ಧಾರವಾಗಿಲ್ಲ. ನಾವು ಇಂತಹದ್ದೇ ಕ್ಷೇತ್ರಗಳನ್ನು ನೀಡಬೇಕೆಂದು ಕೇಳಿಲ್ಲ. ಐದಾರು ಕ್ಷೇತ್ರಗಳನ್ನು ಜೆಡಿಎಸ್‌ಗೆ ನೀಡಲು ಸಿದ್ಧರಿದ್ದಾರೆ. ಜ.15ರ ನಂತರ ಉಭಯ ಪಕ್ಷದ ವರಿಷ್ಠರು ಚರ್ಚಿಸಿ, ತೀರ್ಮಾನಿಸುತ್ತಾರೆ ಎಂದು ಜಿಟಿ ದೇವೇಗೌಡ ಇದೇ ವೇಳೆ ತಿಳಿಸಿದರು.

# ದೇಶವನ್ನು ಮುನ್ನಡೆಸುವ ಸಾಮರ್ಥ್ಯ ಖರ್ಗೆ ಅವರಿಗಿದೆ

## ಮಾಜಿ ಮೇಯರ್ ಪುರುಷೋತ್ತಮ್ ಸಮರ್ಥನೆ

ಮೈಸೂರು, ಜ.4(ಎಂಟಿವೈ)– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರಷ್ಟು ಶಕ್ತಿ ಇಲ್ಲ ಎಂಬ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ ಖಂಡನೀಯ. ದೇಶವನ್ನು ಮುನ್ನಡೆಸುವ ಸಾಮರ್ಥ್ಯ ಖರ್ಗೆ ಅವರಿಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಶಾಸಕ ಜಿ.ಟಿ.ದೇವೇ ಗೌಡರಿಗೆ ತಿರುಗೇಟು ನೀಡಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಖರ್ಗೆ ಅವರು ವಿದ್ಯಾವಂತರೂ, ಬುದ್ಧಿವಂತರೂ ಮಾತ್ರವಲ್ಲದೆ, ಸಂಘಟನಾ ಚತುರರೂ ಹಾಗೂ ಉತ್ತಮ ಆಡಳಿತ ನೀಡುವ ಸಮರ್ಥ ನಾಯಕರೂ ಆಗಿದ್ದಾರೆ. ಆದರೆ, ಶಾಸಕ ಜಿ.ಟಿ.ದೇವೇಗೌಡ ಅವರು ಮಲ್ಲಿಕಾರ್ಜುನ ಖರ್ಗೆ ಅವರ ಸಾಮರ್ಥ್ಯ ಅರಿಯದೇ ಟೀಕಿಸಿರುವುದು ಖರ್ಗೆ ಅವರ ಅಭಿಮಾನಿಗಳಿಗೆ ನೋವುಂಟು ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರ ರಾಜಕಾರಣದಲ್ಲಿ ಮಿನುಗುವ ಸಾಮರ್ಥ್ಯವಿರುವ ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯ ಜೀವನದಲ್ಲಿ ಕಪ್ಪು ಚುಕ್ಕೆಗೆ ಆಸ್ಪದ ನೀಡಿಲ್ಲ. ಸ್ವಂತ ಬಲದ ಮೇಲೆ ಆಡಳಿತ ನಡೆಸುವ ಸಾಮರ್ಥ್ಯವಿಲ್ಲದ ಜೆಡಿಎಸ್ ನಾಯಕರಿಂದ ಖರ್ಗೆ ಅವರಂತಹ ನಾಯ ಕರು ಪಾಠ ಕಲಿಯಬೇಕಾಗಿಲ್ಲ. ಜಿ.ಟಿ. ದೇವೇಗೌಡರ ಕ್ಷೇತ್ರದಲ್ಲಿಯೇ ಇನ್ನೂ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಇದೇ ರೀತಿ ಖರ್ಗೆ ಅವರನ್ನು ಟೀಕಿಸುವ ಮೂಲಕ ಜಿ.ಟಿ. ದೇವೇ ಗೌಡರು ಪರೋಕ್ಷವಾಗಿ ಅಸ್ಪೃಶ್ಯತೆ ಆಚರಿಸು ತ್ತಿರುವಂತೆ ಕಾಣುತ್ತಿದೆ ಎಂದು ದೂರಿದರು. ಕಳೆದ ಚುನಾವಣೆಯಲ್ಲಿ ಗೆಲುವಿಗೆ ನೆರವು ನೀಡಿದ ಪಕ್ಷ(ಬಿಜೆಪಿ)ವನ್ನು ಅಧಿಕೃತವಾಗಿ ಸೇರಿರುವಂತೆ ಜಿಟಿಡಿ ಮಾತನಾಡುತ್ತಿದ್ದಾರೆ. ಹೀಗಾಗಿ ಖರ್ಗೆ ಅವರನ್ನು ಮೋದಿಗೆ ಹೋಲಿಸುವ ನೈತಿಕತೆ ಇವರಿಗಿಲ್ಲ ಇಡಿ ಭಯದಿಂದಾಗಿ ಯಾರನ್ನೋ ಓಲೈಸಲು ಈ ರೀತಿ ಮಾತನಾಡುತ್ತಿದ್ದಾರೆ. ಇದೇ ರೀತಿಯ ಹೇಳಿಕೆ ನೀಡುವುದನ್ನು ಮುಂದುವರಿಸಿದಲ್ಲಿ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸೋಮಯ್ಯ ಮಲೆಯೂರು, ಸುನಿಲ್ ಕುಮಾರ್, ರಾಂಸಿಂಗ್, ಮುನ್ನೇಗೌಡ, ಮಣಿ, ಸುರೇಶ್‌ಗೌಡ ಇದ್ದರು.

ಫಲಾನುಭವಿ ಯೋಜನೆ, ಸಹಾಯಧನ ಸಂಬಂಧ

# ಡಿಬಿಟಿ ತಂತ್ರಾಂಶ ಚಟುವಟಿಕೆಗೆ ಕಾಲಮಿತಿ ನಿಗದಿ

ಮೈಸೂರು,ಜ.4(ಪಿಎಂ)–ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ (ಡಿಬಿಟಿ) ಮೂಲಕ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಎಲ್ಲಾ ಫಲಾನುಭವಿ ಯೋಜನೆಗಳು ಮತ್ತು ಸಹಾಯಧನವನ್ನು ನಿರ್ವಹಿಸುವ ಕುರಿತಂತೆ ತಂತ್ರಾಂಶದ ಚಟುವಟಿಕೆಗಳಿಗೆ ಕಾಲಮಿತಿ ನಿಗದಿಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಅಪರ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸುತ್ತೋಲೆ ಹೊರಡಿಸಿದ್ದಾರೆ.



ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಲ್ಲಾ ಫಲಾನುಭವಿ ಯೋಜನೆಗಳು ಮತ್ತು ಸಹಾಯಧನವನ್ನು ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ (ಡಿಬಿಟಿ) ಮೂಲಕ ನಿರ್ವಹಿಸಲು ಸೂಚಿಸಲಾಗಿದೆ. ಅದರಂತೆ ಈವರೆಗೂ 379 ಯೋಜನೆಗಳನ್ನು ಈ ವೇದಿಕೆಯ ಒಳತರಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಡಿಬಿಟಿ ವೇದಿಕೆಯಲ್ಲಿ ಅಥೋರಿಸರ್ ಲಾಗ್‌ಇನ್‌ನಲ್ಲಿ ಅನುಮೋದಿಸಲು 3 ದಿನ, ಡಿಬಿಟಿ ವೇದಿಕೆಯಲ್ಲಿ ಅಪ್ರೋವರ್ ಲಾಗ್‌ಇನ್‌ನಲ್ಲಿ ಅನುಮೋದಿಸಲು 2 ದಿನ, ಖಜಾನೆ 2ರಲ್ಲಿ ಡಿಡಿಓ/ಸಿಎಸ್‌ಓ ಲಾಗ್‌ಇನ್‌ನಲ್ಲಿ ಅನುಮೋದಿಸಿ ಬಿಲ್ ತಯಾರಿಸಲು 5 ದಿನ, ಖಜಾನೆ 2ರಲ್ಲಿ ಖಜಾನಾಧಿಕಾರಿಗಳು ಅನುಮೋದಿಸಲು 2 ದಿನ, ಸ್ಕ್ರಾಲ್ ಜನರೇಷನ್ ಮತ್ತು ಫೈನಲ್ ಅಪ್ರೋವಲ್‌ಗೆ 2 ದಿನ ಮತ್ತು ಎನ್‌ಪಿಸಿಐ ಪರಿಶೀಲನೆ ನಂತರ ತಿರಸ್ಕೃತಗೊಂಡ ವಹಿವಾಟುಗಳ ಪಾವತಿಗೆ 7 ದಿನ (ಗರಿಷ್ಠ ಕಾಲಮಿತಿ) ನಿಗದಿಗೊಳಿಸಲಾಗಿದೆ. ಖಜಾನೆ ಮೂಲಕ ಪಾವತಿ ವಿಫಲವಾದ/ತಿರಸ್ಕೃತಗೊಂಡ ವಹಿವಾಟುಗಳನ್ನು ಪಾವತಿಗೆ ಸಲ್ಲಿಸಲು 30 ದಿನ, ಬ್ಯಾಂಕ್ ಮೂಲಕ ಪಾವತಿ ವಿಫಲವಾದ/ತಿರಸ್ಕೃತಗೊಂಡ ವಹಿವಾಟುಗಳ ಪಾವತಿಗೆ 7 ದಿನ ಮತ್ತು ತಪ್ಪಾದ ಖಾತೆಗಳಿಗೆ ಜಮೆಯಾದ ಪ್ರಕರಣಗಳನ್ನು ಡಿಬಿಟಿ ಕೋಶಕ್ಕೆ ವರದಿ ಮಾಡಲು 5 ದಿನಗಳು (ಗರಿಷ್ಠ ಕಾಲಮಿತಿ) ನಿಗದಿಗೊಳಿಸಲಾಗಿದೆ.

# ಬೇಲೂರು ಬಳಿ ಕಾಡಾನೆ ದಾಳಿಗೆ ಕಾರ್ಮಿಕ ಬಲಿ

ಬೇಲೂರು, ಜ.4– ತಾಲ್ಲೂಕಿನ ಮತ್ತಾವರದಲ್ಲಿ ಗುರುವಾರ ಸಂಜೆ ಕಾಡಾನೆ ದಾಳಿಗೆ ಕೂಲಿ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತಾವರ ಗ್ರಾಮದ ವಸಂತ(43) ಮೃತಪಟ್ಟವರಾಗಿದ್ದು, ಇಂದು ಸಂಜೆ ವೇಳೆ ತೋಟದಲ್ಲಿದ್ದ ಅವರ ಮೇಲೆ ಕಾಡಾನೆ ಏಕಾಏಕಿ ದಾಳಿ ಮಾಡಿದ ಪರಿಣಾಮ ವಸಂತ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಆನೆ ದಾಳಿಗೆ ನಿರಂತರವಾಗಿ ಸಾವುಗಳು ಸಂಭವಿಸುತ್ತಿದ್ದರೂ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ. ಆನೆಗಳನ್ನು ಸ್ಥಳಾಂತರ ಮಾಡದೇ ಇದ್ದರೆ, ನಾವೇ ಇಲ್ಲಿಂದ ಜಾಗ ಖಾಲಿ ಮಾಡುತ್ತೇವೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

# ನಮೋ ಬ್ರಿಗೇಡ್‌ನಿಂದ ಕರಸೇವಕರಿಗೆ ಗೌರವ ಸಮರ್ಪಣೆ

## ಅಯೋಧ್ಯೆ ರಾಮಮಂದಿರ ನಿರ್ಮಾಣಕ್ಕೆ ಸಾಕ್ಷಿಯಾಗಿದ್ದೇವೆ ; ಹಿರಿಯ ವಕೀಲ ಸಿ.ವಿ.ಕೇಶವಮೂರ್ತಿ ಸಂತಸ

ಮೈಸೂರು,ಜ.4(ಪಿಎಂ)– ನಮೋ ಬ್ರಿಗೇಡ್ ಮೈಸೂರು ವತಿಯಿಂದ ಮೈಸೂರು ಜಿಲ್ಲೆಯ ವಿವಿಧ ಭಾಗಗಳ ಹಲವು ಕರಸೇವಕರನ್ನು ಗುರುವಾರ ಸನ್ಮಾನಿಸಲಾಯಿತು.

ಮೈಸೂರಿನ ಎನ್‌ಆರ್ ಮೊಹಲ್ಲಾದ ಶ್ರೀಅಂಬಾಭವಾನಿ ದೇವಸ್ಥಾನದ ಭವನದಲ್ಲಿ 'ನಿಮ್ಮ ಸಾಹಸಕ್ಕೆ ನಮ್ಮ ನಮನ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕರಸೇವಕರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಇದಕ್ಕೂ ಮುನ್ನ ಶ್ರೀರಾಮನ ಫೋಟೋಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಹಿರಿಯ ವಕೀಲ ಸಿ.ವಿ.ಕೇಶವಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು.



ಬಳಿಕ ಮಾತನಾಡಿದ ಅವರು, ಇದೊಂದು ಐತಿಹಾಸಿಕ ಕಾರ್ಯಕ್ರಮ. ಈ ಐತಿಹಾಸಿಕ ಪದ ಬಳಸಲು ಕಾರಣ ಅದಕ್ಕೊಂದು ವಿಶೇಷ ಅರ್ಥವಿದೆ. ನಮ್ಮೆಲ್ಲರ ನೆಚ್ಚಿನ ಪ್ರಭು ಶ್ರೀರಾಮಚಂದ್ರನ ಪ್ರತಿಷ್ಠಾಪಿಸಲಾಗಿದ್ದ (ಅಯೋಧ್ಯೆ) ಮಂದಿರ ನೆಲಸಮಗೊಳಿಸಿ ಆ ಜಾಗದಲ್ಲಿ ಮತ್ತೊಂದು ನಿರ್ಮಾಣ ಮಾಡಲಾಗಿತ್ತು. ಇದನ್ನು ಇತಿಹಾಸದಲ್ಲಿ ಓದಿ ತಿಳಿದುಕೊಂಡಿದ್ದೇವೆ. ಇದೀಗ ಈ ತಲೆಮಾರಿನವರು ಅದೇ ಜಾಗದಲ್ಲಿ ಭವ್ಯವಾದ ಶ್ರೀರಾಮಮಂದಿರ ನಿರ್ಮಾಣಕ್ಕೆ ಸಾಕ್ಷಿಯಾಗಿದ್ದೇವೆ. ಜ.22ರಂದು ಇಲ್ಲಿ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಆಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಅಯೋಧ್ಯೆಯಲ್ಲೇ ಭವ್ಯವಾದ ಮಂದಿರ ಏಕೆ ಆಗುತ್ತಿದೆ. ಈ ಮೊದಲು ಆ ಜಾಗದಲ್ಲಿ ಏನಿತ್ತು. ಹಾಗಾದರೆ ಆ ಬದಲಾವಣೆ ಎಂದಾಯಿತು ಎಂದು ಗಮನಿಸಿದರೆ ನಮಗೆ ಇಂದಿನ ಕಾರ್ಯಕ್ರಮದ ಮಹತ್ವ ಅರ್ಥವಾಗಲಿದೆ. 5 ಶತಮಾನಗಳ ಹಿಂದೆ ಅನ್ಯ ಧರ್ಮೀಯರ ದಾಳಿ ಭಾರತದ ಮೇಲೆ ಆರಂಭವಾಯಿತು. ಅವರ ದಾಳಿಯ ಉದ್ದೇಶ ಲೂಟಿಯಾಗಿತ್ತು. ಈ ದೇಶದ ಸಂಪತ್ತನ್ನು ಲೂಟಿ ಮಾಡಲು ಬಂದ ಮತಾಂಧರು ನಮ್ಮ ದೇಶದ ಸಂಸ್ಕೃತಿ ಹಾಗೂ ದೇವಾಲಯಗಳನ್ನು ನಾಶ ಮಾಡುವ ಕೆಲಸದಲ್ಲಿ ತೊಡಗಿದರು ಎಂದು ಕಿಡಿಕಾರಿದರು.

ದೇಶಾದ್ಯಂತ ಸಾವಿರಾರ ದೇವಸ್ಥಾನಗಳನ್ನು ಧ್ವಂಸ ಮಾಡಿದರು. ಅಧಿಕೃತ ಮಾಹಿತಿ ಬೇಕಿದ್ದಲ್ಲಿ 'ಹಿಂದೂ ಟೆಂಪಲ್ಸ್ ; ವಾಟ್ ಹ್ಯಾಪೆನ್ಡ್ ಟು ದೇಮ್' ಎಂಬ ಪುಸ್ತಕ ಗಮನಿಸಬಹುದು. ಇತಿಹಾಸ ತಜ್ಞ ಸೀತಾ ರಾಮ್ ಗೋಯೆಲ್ ಈ ಕೃತಿ ರಚಿಸಿದ್ದಾರೆ. ಈ ಪುಸ್ತಕದಲ್ಲಿ ಭಾರತದಾದ್ಯಂತ ಯಾವ್ಯಾವ ದೇವಸ್ಥಾನ ಧ್ವಂಸಗೊಳಿಸಲಾಯಿತು ಹಾಗೂ ಅಲ್ಲೆಲ್ಲಾ ಯಾವ ಕಟ್ಟಡ ನಿರ್ಮಾಣಗೊಂಡಿತು ಎಂಬ ಮಾಹಿತಿಗಳು ಲಭ್ಯವಾಗಲಿವೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣದಲ್ಲಿ ಮೂಡಲಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ ಧ್ವಂಸಗೊಳಿಸಿ ಮತ್ತೊಂದು ಧರ್ಮೀಯರ ಧಾರ್ಮಿಕ ಕೇಂದ್ರ ನಿರ್ಮಾಣ ಮಾಡಲಾಯಿತು. ಇದು ಬ್ರಿಟಿಷರ ಕಾಲದ ಮಂಡ್ಯ ಡಿಸ್ಟ್ರಿಕ್ಟ್ ಗೆಜೆಟಿಯರ್‌ನಲ್ಲಿ ಉಲ್ಲೇಖವಿದೆ. ಅಲ್ಲದೆ, ಈ ಅಂಶವೂ ಸಹ ಸದರಿ ಪುಸ್ತಕದಲ್ಲೂ ಉಲ್ಲೇಖವಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನಮೋ ಬ್ರಿಗೇಡ್ ಮೈಸೂರು ಸಂಚಾಲಕ ಚಂದ್ರಶೇಖರ್ ನಂಜನಗೂಡು, ಕರಸೇವೆಗೆ ಹೋಗಿದ್ದ ರಾಮಭಕ್ತರನ್ನು ಇಂದು ಜೈಲಿಗೆ ಕಳುಹಿಸುವ ಕೆಲಸ ಮಾಡಲಾಗುತ್ತಿದೆ. ಇದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕರಸೇವಕರಾದ ಡಾ.ಮೋಹನ್ ದಾಸ್ ಭಟ್, ಜಗದೀಶ್, ನಾಗರತ್ನ, ಶ್ರೀನಿವಾಸ್, ಶ್ರೀನಾಥ್, ಬಾಲಾಜಿ ಪಂತ್, ವಿಶ್ವನಾಥ, ಮುಖೇಶ್, ವೆಂಕಟೇಶ್ ಭಟ್, ಗೀತ ಭಟ್, ಅನಂತಪದ್ಮನಾಭ, ದಿನಕರ್, ಯೋಗೇಶ್, ಸುರೇಶ್, ನಾಗರಾಜ್ ಅವರನ್ನು ಸನ್ಮಾನಿಸಲಾಯಿತು. ನಮೋ ಬ್ರಿಗೇಡ್ ಮೈಸೂರು ಪದಾಧಿಕಾರಿಗಳು ಹಾಗೂ ಇನ್ನಿತರರು ಹಾಜರಿದ್ದರು.

# ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೊಟ್ಟ ಭರವಸೆ ಈಡೇರಿಸಿದೆ

## ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ



ಮೈಸೂರು, ಜ.4(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನರಿಗೆ ಕೊಟ್ಟ 5 ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆದ ಏಕೈಕ ಸರ್ಕಾರವಾಗಿದೆ ಎಂದು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ವರುಣ ಕ್ಷೇತ್ರದ ಮುದ್ದೇಗೌಡನ ಹುಂಡಿ, ಕುಪ್ಪೇಗಾಲ, ಲಲಿತಾದ್ರಿಪುರ, ಲಲಿತಾದ್ರಿನಗರ, ಐಪಿಎಸ್ ಬಡಾವಣೆ ಗುಡುಮಾದನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಕಂದಾಯ, ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಬಿಜೆಪಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಮಂದಿರ, ಹಿಂದುತ್ವ ಎಂದು ಜನರನ್ನು ಮರುಳು ಮಾಡಲು ಹೊರಟಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದು, ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಯವರಿಗೆ ಜನರು ಬುದ್ಧಿ ಕಲಿಸುತ್ತಾರೆ ಎಂದರು.

ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೂ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆ ಈಡೇರಿಸಿ, ಹೆಚ್ಚುವರಿ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದರು. 5 ವರ್ಷ ಪೂರ್ಣ ಅವಧಿಯ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು. ಇದೀಗ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುತ್ತಿದ್ದು, ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸಿ, ಲಕ್ಷಾಂತರ ಕುಟುಂಬಕ್ಕೆ ನೆರವಾಗಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ಸದುಪಯೋಗವನ್ನು ಎಲ್ಲಾ ಪಕ್ಷಗಳ ಕಾರ್ಯಕರ್ತರೂ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಬಿಜೆಪಿಗರು ಮೇಲ್ನೋಟಕ್ಕೆ ಟೀಕೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಯೋಜನೆಗಳನ್ನು ಉತ್ತರ ಭಾರತದಲ್ಲಿ ಬಿಜೆಪಿಗರು ಘೋಷಣೆ ಮಾಡಿದ್ದಾರೆ ಎಂದು ಟೀಕಿಸಿದರು.

ಈ ವೇಳೆ ಶುದ್ಧ ಕುಡಿಯುವ ನೀರಿನ ಘಟಕ, ಗ್ರಂಥಾಲಯ ಬೇಕು, ಯುವಕರಿಗೆ ಉದ್ಯೋಗ, ಹೈ ಮಾಸ್ಟ್‌ಲೈಟ್, ರಸ್ತೆಗೆ ಡಾಂಬರೀಕರಣ, ಕಾಂಕ್ರೀಟ್ ರಸ್ತೆ, ರಸ್ತೆ ಅಗಲೀಕರಣ, ನಿವೇಶನ, ಮನೆ ಬೇಕು, ಕೆರೆ ಒತ್ತುವರಿ ತೆರವು, ಹೆಚ್ಚುವರಿ ಬಸ್ ವ್ಯವಸ್ಥೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು. ಅಹವಾಲು ಸ್ವೀಕರಿಸಿದ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ಎಲ್ಲಾ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬಗೆಹರಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎನ್.ವಿಜಯ್, ಆಪ್ತ ಸಹಾಯಕರಾದ ಶಿವಸ್ವಾಮಿ, ಪ್ರದೀಪ್ ಕುಮಾರ್, ಜಿ.ಪಂ. ಮಾಜಿಸದಸ್ಯ ಕೆಂಪೀರಯ್ಯ, ಎಪಿಎಂಸಿ ಮಾಜಿ ಸದಸ್ಯ ಬಸವರಾಜು, ಬಿಇಓ ವಿವೇಕಾನಂದ, ತಾ.ಪಂ. ಸಹಾಯಕ ನಿರ್ದೇಶಕ ಶಿವಣ್ಣ, ಪಿಡಿಓ ವಿಶ್ವನಾಥ್, ಗ್ರಾ.ಪಂ. ಉಪಾಧ್ಯಕ್ಷೆ ಶಿಲ್ಪ ಶಿವಕುಮಾರ್ ಮುಖಂಡರಾದ ಪುಟ್ಟಣ್ಣ, ಮಹೇಂದ್ರ, ಸೋಮಣ್ಣ ರಾಮು, ನಾಗರಾಜ್, ಸಿದ್ದರಾಮು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ದೆಹಲಿಯಲ್ಲಿ ಸಚಿನ್ ತೆಂಡೂಲ್ಕರ್ ಭೇಟಿಯಾದ ಸಿಎಂ ಸಿದ್ದರಾಮಯ್ಯ!



ಬೆಂಗಳೂರು/ದೆಹಲಿ, ಜ.4– ಕ್ರಿಕೆಟ್ ಲೋಕದ ದಂತಕತೆ ಸಚಿನ್ ತೆಂಡೂಲ್ಕರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಕಸ್ಮಿಕವಾಗಿ ದೆಹಲಿ ವಿಮಾನ ನಿಲ್ದಾಣದಲ್ಲಿ ಮುಖಾಮುಖಿಯಾದ ಅಪರೂಪದ ಪ್ರಸಂಗ ಇಂದು ಜರುಗಿದೆ.

ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿದ್ದಾರೆ. ಜಾಗತಿಕ ಕ್ರಿಕೆಟ್‌ನ ದಂತಕಥೆ, ಲಿಟ್ಲ್ ಮಾಸ್ಟರ್ ಸಚಿನ್ ತೆಂಡೂಲ್ಕರ್ ಅವರು ಇಂದು ದೆಹಲಿಯ ವಿಮಾನ ನಿಲ್ದಾಣದಲ್ಲಿ ಆಕಸ್ಮಿಕವಾಗಿ ಎದುರಾದ ವೇಳೆ ಕುಶಲೋಪರಿ ವಿಚಾರಿಸಿ, ಪ್ರೀತಿಯಿಂದ ಬೀಳ್ಕೊಟ್ಟೆ ಎಂದು ಹೇಳಿದ್ದಾರೆ.

ಸಚಿನ್ ತೆಂಡೂಲ್ಕರ್ ನನ್ನ ಅಚ್ಚುಮೆಚ್ಚಿನ ಆಟಗಾರ, ದಶಕಗಳ ಕಾಲ ತೆಂಡೂಲ್ಕರ್ ಅವರ ಆಟವನ್ನು ಆಸ್ವಾದಿಸಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

**ಸಿದ್ದು ದೆಹಲಿಗೆ ಹೋಗಿದ್ದೇಕೆ:** ಕೇಂದ್ರದ ಮಾಜಿ ಹಣಕಾಸು ಸಚಿವ ಚಿದಂಬರಂ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿಂದು ಚುನಾವಣಾ ಪ್ರಣಾಳಿಕೆ ಸಮಿತಿ ಸಭೆ ನಡೆಯಿತು. ಈ ಸಭೆಯಲ್ಲಿ ಪಾಲ್ಗೊಳ್ಳಲು ಸಿಎಂ ಸಿದ್ದರಾಮಯ್ಯ ರಾಷ್ಟ್ರ ರಾಜಧಾನಿಗೆ ತೆರಳಿದ್ದಾರೆ. ಈ ವೇಳೆ ಆಕಸ್ಮಿಕವಾಗಿ ಸಚಿನ್ ಅವರನ್ನು ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿದ್ದಾರೆ.

ಸಿದ್ದರಾಮಯ್ಯ ಅವರು ಕ್ರಿಕೆಟ್ ಪ್ರೇಮಿ ಎಂಬುದು ಎಲ್ಲರಿಗೂ ತಿಳಿದಿದೆ ಅನೇಕ ಬಾರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತದ ಪಂದ್ಯಗಳನ್ನು ವೀಕ್ಷಣೆ ಮಾಡಿದ್ದಾರೆ.

# ವೈದ್ಯರ ಅಪಹರಿಸಿ ಸುಲಿಗೆ ಪ್ರಕರಣ: 9 ವರ್ಷದ ನಂತರ ಆರೋಪಿ ಬಂಧನ

## ಇದರ ಜೊತೆ ಹಲವಾರು ವಂಚನೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ

ಮೈಸೂರು, ಜ.4–ವೈದ್ಯರೊಬ್ಬರನ್ನು ಅಪಹರಿಸಿ ಲಕ್ಷಾಂತರ ರೂ. ಸುಲಿಗೆ ಮಾಡಿದ ಪ್ರಕರಣದಲ್ಲಿ ಕಳೆದ 9 ವರ್ಷದಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸುವಲ್ಲಿ ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ದಟ್ಟಗಳ್ಳಿ ನಿವಾಸಿ ಫಣಿರಾಜ್ ಗೌಡ ಬಂಧಿತ ಆರೋಪಿಯಾಗಿದ್ದು, ಈತ ಅಂತರ ಜಿಲ್ಲಾ ವಂಚಕನೂ ಹೌದು. ಈತನ ವಿರುದ್ಧ ಮೈಸೂರು ನಗರ ಮಾತ್ರವಲ್ಲದೆ, ರಾಜ್ಯದ ಹಲವಾರು ಪೊಲೀಸ್ ಠಾಣೆಗಳಲ್ಲಿ ವಂಚನೆ ಪ್ರಕರಣಗಳು ದಾಖಲಾಗಿವೆ.

**ವಿವರ:** ಕುವೆಂಪುನಗರದ ಪಂಚಮಂತ್ರ ರಸ್ತೆ ನಿವಾಸಿಯಾದ ಡಾ. ಎಂ.ಕೆ. ಮಹೇಶ್ ಅವರನ್ನು 2014ರ ಆ.8ರಂದು ರಾತ್ರಿ ಅವರ ಮನೆಯಿಂದಲೇ ಫಣಿರಾಜ್ ಗೌಡ ಮತ್ತು ರಾಮಚಂದ್ರ ಡಿ.ಹೆಗ್ಡೆ ಅವರು ಅಪಹರಿಸಿ ಮೊದಲಿಗೆ ಫಣಿರಾಜ್ ಗೌಡನ ಮನೆಗೆ ಕೊಂಡೊಯ್ದಿದ್ದರು. ಆ ವೇಳೆ ಕೆಲವು ಖಾಲಿ ದಾಖಲಾತಿಗಳಿಗೆ ಡಾ. ಮಹೇಶ್ ಅವರಿಂದ ಬಲವಂತವಾಗಿ ಸಹಿ ಹಾಕಿಸಿಕೊಂಡಿದ್ದಲ್ಲದೇ, ರಾಮಚಂದ್ರ ಡಿ.ಹೆಗ್ಡೆ ಬ್ಯಾಂಕ್ ಖಾತೆಗೆ 20 ಸಾವಿರ ರೂ. ಜಮೆ ಮಾಡಬೇಕೆಂದು ಒತ್ತಾಯಿಸಿದ್ದರು. ಈ ವೇಳೆ ಡಾ. ಮಹೇಶ್ ಅವರು ತಮ್ಮ ಸಂಬಂಧಿಕರಾದ ಆನಂದ್ ಎಂಬುವರಿಗೆ ಕರೆ ಮಾಡಿ ರಾಮಚಂದ್ರ ಡಿ.ಹೆಗ್ಡೆ ಬ್ಯಾಂಕ್ ಖಾತೆಗೆ 20 ಸಾವಿರ ರೂ. ಜಮೆ ಮಾಡಿಸಿದ್ದರು.



ನಂತರ ತಾವು ಸೂಚಿಸಿದ ಸ್ಥಳಕ್ಕೆ 2 ಲಕ್ಷ ರೂ. ತಂದುಕೊಡಬೇಕೆಂದು ಒತ್ತಾಯಿಸಿ ಆ ಹಣವನ್ನೂ ಕೂಡ ಪಡೆದ ನಂತರ ಅವರನ್ನು ಮಂಗಳೂರಿನ ಅಂಕೋಲಾಗೆ ಅಪಹರಿಸಿಕೊಂಡು ಹೋಗಿದ್ದರು. ಅಲ್ಲಿಂದ ಡಾ. ಮಹೇಶ್ ಅವರ ತಂದೆ ಕೆ.ಡಿ.ಕೃಷ್ಣಯ್ಯ ಮತ್ತು ಸಂಬಂಧಿಕರಾದ ಬಸವರಾಜಯ್ಯ ಎಂಬುವರಿಂದ ಮತ್ತೆ 3 ಲಕ್ಷ ರೂ. ಪಡೆದು 2014ರ ಆ.11ರಂದು ಡಾ. ಮಹೇಶ್ ಅವರನ್ನು ಬಿಡುಗಡೆ ಮಾಡಿದ್ದಲ್ಲದೆ, ಈ ಸಂಬಂಧ ಪೊಲೀಸರಿಗೆ ತಿಳಿಸಿದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು.

ಕೆಲ ದಿನಗಳ ನಂತರ ಡಾ. ಮಹೇಶ್ ಈ ಸಂಬಂಧ ಮೈಸೂರಿನ 1ನೇ ಎಎಫ್‌ಎಂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಕುವೆಂಪುನಗರ ಠಾಣೆ ಪೊಲೀಸರು 2014ರ ನ19ರಂದು ಭಾರತೀಯ ದಂಡ ಸಂಹಿತೆ 426, 468, 469, 471, 120, 34ರಡಿ ಪ್ರಕರಣ ದಾಖಲಿಸಿಕೊಂಡಿದ್ದರು. ಈ ಪ್ರಕರಣದಲ್ಲಿ ಪೊಲೀಸರಿಗೆ ಸಿಗದೆ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದ ಫಣಿರಾಜ್ ಗೌಡನನ್ನು ಕುವೆಂಪು ಠಾಣೆ ಇನ್ಸ್‌ಪೆಕ್ಟರ್ ಅರುಣ್ ನೇತೃತ್ವದ ಪೊಲೀಸರು ಬಂಧಿಸಿ, ನ್ಯಾಯಾ ಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಹಳೆಯ ಪ್ರಕರಣಗಳ ಬಗ್ಗೆ ಗಮನ ಹರಿಸಿದ್ದ ಇನ್ಸ್‌ಪೆಕ್ಟರ್ ಅರುಣ್ ಅವರು, 9 ವರ್ಷ ತಲೆಮರೆಸಿಕೊಂಡಿದ್ದ ಫಣಿರಾಜ್ ಗೌಡನನ್ನು ಬಂಧಿಸಿದ ವಿಚಾರ ತಿಳಿಯುತ್ತಿದ್ದಂತೆಯೇ ಈತ ಕೇವಲ ಅಪಹರಣ ಮಾತ್ರವಲ್ಲದೆ, ಹಲವಾರು ವಂಚನೆ ಪ್ರಕರಣಗಳಲ್ಲಿ ವಿವಿಧ ಠಾಣೆಗಳಿಗೆ ಬೇಕಾಗಿದ್ದಾನೆ ಎಂಬುದು ತಿಳಿದು ಬಂದಿದೆ.

ಚಾಮರಾಜನಗರ ಪಟ್ಟಣದಲ್ಲಿ ನಿಷ್ಕಾ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ ಎಂಬ ಹೆಸರಿನಲ್ಲಿ ಸಂಘ ಸ್ಥಾಪನೆ ಮಾಡಿಕೊಂಡಿದ್ದ ಈತ, ಅಲ್ಲಿನ ಅನೇಕ ಜನರಿಂದ ಹಣ ಸಂಗ್ರಹಿಸಿ ವಂಚಿಸಿದ್ದ. ಈ ಸಂಬಂಧ ಚಾಮರಾಜನಗರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮೈಸೂರು ನಗರದ ಆಲನಹಳ್ಳಿ, ಕೃಷ್ಣರಾಜ ಮತ್ತು ಸರಸ್ವತಿಪುರಂ ಠಾಣೆಗಳಲ್ಲೂ ವಂಚನೆ ಪ್ರಕರಣಗಳು ಈತನ ವಿರುದ್ಧ ದಾಖಲಾಗಿವೆ. ಮಂಡ್ಯ ಜಿಲ್ಲೆಯ ಪಾಂಡವಪುರ ಠಾಣೆ, ತುಮಕೂರು ಟೌನ್ ಠಾಣೆ, ಬೆಂಗಳೂರಿನ ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ, ಹನುಮಂತನಗರ ಪೊಲೀಸ್ ಠಾಣೆಗಳಲ್ಲೂ ಫಣಿರಾಜ್ ಗೌಡ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಹೆಚ್ಚಿನ ಬಡ್ಡಿ ಆಮಿಷವೊಡ್ಡಿ ಹಣ ಸಂಗ್ರಹಿಸಿ ವಂಚನೆ, ನಿವೇಶನ ನೀಡುವುದಾಗಿ ಲಕ್ಷಾಂತರ ಹಣ ಪಡೆದು ವಂಚಿಸಿರುವುದೂ ಸೇರಿದಂತೆ ವಿವಿಧ ಶೈಲಿಗಳಲ್ಲಿ ಈತ ವಂಚನೆ ಎಸಗಿದ್ದಾನೆ. ಕೆಲವು ಪ್ರಕರಣಗಳಲ್ಲಿ ಜಾಮೀನು ಪಡೆದು ಮತ್ತೆ ನ್ಯಾಯಾಲಯಕ್ಕೆ ಹಾಜರಾಗದೇ ಇರುವ ಈತನ ವಿರುದ್ಧ ಕೆಲ ಪ್ರಕರಣಗಳಲ್ಲಿ ವಾರೆಂಟ್‌ಗಳಿವೆ. ಪೊಲೀಸರು ಬಂಧಿಸಬಹುದೆಂಬ ಕಾರಣಕ್ಕಾಗಿ ಈತ ಒಂದೇ ಸ್ಥಳದಲ್ಲಿ ಹೆಚ್ಚಿನ ದಿನ ಇರದೆ ಪದೇ ಪದೇ ಸ್ಥಳ ಬದಲಾಯಿಸುತ್ತಿದ್ದ ಎಂದು ಹೇಳಲಾಗಿದ್ದು, ಈತನ ಚಲನ–ವಲನದ ಬಗ್ಗೆ ನಿಗಾ ವಹಿಸಿದ್ದ ಇನ್ಸ್‌ಪೆಕ್ಟರ್ ಅರುಣ್ ನೇತೃತ್ವದ ತಂಡ ಆತ ದಟ್ಟಗಳ್ಳಿಯ ಮನೆಗೆ ಬಂದಿದ್ದಾನೆ ಎಂಬ ಮಾಹಿತಿ ದೊರೆಯುತ್ತಿದ್ದಂತೆಯೇ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಿದ್ದಾರೆ.

# ಹರಿಣಗಳ ನಾಡಲ್ಲಿ ಭಾರತಕ್ಕೆ ಐತಿಹಾಸಿಕ ಗೆಲುವು

● 1–1 ರಿಂದ ಸರಣಿ ಸಮಬಲ ● ಕೇಪ್‌ಟೌನ್ ಪಂದ್ಯ ಗೆದ್ದ ಏಷ್ಯಾದ ಮೊದಲ ನಾಯಕ ರೋಹಿತ್

ಕೇಪ್‌ಟೌನ್, ಜ.4– ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ, ದಕ್ಷಿಣ ಆಫ್ರಿಕಾದ ವಿರುದ್ಧ ನಡೆದ 2ನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ 7 ವಿಕೆಟ್‌ಗಳ ಐತಿಹಾಸಿಕ ಜಯ ಸಾಧಿಸಿತು. ಆ ಮೂಲಕ ತವರಿನಲ್ಲೇ ಹರಿಣರನ್ನು ಬಗ್ಗುಬಡಿದು 1–1ರಲ್ಲಿ ಸರಣಿ ಸಮಬಲಗೊಳಿಸಿತು.




ಈ ಗೆಲುವಿನ ಮೂಲಕ ರೋಹಿತ್ ಶರ್ಮಾ ಕೇಪ್‌ಟೌನ್‌ನಲ್ಲಿ ಟೆಸ್ಟ್ ಪಂದ್ಯ ಗೆದ್ದ ಏಷ್ಯಾದ ಮೊದಲ ನಾಯಕ ಎಂಬ ಕೀರ್ತಿಗೆ ಪಾತ್ರರಾದರು. ಅಲ್ಲದೇ ಎಂ.ಎಸ್. ಧೋನಿ ನಂತರ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿ ಸಮಬಲಗೊಳಿಸಿದ 2ನೇ ಭಾರತೀಯ ನಾಯಕ ಎಂಬ ಹಿರಿಮೆಗೂ ರೋಹಿತ್ ಪಾತ್ರರಾದರು.

ಮೊದಲ ಇನ್ನಿಂಗ್ಸ್‌ನಲ್ಲಿ ಮೊಹಮ್ಮದ್ ಸಿರಾಜ್ ಮಾರಕ ದಾಳಿಗೆ ತುತ್ತಾದ ದಕ್ಷಿಣ ಆಫ್ರಿಕಾ ಕೇವಲ 55 ರನ್‌ಗಳಿಗೆ ಸರ್ವಪತನ ಕಂಡಿತು. ಅಲ್ಪ ಮೊತ್ತದ ಗುರಿ ಬೆನ್ನತ್ತಿದ್ದ ಭಾರತ ಸಹ 153 ರನ್‌ಗಳಿಗೆ ಆಲೌಟ್ ಆಯಿತು. ಪುನಃ ಇನ್ನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ 17 ಓವರ್‌ಗಳಲ್ಲಿ 62 ರನ್‌ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಮೊದಲ ದಿನದ ಇನ್ನಿಂಗ್ಸ್ ಅಂತ್ಯಗೊಳಿಸಿತ್ತು ಗುರುವಾರ ತನ್ನ ಸರದಿ ಆರಂಭಿಸಿದ ಹರಿಣರು ಏಡನ್ ಮಾರ್ಕ್ರಮ್ ಭರ್ಜರಿ ಶತಕದೊಂದಿಗೆ 36.5 ಓವರ್‌ಗಳಲ್ಲಿ 176 ರನ್‌ಗಳಿಗೆ ಸರ್ವಪತನ ಕಂಡಿತು. ಇದರಿಂದ ಟೀಂ ಇಂಡಿಯಾಕ್ಕೆ 79 ರನ್‌ಗಳ ಗುರಿ ನೀಡಿತು.

### ಅತ್ಯಂತ ಚುಟುಕು ಪಂದ್ಯ

ಕೇವಲ ಎರಡೇ ದಿನಗಳಲ್ಲಿ ಮುಕ್ತಾಯಗೊಂಡ ಈ ಪಂದ್ಯ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ಚುಟುಕು ಪಂದ್ಯ ಎನಿಸಿಕೊಂಡಿತು. ಇತ್ತಂಡಗಳ ಇನ್ನಿಂಗ್ಸ್‌ಗಳಿಂದ ಒಟ್ಟು 642 ಎಸೆತಗಳು ದಾಖಲಾದವು. 1932ರಂದು ಮೆಲ್ಬರ್ನ್‌ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ನಡುವಿನ ಪಂದ್ಯದಲ್ಲಿ 656 ಎಸೆತಗಳು ಹಾಗೂ 1935ರಲ್ಲಿ ಬ್ರಿಡ್ಜ್‌ಟೌನ್‌ನಲ್ಲಿ ವೆಸ್ಟ್‌ಇಂಡೀಸ್ ಮತ್ತು ಇಂಗ್ಲೆಂಡ್ ನಡುವಿನ ಪಂದ್ಯದಲ್ಲಿ 672 ಎಸೆತಗಳು ದಾಖಲಾಗಿದ್ದು, ಈವರೆಗಿನ ಸಾಧನೆಯಾಗಿತ್ತು.

ದಕ್ಷಿಣ ಆಫ್ರಿಕಾ ಪರ ಆರಂಭಿಕ ಏಡನ್ ಮಾರ್ಕ್ರಮ್ 103 ಎಸೆತಗಳಲ್ಲಿ 2 ಸಿಕ್ಸರ್, 17 ಬೌಂಡರಿಯೊಂದಿಗೆ 106 ರನ್ ಬಾರಿಸಿದ್ದೆ, ಡೀನ್ ಎಲ್ಗರ್ 12 ರನ್, ಡೇವಿಡ್ ಬೆಡಿಂಗ್ಹ್ಯಾಮ್ ಮತ್ತು ಮಾರ್ಕೋ ಜಾನ್ಸೆನ್ ತಲಾ 11 ರನ್ ಗಳಿಸಿದ್ದು. ಇನ್ನುಳಿದ ಆಟಗಾರರು ಕೇವಲ ಒಂದಂಕಿಯ ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಭಾರತದ ಪರ ಬೂಮ್ರಾ 6, ಮುಖೇಶ್ ಕುಮಾರ್ 2, ಸಿರಾಜ್ ಹಾಗೂ ಪ್ರಸಿದ್ಧ ಕೃಷ್ಣ ತಲಾ ಒಂದೊಂದು ವಿಕೆಟ್ ಉರುಳಿಸಿದರು.

79 ರನ್‌ಗಳ ಗುರಿ ಬೆನ್ನತ್ತಿದ್ದ ಭಾರತ, ನಾಯಕ ರೋಹಿತ್ ಶರ್ಮಾ ಅವರ ತಾಳ್ಮೆಯ ಬ್ಯಾಟಿಂಗ್‌ನಿಂದ 12 ಓವರ್‌ಗಳಲ್ಲೇ 3 ವಿಕೆಟ್ ನಷ್ಟಕ್ಕೆ 80 ರನ್ ಗಳಿಸಿ ಗೆಲುವು ಸಾಧಿಸಿತು. ಭಾರತದ ಪರ ಯಶಸ್ವಿ ಜೈಸ್ವಾಲ್ 28, ರೋಹಿತ್ ಶರ್ಮಾ 16, ಶುಭಮನ್ ಗಿಲ್ 10, ವಿರಾಟ್ ಕೊಹ್ಲಿ 12, ಶ್ರೇಯಸ್ ಅಯ್ಯರ್ 4 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಕಗಿಸೋ ರಬಾಡ, ಮಾರ್ಕೋ ಯಾನ್ಸನ್ ಹಾಗೂ ನಾಂಡ್ರೆ ಬರ್ಗರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೇ, ದಕ್ಷಿಣ ಆಫ್ರಿಕಾದ ಡೀನ್ ಎಲ್ಗರ್ ಹಾಗೂ ಬೂಮ್ರಾ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

# ಲೈಬ್ರರಿಯಿಂದ ಭವಾನಿಗೆ ಹೊಸ ಜೀವನ

## ಸ್ವಚ್ಛತಾ ಸಿಬ್ಬಂದಿಯ ಎಸ್‌ಎಸ್‌ಎಲ್‌ಸಿ ತೇರ್ಗಡೆಗೆ ನೆರವು



**ಭವಾನಿ ಕಲಿಕೆಗೆ ಅನುಕೂಲವಾಗಲೆಂದು ಗ್ರಾಮ ಡಿಜಿ ವಿಕಾಸ್ ಪೋರ್ಟಲ್‌ನಿಂದ ಅಧ್ಯಯನ ಸಾಮಗ್ರಿಗಳನ್ನು ಡೌನ್‌ಲೋಡ್ ಮಾಡಿ ಕೊಟ್ಟಿದ್ದೆ. ಈ ಅಧ್ಯಯನ ಸಾಮಗ್ರಿಗಳು ವಿಡಿಯೋ ರೂಪದಲ್ಲಿದ್ದು, ಅರ್ಥ ಮಾಡಿಕೊಳ್ಳಲು ಸುಲಭವಾಗಿದೆ. ಜೊತೆಗೆ ಭವಾನಿ ಪ್ರತಿದಿನ ಗ್ರಂಥಾಲಯಕ್ಕೆ ಭೇಟಿ ನೀಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಓದುತ್ತಿದ್ದರು.**
-ಕೆ.ವಿ.ಸುಜಿತಾ, ಗ್ರಂಥಾಲಯ ಮೇಲ್ವಿಚಾರಕಿ

ಮಡಿಕೇರಿ, ಜ.4– ಕೊಡಗಿನ ಗ್ರಾಮೀಣ ಭಾಗದ ಡಿಜಿಟಲ್ ಲೈಬ್ರರಿಯೊಂದು ಗ್ರಾಮ ಪಂಚಾಯಿತಿಯ ಸ್ವಚ್ಛತಾ ಸಿಬ್ಬಂದಿಯ ಜ್ಞಾನಾರ್ಜನೆಯೊಂದಿಗೆ ಹೊಸ ಜೀವನಕ್ಕೆ ನೆರವಾಗಿದೆ.

ಹೌದು. ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮದ ನಿವಾಸಿಯಾದ ಸ್ವಚ್ಛತಾ ಸಿಬ್ಬಂದಿ ಎಚ್.ಡಿ. ಭವಾನಿ ಇದೀಗ ಡಿಜಿಟಲ್ ಲೈಬ್ರರಿಯ ಸಹಾಯದಿಂದ ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿದ್ದಾರೆ. ಇದರಿಂದ ಈಕೆ ತಮ್ಮ 12 ವರ್ಷದ ವೃತ್ತಿ ಜೀವನದಲ್ಲಿ ಬಡ್ತಿ ನಿರೀಕ್ಷೆಯಲ್ಲಿದ್ದಾರೆ. ಬಡಕುಟುಂಬದಿಂದ ಬಂದ ಈಕೆ ಸರಿಯಾಗಿ ಶಾಲೆಗೆ ಹೋಗಲು ಸಾಧ್ಯವಾಗಿರಲಿಲ್ಲ. ದಿನಗೂಲಿ ಕೆಲಸ ಮಾಡುವ ಮೂಲಕ ಸಂಪಾದಿಸಲು ಪ್ರಾರಂಭಿಸಿದರು. ನಂತರ ಮಾಲ್ದಾರೆ ಗ್ರಾಮ ಪಂಚಾಯಿತಿಯಲ್ಲಿ ಕೆಲಸಕ್ಕೆ ಅರ್ಜಿ ಸಲ್ಲಿಸಿ ಕಳೆದ 12 ವರ್ಷಗಳಿಂದ ಸ್ವಚ್ಛತಾ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಕೆಯ ಕಲಿಕೆಯ ಕಠಿಣ ಪರಿಶ್ರಮದಿಂದ 10ನೇ ತರಗತಿ ಪೂರ್ಣಗೊಳಿಸಲು ಡಿಜಿಟಲ್ ಲೈಬ್ರರಿ ಸಹಕಾರಿಯಾಗಿದೆ. ಇದರಿಂದ ಎಚ್.ಡಿ. ಭವಾನಿ ಅವರನ್ನು ಶೀಘ್ರದಲ್ಲೇ ಕಸ ಸಂಗ್ರಹಿಸಿ, ವಿಲೇ ವಾರಿ ಪೌರಕಾರ್ಮಿಕರಾಗಿ ನಿಯೋಜಿಸಲಾಗುವುದು.

ಟ್ಯೂಬಲ್‌ಲಿಗೇಷನ್, ಗರ್ಭಾಶಯ, ಪೈಲ್ಸ್, ಅಪೆಂಡಿಕ್ಸ್ ಮತ್ತು ಕಾಲಿನ ಶಸ್ತ್ರಚಿಕಿತ್ಸೆ ಸೇರಿದಂತೆ ಐದು ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಭವಾನಿಗೆ ಭಾರ ಎತ್ತಲು ಸಾಧ್ಯವಾಗುವುದಿಲ್ಲ. 10ನೇ ತರಗತಿ ಪಾಸಾಗಿದ್ದರೆ ಪಂಚಾಯಿತಿಗೆ ಅಟೆಂಡರ್ ಹುದ್ದೆಗೆ ಅರ್ಜಿ ಸಲ್ಲಿಸಬಹುದಿತ್ತು ಎಂದು ಈಕೆಗೆ ಅಂದಿನ ಪಿಡಿಓ ತಿಳಿಸಿದ್ದರು. ನಂತರ ಈಕೆ 10ನೇ ತರಗತಿ ಪರೀಕ್ಷೆ ಬರೆಯಲು ಪ್ರಯತ್ನಿಸಿ, ಗ್ರಂಥಾಲಯದ ಮೇಲ್ವಿಚಾರಕಿ ಸುಜಿತಾ ಅವರ ಬೆಂಬಲ ಪಡೆದು ನಿತ್ಯ ಡಿಜಿಟಲ್ ಲೈಬ್ರರಿಗೆ ಹೋಗಿ ಕಲಿಕೆಯಲ್ಲಿ ತೊಡಗಿಸಿಕೊಂಡು ಎಸ್‌ಎಸ್‌ಎಲ್‌ಸಿ ಪಾಸಾಗಿದ್ದಾರೆ. ಇದರಿಂದ ಪಂಚಾಯಿತಿಯ ಅಟೆಂಡರ್ ಹುದ್ದೆ ಸಿಗುವುದಾಗಿ ಭವಾನಿ ಆಶಯ ವ್ಯಕ್ತಪಡಿಸಿದ್ದಾರೆ.

ಮೂರು ತಿಂಗಳು ಪ್ರತಿದಿನ ಗ್ರಂಥಾಲಯದಲ್ಲಿ ಓದುತ್ತಿದ್ದ ಭವಾನಿ, ಕಳೆದ ಮಾರ್ಚ್‌ನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದರು. ಆದರೆ, ಅದರಲ್ಲಿ ಕನ್ನಡದಲ್ಲಿ ಮಾತ್ರ ತೇರ್ಗಡೆಯಾದರು. ನಂತರ ಪೂರಕ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾಗಿದ್ದಾರೆ. ಇದರಿಂದ ಭವಾನಿ ಅಟೆಂಡರ್ ಹುದ್ದೆಯನ್ನು ಪಡೆಯುವ ವಿಶ್ವಾಸದಲ್ಲಿದ್ದಾರೆ.

# ಗಾಂಧಿ ಸ್ಮಾರಕ ಉದ್ಯಾನಕ್ಕೆ 50 ಲಕ್ಷ ರೂ. ಬಿಡುಗಡೆ

## ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಮಾಹಿತಿ



ಮಡಿಕೇರಿ, ಜ.4–ನಗರದ ಗಾಂಧಿ ಮಂಟಪದ ಗಾಂಧಿ ಸ್ಮಾರಕ ಉದ್ಯಾನ ನಿರ್ಮಾಣಕ್ಕೆ ಸರ್ಕಾರದಿಂದ ಈಗಾಗಲೇ 50 ಲಕ್ಷ ರೂ. ಬಿಡುಗಡೆಯಾಗಿದ್ದು, ವಿಧಾನಪರಿಷತ್ ಅನುದಾನದಿಂದಲೂ 5 ಲಕ್ಷ ರೂ. ನೀಡಲಾಗುವುದು ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು.

ನಗರದ ಗಾಂಧಿ ಮಂಟಪದಲ್ಲಿ ನಿರ್ಮಾಣವಾಗುತ್ತಿರುವ ರಾಷ್ಟ್ರಪಿತ ಮಹಾತ್ಮ 'ಗಾಂಧೀಜಿಯವರ ಸ್ಮಾರಕ ಉದ್ಯಾನ' ಕಾಮಗಾರಿಯನ್ನು ಪರಿಶೀಲಿಸಿ ಮಾತನಾಡಿದ ಅವರು, ಕಾಮಗಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜೊತೆಗೆ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಗಾಂಧಿ ಸ್ಮಾರಕ ಉದ್ಯಾನ ನಿರ್ಮಾಣಕ್ಕೆ ಶಾಸಕರ ಅನುದಾನದಡಿ ಸಾಧ್ಯವಾದಷ್ಟು 10 ಲಕ್ಷ ರೂ. ಬಿಡುಗಡೆಗೆ ಕ್ರಮವಹಿಸಲಾಗುವುದು. ಜೊತೆಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಬಿಡುಗಡೆಗೆ ಪ್ರಯತ್ನಿಸಲಾಗುವುದು. ಕಾಮಗಾರಿ ತ್ವರಿತವಾಗಿ ಕೈಗೊಳ್ಳಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ಸೂಚಿಸಿದರು.

ಸರ್ವೋದಯ ಸಮಿತಿಯ ನಿಕಟ ಪೂರ್ವ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ನಿಧಿಯಿಂದ ಅನುದಾನ ಒದಗಿಸುವ ಜೊತೆಗೆ ಮತ್ತಷ್ಟು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಮನವಿ ಮಾಡಬೇಕು. ಗಾಂಧಿ ಸ್ಮಾರಕ ಉದ್ಯಾನವನ್ನು ರಾಜ್‌ಘಾಟ್ ಮಾದರಿಯಲ್ಲಿ ನಿರ್ಮಿಸಬೇಕಿದೆ. ಆ ನಿಟ್ಟಿನಲ್ಲಿ ಆಕರ್ಷಣೀಯ ಕೇಂದ್ರವಾಗಿ ಗಾಂಧಿ ಸ್ಮಾರಕ ಉದ್ಯಾನವನ್ನು ಮಾದರಿಯಾಗಿ ನಿರ್ಮಿಸಬೇಕು ಎಂದು ಸಚಿವರು ಹಾಗೂ ಶಾಸಕರಿಗೆ ಮನವಿ ಮಾಡಿದರು.

ಇದೇ ವೇಳೆ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್, ಗಾಂಧಿ ಸ್ಮಾರಕ ಉದ್ಯಾನ ಸಂಬಂಧ ನೀಲನಕಾಶೆ ಬಗ್ಗೆ ಮಾಹಿತಿ ನೀಡಿದರು. ಸರ್ವೋದಯ ಸಮಿತಿಯ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಸದಸ್ಯರಾದ ಮುನೀರ್ ಅಹಮದ್, ನಿರ್ಮಿತಿ ಕೇಂದ್ರದ ಇಂಜಿನಿಯರ್ ರಾಘವೇಂದ್ರ, ಪ್ರಮುಖರಾದ ಕಾರ್ಯಪ್ಪ ಇತರರು ಇದ್ದರು.

## ಜಿಲ್ಲೆಯ ವಿವಿಧೆಡೆ ಅಕಾಲಿಕ ಮಳೆ

ಮಡಿಕೇರಿ, ಜ.4– ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಬುಧವಾರ ಅಕಾಲಿಕ ಮಳೆಯಾಗಿದ್ದು, ಇದರಿಂದ ಕೃಷಿಕರು ಹಾಗೂ ಕಾಫಿ ಬೆಳೆಗಾರರಿಗೆ ಆತಂಕ ಮೂಡಿಸಿದೆ.

ಮಡಿಕೇರಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ದಟ್ಟಮಂಜು ಸಹಿತ ತುಂತುರು ಮಳೆಯಾಗಿದ್ದು, ಗೋಣಿಕೊಪ್ಪ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಕಾಫಿ ಹಣ್ಣಾಗುತ್ತಿದ್ದು, ಕೆಲವು ಕಡೆಗಳಲ್ಲಿ ಕಾಫಿ ಕುಯಿಲು ಆರಂಭಿಸಲಾಗಿದೆ. ಮೋಡಕವಿದ ವಾತಾವರಣ ಹಾಗೂ ಮಳೆಯಿಂದಾಗಿ ಹಣ್ಣಾಗಿರುವ ಕಾಫಿ ಗಿಡಗಳಿಂದ ಉದುರುವ ಆತಂಕ ಬೆಳೆಗಾರರಲ್ಲಿ ಮನೆ ಮಾಡಿದೆ.

ಮೋಡ ಕವಿದ ವಾತಾವರಣದಿಂದ ಈಗಾಗಲೇ ಕುಯಿಲು ಮಾಡಿರುವ ಕಾಫಿಯನ್ನು ಕಣಗಳಲ್ಲಿ ಒಣಗಿಸುವುದೇ ಸವಾಲಾಗಿ ಪರಿಣಮಿಸಿದೆ. ಮತ್ತೊಂದೆಡೆ ಭತ್ತದ ಫಸಲು ಕೂಡ ಕಟಾವಿಗೆ ಬಂದಿದ್ದು, ಮಳೆ ಬೆಳೆ ನಷ್ಟ ಉಂಟು ಮಾಡುವ ಆತಂಕ ರೈತರಲ್ಲಿದೆ. ಕಟಾವು ಮಾಡಲಾಗಿರುವ ಭತ್ತವನ್ನು ಗದ್ದೆಯಲ್ಲೇ ಒಣಗಲು ಬಿಡಲಾಗಿದ್ದು, ಮಳೆ ನೀರಿನಿಂದ ಭತ್ತಕ್ಕೆ ಹಾನಿಯಾಗಲಿದೆ. ಅಕಾಲಿಕ ಮಳೆಯಿಂದ ರೈತರಲ್ಲಿ ಆತಂಕ ಉಂಟು ಮಾಡಿದೆ.

## ಗಾಂಜಾ ಮಾರಾಟ: 3 ಆರೋಪಿಗಳ ಬಂಧನ





ನಾಪೋಕ್ಲು, ಜ.4–ಮಡಿಕೇರಿ ತಾಲೂಕಿನ ಬಲಮುರಿ ಗ್ರಾಮದ ಕಾವೇರಿ ನದಿ ಸೇತುವೆ ಬಳಿಯ ಹೊಳೆಮುಡಿ ಮೈದಾನದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ನಾಪೋಕ್ಲು ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದು, 275 ಗ್ರಾಂ ಗಾಂಜಾ, ನಗದು, 3 ಮೊಬೈಲ್, ಆಟೋ ಮತ್ತು ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

ವಾಟೆಕಾಡು ಗ್ರಾಮದ ನಿವಾಸಿ ಮುಜೀಬ್ ರೆಹಮಾನ್ (28), ಕೆ.ಎಂ.ಅಮೀರ್ (29) ಮತ್ತು ಬಲಮುರಿ ನಿವಾಸಿ ಎಸ್.ಎ.ಇರ್ಫಾನ್ (29) ಬಂಧಿತ ಆರೋಪಿಗಳು.

ಈ ಮೂವರು ಕಾವೇರಿ ನದಿ ಸೇತುವೆ ಬಳಿಯ ಹೊಳೆಮುಡಿ ಮೈದಾನದಲ್ಲಿ ಗಾಂಜಾ ಮಾರಾಟ ಮಾಡುವಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ಬಂಧಿತರಿಂದ 1 ಲಕ್ಷದ 33 ಸಾವಿರ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## ಪೊಲೀಸರಿಂದ ಅಕ್ರಮ ಮರಳು ವಶ



ಮಡಿಕೇರಿ, ಜ.4– ನಾಪೋಕ್ಲು ಪೊಲೀಸ್ ಠಾಣೆ ವ್ಯಾಪ್ತಿಯ ಬಲಮುರಿಯ ಕಾವೇರಿ ನದಿಯಲ್ಲಿ ಅಕ್ರಮವಾಗಿ ನಡೆಸುತ್ತಿದ್ದ ಮರಳು ಹಾಗೂ ಮರಳುಗಾರಿಕೆಗೆ ಬಳಸಿದ್ದ 2 ತೆಪ್ಪಗಳನ್ನು ಪೊಲೀಸರು ಬುಧವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ಕಾವೇರಿ ನದಿಗೆ ಅಕ್ರಮವಾಗಿ ಮರಳು ತೆಗೆಯಲು ಹೋಗುತ್ತಿದ್ದ ಕಚ್ಚಾ ರಸ್ತೆಯಲ್ಲಿ ಜೆಸಿಬಿ ಮೂಲಕ ಗುಂಡಿ ತೋಡಿ, ಅಕ್ರಮ ಮರಳುಗಾರಿಕೆಗೆ ತಡೆಯೊಡ್ಡಿದ್ದಾರೆ. ಬಲಮುರಿಯಿಂದ 3 ಕಿ.ಮೀ. ದೂರದ ಕಾಫಿ ತೋಟಕ್ಕೆ ಹಾದು ಹೋಗುವ ಕಚ್ಚಾ ರಸ್ತೆಯ ಮೂಲಕ ರಾತ್ರಿ ವೇಳೆ ಅಕ್ರಮ ಮರಳುಗಾರಿಕೆ ನಡೆಯುತ್ತಿತ್ತು.

ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## ಜಿಲ್ಲೆಯಲ್ಲಿ ಕೋರ್ಬಿವ್ಯಾಕ್ಸ್ ಲಸಿಕೆ ಲಭ್ಯ



ಮಡಿಕೇರಿ, ಜ.4– ಮಡಿಕೇರಿಯ ಜಿಲ್ಲಾಸ್ಪತ್ರೆಯಲ್ಲಿ ಕೋರ್ಬಿವ್ಯಾಕ್ಸ್ ಲಸಿಕೆಯ 100 ಡೋಸ್, ಸೋಮವಾರಪೇಟೆ ಹಾಗೂ ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ 60 ಡೋಸ್ ಲಭ್ಯವಿದ್ದು, ಸಾರ್ವಜನಿಕರು ಲಸಿಕೆಯನ್ನು ಉಚಿತವಾಗಿ ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಕೋವಿಡ್ ಲಸಿಕೆಯನ್ನು ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಆದರೆ, ಇತ್ತೀಚೆಗೆ ಕೆಲ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಗೆ 220 ಡೋಸ್ ಕೋರ್ಬಿವ್ಯಾಕ್ಸ್ ಲಸಿಕೆ ಸರಬರಾಜಾಗಿದೆ.

60 ವರ್ಷ ಮೇಲ್ಪಟ್ಟವರು, ಕಡಿಮೆ ರೋಗ ನಿರೋಧಕ ಶಕ್ತಿ ಉಳ್ಳವರು, ಆರೋಗ್ಯ ಕಾರ್ಯಕರ್ತೆಯರು, ಮುಂಚೂಣಿ ಕಾರ್ಯಕರ್ತೆಯರು ಮುನ್ನೆಚ್ಚರಿಕೆಯಾಗಿ ಲಸಿಕೆಯನ್ನು ಪಡೆಯಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶತಾಯುಷಿ ಅಜ್ಜಿನಿಕಂಡ ಕೆ.ಪೂವಮ್ಮ ನಿಧನ



ವಿರಾಜಪೇಟೆ, ಜ.4– ತಾಲೂಕಿನ ಮಾಲ್ದಾರೆ ಗ್ರಾಮದ ದಿವಂಗತ ಕುಟ್ಟಪ್ಪ ಅವರ ಪತ್ನಿ, ಶತಾಯುಷಿ ಅಜ್ಜಿನಿಕಂಡ ಕೆ.ಪೂವಮ್ಮ (103) ಅವರು ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಮಲ್ದಾರೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ತಿತಿಮತಿ ಸರ್ಕಾರಿ ಶಾಲೆಗೆ ಬ್ಯಾಂಡ್‌ಸೆಟ್ ಕೊಡುಗೆ



ಪೊನ್ನಂಪೇಟೆ, ಜ.4–ತಿತಿಮತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪ್ಯಾಕ್ಸ್)ದ ವತಿಯಿಂದ ಇಲ್ಲಿನ ಸರ್ಕಾರಿ ಪ್ರೌಢಶಾಲೆಗೆ ಬ್ಯಾಂಡ್‌ಸೆಟ್ ಕೊಡುಗೆಯಾಗಿ ನೀಡಲಾಯಿತು.

ಪ್ಯಾಕ್ಸ್ ಅಧ್ಯಕ್ಷ ಚೆಪ್ಪುಡೀರ ಎಂ.ರಾಮಕೃಷ್ಣ ಬ್ಯಾಂಡ್‌ಸೆಟ್ ಅನ್ನು ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಮಂಗಳಾ ಅವರಿಗೆ ಹಸ್ತಾಂತರಿಸಿದರು. ಫ್ಯಾಕ್ಸ್ ಉಪಾಧ್ಯಕ್ಷ ಪಾಲೆಂಗಡ ಜೆ.ನಂಜಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ಎಸ್. ಸುಬ್ರಮಣಿ, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಚಾರ್ಲ್ಸ್, ದೈಹಿಕ ಶಿಕ್ಷಣ ಶಿಕ್ಷಕ ಸಿ.ಎಂ.ರಾಘವೇಂದ್ರ, ಶಿಕ್ಷಕ ಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು.

# ಕರಸೇವಕನ ಬಿಡುಗಡೆಗೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ಜ.4– ಕರಸೇವಕ ಶ್ರೀಕಾಂತ ಪೂಜಾರಿಯನ್ನು ಬಂಧಿಸಿರುವ ಕ್ರಮ ಖಂಡಿಸಿ ಹಾಗೂ ಅವರನ್ನು ಶೀಘ್ರ ಬಿಡುಗಡೆ ಮಾಡುವಂತೆ ಆಗ್ರಹಿಸಿ ನಗರದಲ್ಲಿ ಗುರುವಾರ ಜಿಲ್ಲಾ ಬಿಜೆಪಿ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಎದುರಿನ ಉದ್ಯಾನವನ ಬಳಿ ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

1992ರಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಕರ ಸೇವಕ ಶ್ರೀಕಾಂತ ಪೂಜಾರಿ ಅವರನ್ನು ಹುಬ್ಬಳ್ಳಿಯಲ್ಲಿ ಬಂಧಿಸಿರುವುದು ಖಂಡನೀಯ. ಅಲ್ಲದೇ ಹಿಂದೂಗಳ ಮೇಲೆ ವಿನಾಕಾರಣ ಪ್ರಕರಣ ದಾಖಲಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾಜದಲ್ಲಿ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದಲೂ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದೆ. ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ಸೇಡಿನ ಕ್ರಮ ಜರುಗಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕೂಡಲೇ ಕರ ಸೇವಕ ಶ್ರೀಕಾಂತ ಪೂಜಾರಿ ಅವರನ್ನು ಬಿಡುಗಡೆಗೊಳಿಸಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ರಾಜೇಂದ್ರ, ಮಾಜಿ ಶಾಸಕರಾದ ಎಸ್. ಬಾಲರಾಜು, ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಮುಖಂಡರಾದ ಅಯ್ಯನಪುರದ ಶಿವಕುಮಾರ್, ಡಾ.ಎ.ಆರ್.ಬಾಬು, ಪಿ.ವೃಷಬೇಂದ್ರಪ್ಪ, ರಾಜು, ಮೋಹನ್, ಪ್ರಣಮ್, ನೂರೊಂದು ಶೆಟ್ಟಿ, ಬಸವಣ್ಣ ಮಂಜುನಾಥ್, ನಟರಾಜು, ಕುಮಾರ್, ಶಿವಣ್ಣ ಮಹೇಶ್ ಪಟೇಲ್, ಜಯಸುಂದರ್, ಶಿವು, ಸರಸ್ವತಿ, ದಾಕ್ಷಾಯಿಣಿ ಶಾಂತಮೂರ್ತಿ ಸೇರಿದಂತೆ ಇನ್ನಿತರರಿದ್ದರು.

## ಜಿಲ್ಲಾಧಿಕಾರಿ ಶಿಲ್ಪಾನಾಗ್ ನೇತೃತ್ವದಲ್ಲಿ ಪೂರ್ವಭಾವಿ ಸಭೆ

# ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆಗೆ ತೀರ್ಮಾನ



ಚಾಮರಾಜನಗರ, ಜ.4– ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಡಳಿತ ಹಾಗೂ ಎಲ್ಲಾ ಸಂಘ ಸಂಸ್ಥೆಗಳು, ಸಾರ್ವಜನಿಕರ ಸಹಕಾರದೊಂದಿಗೆ ಜ.26ರಂದು ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಯಿತು.

ಸಭೆ ಆರಂಭದಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು ಎಲ್ಲಾ ಗ್ರಾಪಂಗಳು, ಕೇಂದ್ರ ಸರ್ಕಾರಿ ಕಚೇರಿಗಳು, ಬ್ಯಾಂಕುಗಳು, ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಗಣರಾಜ್ಯೋತ್ಸವ ಆಚರಿಸಬೇಕು. ಅಲ್ಲದೇ ಶಿಸ್ತುಬದ್ಧವಾಗಿ ಆಯೋಜಿಸಬೇಕು. ಯಾವುದೇ ನಿರ್ಲಕ್ಷ್ಯ ವಹಿಸಬಾರದು. ಅಧಿಕಾರಿಗಳು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದರು.

ಗಣರಾಜ್ಯೋತ್ಸವ ದಿನದಂದು ಖಾಸಗಿ ಉದ್ಯಮ ಸಂಸ್ಥೆ ಕೈಗಾರಿಕಾ ಘಟಕಗಳಿಗೆ ರಜೆ ಘೋಷಿಸಲು ಕಾರ್ಮಿಕ ಇಲಾಖೆಗೆ ಸೂಚಿಸಬೇಕು. ಮಹಿಳಾ ಸಂಘಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಾಗಬೇಕು. ಸರ್ಕಾರಿ ಶಾಲಾ ಕಾಲೇಜುಗಳಿಗೆ ಕಾರ್ಯಕ್ರಮ ಪ್ರಸ್ತುತ ಪಡಿಸಲು ಹೆಚ್ಚಿನ ಅವಕಾಶ ಕಲ್ಪಿಸಬೇಕು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಬೇಕು. ಶಿಷ್ಟಾಚಾರ ಅನುಸಾರ ಕಾರ್ಯಕ್ರಮ ಆಯೋಜಿಸಲು ಸುತ್ತೋಲೆ ಹೊರಡಿಸುವುದು ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಮುಖಂಡರು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಗಣರಾಜ್ಯೋತ್ಸವವನ್ನು ಅತ್ಯಂತ ಶ್ರದ್ಧೆ ಹಾಗೂ ಪೂರ್ವ ಸಿದ್ಧತೆಗಳೊಂದಿಗೆ ಏರ್ಪಡಿಸಲು ಸೂಚಿಸಲಾಗುವುದು. ಯಾವುದೇ ಲೋಪಕ್ಕೆ ಅವಕಾಶವಾಗದಂತೆ ಶಿಷ್ಟಾಚಾರ ಪಾಲಿಸಲು ನಿರ್ದೇಶನ ನೀಡಲಾಗುವುದು. ಎಲ್ಲಾ ಗ್ರಾಪಂಗಳು, ಬ್ಯಾಂಕುಗಳು, ಶಿಕ್ಷಣ ಸಂಸ್ಥೆಗಳು, ಇತರೆ ಕಚೇರಿಗಳಲ್ಲಿ ಗಣರಾಜ್ಯೋತ್ಸವ ಆಚರಿಸಲು ಸೂಚಿಸಿ ವರದಿ ಪಡೆಯಲಾಗುವುದು ಎಂದರು.

ಗಣರಾಜ್ಯೋತ್ಸವದ ಜಿಲ್ಲಾ ಮಟ್ಟದ ಕಾರ್ಯಕ್ರಮ ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗುತ್ತದೆ. ಸರ್ಕಾರಿ ಶಾಲಾ ಕಾಲೇಜು ಮಕ್ಕಳು ವೈವಿಧ್ಯಮಯ ಕಾರ್ಯಕ್ರಮ ನೀಡಲು ಅನುವು ಮಾಡಿಕೊಡಲಾಗುವುದು. ಜಿಲ್ಲೆಯಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸ ಲಾಗುವುದು. ಕಟ್ಟುನಿಟ್ಟಾಗಿ ಅಧಿಕಾರಿ, ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ದೇಶನ ನೀಡಲಾಗುತ್ತದೆ. ಮಹಿಳಾ ಸಂಘಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗುವುದು ಎಂದರು.

ಅಚ್ಚುಕಟ್ಟಾಗಿ ಗಣರಾಜ್ಯೋತ್ಸವ ಆಚರಣೆಗೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುತ್ತದೆ. ಸರ್ವರ ಸಹಕಾರದಿಂದ ಯಶಸ್ವಿಯಾಗಿ ಗಣರಾಜ್ಯೋತ್ಸವ ಏರ್ಪಡಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಸಂಘಟನೆಗಳ ಮುಖಂಡರಾದ ಚಾ.ರಂ.ಶ್ರೀನಿವಾಸಗೌಡ, ಸಿ.ಎಂ.ಕೃಷ್ಣಮೂರ್ತಿ, ಸುರೇಶ್ ನಾಯಕ, ಕೆ.ಎಂ. ನಾಗರಾಜು, ಸಿ.ಎಂ.ನರಸಿಂಹಮೂರ್ತಿ, ನಿಜಧ್ವನಿ ಗೋವಿಂದರಾಜು, ಗು. ಪುರುಷೋತ್ತಮ್, ಚಾ.ಗು.ನಾಗರಾಜು, ಶಿವಣ್ಣ, ಎಲ್.ಸುರೇಶ್, ಕಂದಳ್ಳಿ ನಾರಾಯಣ, ಮಹೇಶ್‌ಗೌಡ, ಶಿವಣ್ಣ (ಮಾಸ್ಟರ್), ಕದಂಬ ಅಂಬರೀಶ್, ಇನ್ನಿತರ ಮುಖಂಡರು ಸಭೆಯಲ್ಲಿದ್ದರು.

## ಭಾಷಣ ಸ್ಪರ್ಧೆ: ನೋಂದಣಿಗೆ ಆಹ್ವಾನ

ಚಾಮರಾಜನಗರ, ಜ.4– ನೆಹರು ಯುವ ಕೇಂದ್ರ 161ನೇ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ರಾಷ್ಟ್ರೀಯ ಯುವ ಸಪ್ತಾಹದ ಪ್ರಯುಕ್ತ ಯುವಜನರಿಗೆ ಭಾಷಣ ಸ್ಪರ್ಧೆ ಏರ್ಪಡಿಸಿದೆ.

ಭಾಷಣದ ವಿಷಯವು ಮೈ ಭಾರತ್ ವಿಕ್ಷಿತ್ ಭಾರತ್@2047 ಎಂಬುದಾಗಿದೆ. ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸ್ಪರ್ಧೆ ಇದ್ದು, 7 ನಿಮಿಷಗಳ (ಗರಿಷ್ಠ) ಕಾಲಾವಕಾಶ ಇರಲಿದೆ. ಸ್ಪರ್ಧಿಗಳು 15 ರಿಂದ 29 ವರ್ಷದೊಳಗಿದ್ದು, ಜಿಲ್ಲೆಯವರಾಗಿರಬೇಕು.

ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಆಯ್ಕೆಯಾದವರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹರಾಗಲಿದ್ದಾರೆ. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 1 ಲಕ್ಷ, ದ್ವಿತೀಯ ಬಹುಮಾನ 50 ಸಾವಿರ, ತೃತೀಯ ಬಹುಮಾನವಾಗಿ ಇಬ್ಬರಿಗೆ 25 ಸಾವಿರ ರೂ. ನೀಡಲಾಗುವುದು.

ಆಸಕ್ತರು ನಗರದ ಜಿಲ್ಲಾಡಳಿತ ಭವನದಲ್ಲಿರುವ ನೆಹರು ಯುವ ಕೇಂದ್ರದಲ್ಲಿ ಜ.8ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ ಮೊ: 9380523132, ದೂ: 08226–222120 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರಸಭೆ ಎದುರು ಪ್ರತಿಭಟನೆ



ಚಾಮರಾಜನಗರ, ಜ.4– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗುರುವಾರ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ನೇತೃತ್ವದಲ್ಲಿ ನಗರಸಭೆಯ ಕಸ ವಿಲೇವಾರಿ ವಾಹನ ಚಾಲಕರು, ಲೋಡರ್ಸ್‌ಗಳು, ಕ್ಲೀನರ್‌ಗಳು ಪ್ರತಿಭಟನೆ ನಡೆಸಿದರು.

ನಗರಸಭೆ ಎದುರು ಸಮಾವೇಶಗೊಂಡ ಪೌರಕಾರ್ಮಿಕರು ಪ್ರತಿಭಟನೆ ನಡೆಸಿ ತಮ್ಮ ಹಕ್ಕೊತ್ತಾಯ ಈಡೇರಿಸುವಂತೆ ಘೋಷಣೆ ಕೂಗಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಇಲ್ಲಿನ ನಗರಸಭೆಯಲ್ಲಿ ಕಳೆದ 2 ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಕಸ ವಿಲೇವಾರಿ ವಾಹನದ ಚಾಲಕರು, ಲೋಡರ್ಸ್‌ಗಳು, ಕ್ಲೀನರ್‌ಗಳು ಸೇವೆ ಸಲ್ಲಿಸುತ್ತಿದ್ದು, ನಮಗೆ ತಿಂಗಳಿಗೆ ಸರಿಯಾಗಿ ವೇತನ ನೀಡುತ್ತಿಲ್ಲ ಎಂದು ದೂರಿದರು.

ನಗರಸಭೆಯಿಂದ ನೀಡುವ ವೇತನ ಅವಲಂಬಿಸಿ ಜೀವನ ನಡೆಸುತ್ತಿರುವ ಪೌರ ಕಾರ್ಮಿಕರಿಗೆ ಕಳೆದ ನಾಲ್ಕು ತಿಂಗಳಿಂದ ವೇತನ ನೀಡಿಲ್ಲ. ಇದರಿಂದ ಜೀವನ ನಡೆಸಲು ತೊಂದರೆಯುಂಟಾಗಿದೆ. ಹೀಗಾಗಿ ಕೂಡಲೇ ನಮ್ಮ ಬಾಕಿ ವೇತನವನ್ನು ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

ಮುಂದಿನ ದಿನಗಳಲ್ಲಿ ಪೌರಕಾರ್ಮಿಕರಿಗೆ ತಿಂಗಳ 1ರಿಂದ 5ನೇ ತಾರೀಖಿನೊಳಗೆ ವೇತನ ನೀಡಬೇಕು. ಜೊತೆಗೆ ಇಎಸ್‌ಐ, ಪಿಎಫ್ ಸೌಲಭ್ಯ ಕಲ್ಪಿಸಬೇಕು. ನಗರಸಭೆ ವ್ಯಾಪ್ತಿ ಕೆಲಸ ಮಾಡುವ ಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಮಾಡಬೇಕು. ಅಲ್ಲದೇ ಗುರುತಿನ ಚೀಟಿ ನೀಡಬೇಕು. ಕಾರ್ಮಿಕರಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕುಮಾರ್, ಅಜಿತ್, ಸುಜಿತ್, ಪೃಥ್ವಿಕ್, ಪ್ರಭು, ಕಾರ್ತಿಕ, ರಾಜೇಂದ್ರ ಸೇರಿದಂತೆ ಇತರರಿದ್ದರು.

## ಡಾ.ಶ್ರೀನಿವಾಸ್‌ಗೆ ಪಿಹೆಚ್.ಡಿ




ಕೊಳ್ಳೇಗಾಲ, ಜ.4– ಮಂಡ್ಯದ ಪಿಇಎಸ್ ಕಾಲೇಜಿನ ಪ್ರಾಂಶುಪಾಲ ಕೆ.ಎಂ.ಮಹದೇವನ್ ಅವರ ಮಾರ್ಗದರ್ಶನದಲ್ಲಿ ಪಟ್ಟಣದ ನಿವಾಸಿ, ಮೈಸೂರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಸಹ ಪ್ರಾಧ್ಯಾಪಕರು ಆದ ಡಾ.ಪಿ.ಶ್ರೀನಿವಾಸ್ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಸ್ಟಡೀಸ್ ಆನ್ ಸಿಮ್ಯೂಲೇಷನ್ ಆಫ್ ಫಿಜಿಕಲ್ ಪ್ಯಾರಾಮೀಟರ್ಸ್ ಆಫ್ ಸಮ್ ಲಿಕ್ವಿಡ್ ಕ್ರಿಸ್ಟಲೈನ್ ಕಾಂಪೋಂಡ್ಸ್ ಎಂಬ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ.ಶ್ರೀನಿವಾಸ್ ಅವರು 2020ರಲ್ಲಿ ಮಂಡಿಸಿದ ಮಹಾ ಪ್ರಬಂಧಕ್ಕೆ ಈಗಾಗಲೇ ಪಿಹೆಚ್‌ಡಿ ದೊರೆತಿದ್ದು, 2023ರ ಡಿ.30ರಲ್ಲಿಯೂ ಸಹ ಅವರ ಪ್ರಬಂಧವನ್ನು ಪಿಹೆಚ್.ಡಿ ಪದವಿಗೆ ಮೈಸೂರು ವಿವಿ ಅಂಗೀಕರಿಸಿದೆ.

ಈ ಹಿನ್ನೆಲೆಯಲ್ಲಿ 2ನೇ ಬಾರಿ ಪಿಹೆಚ್‌ಡಿ ಪದವಿ ಪಡೆದಂತಾಗಿದೆ.

# ಕಾಂಗ್ರೆಸ್‌ನಲ್ಲಿ ಸೇವೆಗೆ ತಕ್ಕ ಪ್ರತಿಫಲ: ಪುಟ್ಟರಂಗಶೆಟ್ಟಿ

## ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ನೂತನ ಕ್ಯಾಲೆಂಡರ್ ಬಿಡುಗಡೆ



ಚಾಮರಾಜನಗರ, ಜ.4– ಕಾಂಗ್ರೆಸ್‌ನಲ್ಲಿ ಸೇವೆಗೆ ತಕ್ಕ ಪ್ರತಿಫಲ ಸಿಗುತ್ತದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ 2024ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟವು ಉತ್ತಮ ಕೆಲಸ ಮಾಡುತ್ತಿದ್ದು, ಪಕ್ಷ ನೀಡುವ ಕೆಲಸಗಳನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬರುತ್ತಿದೆ. ಪಕ್ಷ ಕೊಟ್ಟ ಎಲ್ಲಾ ಕೆಲಸವನ್ನು ಮಾಡಬೇಕು ಎಬ ಭಾವನೆ ಬಂದಾಗ ಮಾತ್ರ ಇದೆಲ್ಲ ಸಾಧ್ಯ ಎಂದರು.

ಕಾಂಗ್ರೆಸ್‌ನಲ್ಲಿ ಸೇವೆ ಮಾಡುವವರನ್ನು ಪಕ್ಷ ಗುರುತಿಸಿ ಜವಾಬ್ದಾರಿಗಳನ್ನು ನೀಡುತ್ತದೆ. ಜಿಲ್ಲೆಯಲ್ಲಿ ಪಕ್ಷವನ್ನು ಮತ್ತಷ್ಟು ಸಂಘಟನೆ ಮಾಡಲು ಶ್ರಮಿಸಬೇಕು. ಚುನಾವಣೆಯಲ್ಲಿ ನನ್ನ ಗೆಲುವಿಗೆ ನೀವೆಲ್ಲರೂ ಶ್ರಮಿಸಿದ್ದೀರಿ. ಅದನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್‌ನ ಮಹಮದ್ ಅಸ್ಗರ್, ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾಧ್ಯಕ್ಷ ಮೋಹನ್ ನಗು, ರಾಜ್ಯ ಕಾರ್ಯದರ್ಶಿ ಸ್ವಾಮಿ, ಪ್ರಚಾರ ಸಮಿತಿ ಅಧ್ಯಕ್ಷ ಅಕ್ಷಯ್ ಕುಮಾರ್, ತಾಲೂಕು ಅಧ್ಯಕ್ಷ ಮುತ್ತುರಾಜ್, ಸಾಮಾಜಿಕ ಜಾಲತಾಣ ಜಿಲ್ಲಾಧ್ಯಕ್ಷ ಸೈಯದ್ ಮುಸಾಯಿಬ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನವೀನ್, ಶಶಾಂಕ್, ಉಪಾಧ್ಯಕ್ಷ ಸ್ವಾಮಿ ಬಾಲರಾಜ್, ಮುಖಂಡರಾದ ನಾಗಯ್ಯ, ಕೆ.ನಾಗರಾಜು ಇತರರಿದ್ದರು.

**ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆಯಿಂದ ಗುರುವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಲಿ ಡ್ರಮ್ ಇಟ್ಟು ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ, ಚಾ.ವೆಂ.ರಾಜ್‌ಗೋಪಾಲ್, ಮಹೇಶ್‌ಗೌಡ, ಚಾ.ಹ.ರಾಮು, ಸಿದ್ದಶೆಟ್ಟಿ, ಚಾ.ರಾ.ಕುಮಾರ್ ಇತರರಿದ್ದರು.**



ಒಂದನೇ ಪುಟದಿಂದ

## 30 ಕೋಟಿ ವೆಚ್ಚದಲ್ಲಿ ನವೀಕರಣ

ಹಾಗೂ ಮೈಸೂರು ವಿಶ್ವ ವಿದ್ಯಾನಿಲಯದ ನಡುವೆ ಇಂದು ಒಪ್ಪಂದ ಏರ್ಪಟ್ಟಿದೆ.

ರಾಜರ ಕಾಲದ ಪಾರಂಪರಿಕ ಶೈಲಿಗೆ ಯಾವುದೇ ರೀತಿಯಲ್ಲೂ ಧಕ್ಕೆ ಆಗದಂತೆ ಜಯಲಕ್ಷ್ಮಿ ವಿಲಾಸ್ ಮ್ಯಾನ್ಷನ್ ಅನ್ನು ನವೀಕರಿಸಲು ಫೌಂಡೇಷನ್ 30 ಕೋಟಿ ರೂಪಾಯಿ ನೀಡಿದೆ. ಯುಕೆ ಮೂಲದ ಡೆಕ್ಕನ್ ಹೆರಿಟೇಜ್ ಫೌಂಡೇಷನ್ ನವೀಕರಣ ಕಾರ್ಯದ ಜವಾಬ್ದಾರಿ ಹೊತ್ತಿದೆ. ಈ ವೇಳೆ ಮಾತನಾಡಿದ ಹರೀಶ್, ಮೈಸೂರು ನಗರದ ವಾತಾವರಣ ನನಗೆ ಅತ್ಯಂತ ಆಕರ್ಷಣೀಯ. ಅದರಲ್ಲೂ ಮಾನಸ ಗಂಗೋತ್ರಿಯನ್ನು ನೋಡಿ ತುಂಬಾ ಸಂತೋಷಪಟ್ಟೆ, ಇಂತಹ ಪರಿಸರದಲ್ಲಿರುವ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ನಮ್ಮ ಫೌಂಡೇಷನ್ ವತಿಯಿಂದ ನವೀಕರಣ ಮಾಡಲು ತೀರ್ಮಾನ ಮಾಡಿ, ಇಂದು ಒಪ್ಪಂದಕ್ಕೆ ಸಹಿ ಹಾಕಿದ್ದೇನೆ ಎಂದು ತಿಳಿಸಿದರು.

ತರುವಾಯ ಮಾತನಾಡಿದ ಕುಲಪತಿ ಪ್ರೊ.ಲೋಕನಾಥ್, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಪಶ್ಚಿಮ ಭಾಗ ಹಾಗೂ ಕರ್ನಾಟಕದಾದ್ಯಂತ ಸಂಗ್ರಹಿಸಿರುವ 6,500 ಕಲಾಕೃತಿಗಳ ಸಂರಕ್ಷಣಾ ಕಾರ್ಯ ಈಗಾಗಲೇ ಆರಂಭವಾಗಿದೆ. ಇದಕ್ಕೆ ಅಮೇರಿಕಾ ಸರ್ಕಾರದ ಅಂಬಾಸಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಶನ್ 3 ಲಕ್ಷ ಡಾಲರ್ ನೀಡುತ್ತಿದೆ. 2025 ರಲ್ಲಿ ಇದರ ಕಾರ್ಯ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು. ಉಳಿದಂತೆ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನ ಉತ್ತರ, ದಕ್ಷಿಣ ಹಾಗೂ ಪೂರ್ವ ಭಾಗ ಶಿಥಿಲಾವಸ್ಥೆಯಲ್ಲಿತ್ತು. ಕಟ್ಟಡದ ಕೆಲವು ಕಡೆ ಛಾವಣಿ ಕುಸಿದು ಬೀಳುವ ಸ್ಥಿತಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಹರೀಶ್ ಅಂಡ್ ಬೀನಾ ಶಾ ಫೌಂಡೇಷನ್ ವತಿಯಿಂದ ಪಶ್ಚಿಮ ಭಾಗ ಹೊರತುಪಡಿಸಿ ಕಟ್ಟಡದ ಎಲ್ಲಾ ಭಾಗವನ್ನು ನವೀಕರಣ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ನವರು ನವೀಕರಣ ಕಾರ್ಯ ಕೈಗೆತ್ತಿಕೊಳ್ಳಲಿದ್ದಾರೆ. ನವೀಕರಣದ ಒಪ್ಪಂದಕ್ಕೆ ಇಂದು ಸಹಿ ಹಾಕಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಸುಮಾರು 5 ರಿಂದ 7 ವರ್ಷದ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಡೆಕ್ಕನ್ ಹೆರಿಟೇಜ್ ಫೌಂಡೇಷನ್ ಅಧ್ಯಕ್ಷೆ ರಾಯಭಾರಿ ಲತಾ ರೆಡ್ಡಿ, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನಲ್ಲಿರುವ ವಾಸ್ತುಶಿಲ್ಪದ ಪುನರ್ರಚನೆ ಹಾಗೂ ವಸ್ತು ಸಂರಕ್ಷಣೆಯಲ್ಲಿ ಫೌಂಡೇಷನ್ ಉತ್ತಮ ಕಾರ್ಯ ನೆರವೇರಿಸುತ್ತಿದೆ ಎಂದು ಹೇಳಿದರು. ವಿಶ್ವವಿದ್ಯಾನಿಲಯದ ಕುಲಸಚಿವೆ ಶೈಲಜಾ, ಹಣಕಾಸು ಅಧಿಕಾರಿ ರೇಖಾ, ಡೆಕ್ಕನ್ ಹೆರಿಟೇಜ್ ಸಂಸ್ಥಾಪಕರಾದ ಡಾ.ಹೆಲೆನ್ ಫಿಲಾನ್, ಡಾ.ಸ್ಟೆಫಾನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಕಲಾಕೃತಿಗಳ ಸಂರಕ್ಷಣಾ ಕಾರ್ಯ 2025ಕ್ಕೆ ಪೂರ್ಣ

ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನಲ್ಲಿರುವ ಜಾನಪದ ವಸ್ತು ಸಂಗ್ರಹಾಲಯದ ಸಂರಕ್ಷಣಾ ಯೋಜನೆಗೆ ಅಮೇರಿಕಾ ಸರ್ಕಾರದ ಅಂಬಾಸಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಶನ್ 3 ಲಕ್ಷ ಡಾಲರ್ ಅಂದರೆ ಎರಡೂವರೆ ಕೋಟಿ ರೂಪಾಯಿ ನೀಡುತ್ತಿದೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಚೆನ್ನೈನಲ್ಲಿರುವ ಅಮೆರಿಕಾದ ಕಾನ್ಸುಲ್ ಜನರಲ್ ಕ್ರಿಸ್ಟೋಫರ್ ಡಬ್ಲ್ಯೂ ಹಾಡ್ಜಸ್ ಒಪ್ಪಂದಕ್ಕೆ ಸಹಿ ಹಾಕಿದರು.

ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನ ಪಶ್ಚಿಮ ಭಾಗ ನವೀಕರಣ ಮಾಡಲಾಗುತ್ತಿದೆ. ಜೊತೆಗೆ ಕರ್ನಾಟಕದಾದ್ಯಂತ ಸಂಗ್ರಹಿಸಿರುವ ಸುಮಾರು 6,500ಕ್ಕೂ ಹೆಚ್ಚು ಕಲಾಕೃತಿಗಳನ್ನು ಸಂರಕ್ಷಿಸಲಾಗುತ್ತಿದೆ. ಯುಕೆ ಮೂಲದ ಡೆಕ್ಕನ್ ಹೆರಿಟೇಜ್ ಫೌಂಡೇಷನ್ ಇದರ ಜವಾಬ್ದಾರಿ ಹೊತ್ತಿದೆ. ಈ ಸಂದರ್ಭದಲ್ಲಿ ಮಾತನಾಡಿದ ಕ್ರಿಸ್ಟೋಫರ್ ಡಬ್ಲ್ಯೂ ಹಾಡ್ಜಸ್, ಅಮೇರಿಕಾ ಸರ್ಕಾರವು ವಿಶ್ವದಲ್ಲಿ ಒಟ್ಟಾರೆ 30 ಯೋಜನೆಗೆ ಅನುದಾನ ನೀಡಲಿದೆ. ಇದರಲ್ಲಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ನವೀಕರಣ ಹಾಗೂ ಕಲಾಕೃತಿ ಸಂರಕ್ಷಣಾ ಯೋಜನೆ ಆಯ್ಕೆ ಆಗಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು. ಭಾರತದಲ್ಲಿ ಅತೀ ಹೆಚ್ಚು ಅನುದಾನ ನೀಡುತ್ತಿರುವ ಎರಡನೇ ಯೋಜನೆ ಇದಾಗಿದೆ. ಭಾರತದ ಜನರು ಹಾಗೂ ಭಾರತದ ಸಾಂಸ್ಕೃತಿಕ ಪರಂಪರೆ ಕುರಿತಂತೆ ಅಮೇರಿಕಾ ಹೊಂದಿರುವ ಸ್ನೇಹ ಹಾಗೂ ಗೌರವಕ್ಕೆ ಇದು ಪುರಾವೆಯಾಗಿದೆ. ಈ ಯೋಜನೆಯಿಂದ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಹಾಗೂ ಅಲ್ಲಿರುವ ಜಾನಪದ ವಸ್ತು ಸಂಗ್ರಹಾಲಯ ಭವಿಷ್ಯದಲ್ಲಿ ಭಾರತೀಯರು ಮಾತ್ರವಲ್ಲದೆ ಅಂತರರಾಷ್ಟ್ರೀಯ ಪ್ರವಾಸಿಗರನ್ನು ಅತ್ಯಾಕರ್ಷಿಸಲಿದೆ ಎಂದು ಅಭಿಪ್ರಾಯಪಟ್ಟರು.

### ನವೀಕರಣಕ್ಕೆ ಹೆಸರಾಂತ 8 ತಂತ್ರಜ್ಞರ ಸಮಿತಿ

ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ನವೀಕರಣ ಮಾಡಲು ತಾಂತ್ರಿಕ ಪರಿಣತಿ ಹೊಂದಿರುವ 8 ತಜ್ಞರ ಸಮಿತಿ ರಚನೆ ಮಾಡಲಾಗಿದೆ. ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆಯ ನಿವೃತ್ತ ಉಪ ಅಧೀಕ್ಷಕ(ಪ್ರಾಚ್ಯವಸ್ತು ಇಂಜಿನಿಯರ್) ಪ್ರೊ.ಜೆ.ರಂಗನಾಥ್, ಚೆನ್ನೈನಲ್ಲಿರುವ ಮದ್ರಾಸ್ ಐಐಟಿಯ ರಾಷ್ಟ್ರೀಯ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಕೇಂದ್ರದ ಡಾ.ಅರುಣ್ ಮೆನನ್, ಕಲಾ ಸಂರಕ್ಷಣಾ ತಂತ್ರಜ್ಞ ಶ್ರೀಕುಮಾರ್ ಮೆನನ್, ಚೆನ್ನೈನಲ್ಲಿರುವ ಯುಎಸ್ ಕಾನ್ಸುಲೇಟ್ ಜನರಲ್ ಸ್ಕಾಟ್ ಇ.ಹಾರ್ಟ್ಮ್ಯಾನ್, ರತ್ನ ಮುಖರ್ಜಿ, ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಇತಿಹಾಸ ವಿಭಾಗದ ಪ್ರೊ.ನರೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನ ಜಾನಪದ ಸಂಗ್ರಹಾಲಯದ ನಿರ್ದೇಶಕರು ಸಮಿತಿಯಲ್ಲಿರುತ್ತಾರೆ. ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನ ಪಾರಂಪರಿಕ ಶೈಲಿಗೆ ಧಕ್ಕೆ ಆಗದಂತೆ ನವೀಕರಣ ಮಾಡಲು ಎಂಟು ತಂತ್ರಜ್ಞರು ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ಗೆ ಹಾಗಾಗಿ ಮಾರ್ಗದರ್ಶನ ಮಾಡಲಿದ್ದಾರೆ.

### ಹಳ್ಳ ಹಿಡಿದ ಕನ್ನಡ ಶಾಸ್ತ್ರೀಯ ಸ್ಥಾನಮಾನ ಪ್ರಧಾನ ಕಚೇರಿ ಯೋಜನೆ

ಮೈಸೂರಿನ ಮಾನಸ ಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಮಾನ್ಷನ್‌ನಲ್ಲಿ ಕನ್ನಡ ಶಾಸ್ತ್ರೀಯ ಸ್ಥಾನಮಾನದ ಪ್ರಧಾನ ಕಚೇರಿ ತೆರೆದು ನೆಲೆ ನೀಡುವ ಯೋಜನೆ ಕೊನೆಗೂ ಹಳ್ಳ ಹಿಡಿದಿದೆ. ಶಿಥಿಲಾವಸ್ಥೆಯಲ್ಲಿರುವ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ನವೀಕರಣ ಮಾಡಿ ಅಲ್ಲಿ ಕನ್ನಡ ಶಾಸ್ತ್ರೀಯ ಸ್ಥಾನಮಾನದ ಪ್ರಧಾನ ಕಚೇರಿ ತೆರೆಯಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಶ್ವ ವಿದ್ಯಾನಿಲಯದ ಜೊತೆ ಒಪ್ಪಂದ ಮಾಡಿಕೊಂಡಿತ್ತು.

ಆದರೆ ಇದು ಕನ್ನಡ ಸಂಸ್ಕೃತಿ ಇಲಾಖೆ ದಾಖಲಾತಿಯಲ್ಲಿ ಉಳಿಯಿತೇ ಹೊರತು ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳಲಿಲ್ಲ. ಒಪ್ಪಂದಕ್ಕೆ ಸಹಿ ಹಾಕಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಇತ್ತ ತಿರುಗಿ ನೋಡಲಿಲ್ಲ.

ಇದರಿಂದ ಈಗ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಪ್ಪಂದ ರದ್ದು ಮಾಡಿದೆ. ಈಗ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಪಶ್ಚಿಮ ಭಾಗವನ್ನು ಅಮೇರಿಕಾ ಸರ್ಕಾರದ ಅಂಬಾಸಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಶನ್ ನೆರವಿನಿಂದ ಹಾಗೂ ಉಳಿದ ಪೂರ್ಣ ಭಾಗವನ್ನು ಹರೀಶ್ ಅಂಡ್ ಬೀನಾ ಫೌಂಡೇಷನ್ ವತಿಯಿಂದ ನವೀಕರಿಸುತ್ತಿದೆ. ಇದರಿಂದ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನಲ್ಲಿ ಕನ್ನಡ ಶಾಸ್ತ್ರೀಯ ಸ್ಥಾನಮಾನ ಪ್ರಧಾನ ಕಚೇರಿ ತೆರೆಯಬೇಕೆಂಬ ಯೋಜನೆ ಹಾಗೆ ಮರೆಯಾಗಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಲಪತಿ ಪ್ರೊ.ಲೋಕನಾಥ್, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ನವೀಕರಿಸಿ ಕನ್ನಡ ಶಾಸ್ತ್ರೀಯ ಸ್ಥಾನಮಾನ ಪ್ರಧಾನ ಕಚೇರಿಗೆ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜೊತೆ ಮೈಸೂರು ವಿಶ್ವ ವಿದ್ಯಾನಿಲಯ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದ ಒಂದು ವರ್ಷದ ಅವಧಿಗೆ ಇತ್ತು. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕೋಟ್ಯಾಂತರ ರೂಪಾಯಿ ನೀಡಿ ನವೀಕರಿಸಲು ಆರ್ಥಿಕ ಸಂಪನ್ಮೂಲದ ಕೊರತೆಯ ತಗಾದೆ ತೆಗೆದರು ಎಂದು ಹೇಳಿದರು. ಇದರಿಂದ ಪ್ರಾಯಶಃ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಕನ್ನಡ ಶಾಸ್ತ್ರೀಯ ಸ್ಥಾನಮಾನದ ಪ್ರಧಾನ ಕಚೇರಿಗೆ ಸಿಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

### ಇದು ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಇತಿಹಾಸ

ಶತಮಾನೋತ್ಸವ ಪೂರೈಸಿರುವ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ಗೆ ಈಗ ರಾಜರ ಕಾಲದ ಗತವೈಭವದ ಮೆರಗು ನೀಡಲಾಗುತ್ತಿದೆ. ಈ ಸಂದರ್ಭದಲ್ಲಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಯುವುದು ಪ್ರಸ್ತುತ.

ಕೃಷ್ಣರಾಜ ಒಡೆಯರ್ ಅವರು 1905ರಲ್ಲಿ 10ನೇ ಚಾಮ ರಾಜ ಒಡೆಯರ್ ಹಿರಿಯ ಪುತ್ರಿ ಮಹಾರಾಣಿ ಜಯಲಕ್ಷ್ಮಿ ಅವರಿಗಾಗಿ ಈ ಮಹಲ್ ನಿರ್ಮಾಣ ಮಾಡಿದರು. ಪಾರಂಪರಿಕ ಶೈಲಿಯಲ್ಲಿರುವ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನಲ್ಲಿರುವ ಸಭಾಂಗಣ, ಕೋಣೆಗಳು ವಿಶಾಲವಾಗಿವೆ. ನೂರಾರು ಬಾಗಿಲು ಹಾಗೂ ಕಿಟಕಿಗಳಿವೆ. ಕರ್ನಾಟಕದ ವಿವಿಧೆಡೆ ಪತ್ತೆಯಾಗಿರುವ ನೂರಾರು ವರ್ಷಗಳ ಹಿಂದಿನ ಪುರಾತತ್ವ ಸ್ಮಾರಕಗಳನ್ನು ಇಲ್ಲಿಡಲಾಗಿದೆ. ಜಾನಪದ, ಸಾಹಿತ್ಯ, ಬುಡಕಟ್ಟಿಗೆ ಸಂಬಂಧಿಸಿದ ಮರದ ಬುಟ್ಟಿ, ಮಣ್ಣಿನ ಮಡಿಕೆಗಳು ಸೇರಿದಂತೆ ಹಲವು ವಿಶಿಷ್ಟ ರೀತಿಯ ಅತ್ಯಾಕರ್ಷಕ ಕಲಾಕೃತಿಗಳು ಇಲ್ಲಿವೆ. ಶಿಥಿಲಾವಸ್ಥೆಯಲ್ಲಿದ್ದ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ಇನ್ಫೋಸಿಸ್ ಫೌಂಡೇಷನ್‌ನವರು 1.17 ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಣ ಮಾಡಿದ್ದರು. ತರುವಾಯ ಸೂಕ್ತ ನಿರ್ವಹಣೆ ಮಾಡದ ಕಾರಣ ಮತ್ತೆ ಶಿಥಿಲಾವಸ್ಥೆ ಸ್ಥಿತಿಗೆ ತಲುಪಿದ್ದು, ಈಗ ಮತ್ತೊಮ್ಮೆ ನವೀಕರಣ ಮಾಡಲಾಗುತ್ತಿದೆ.

### ಇದು ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಇತಿಹಾಸ

ಈ ವೇಳೆ ಮೈಸೂರಿಗರಲ್ಲಿ ಪ್ರಶ್ನೆ ಯೊಂದು ಕಾಡುತ್ತಿದೆ; ದೇವರಾಜ ಮಾರು ಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನವೀಕರಣ ಅಸಾಧ್ಯವೆ? ಪಾರಂಪರಿಕ ಕಟ್ಟಡಗಳ ಬಗ್ಗೆ ತಿಳುವಳಿಕೆ ಇರುವ ತಂತ್ರಜ್ಞರ ಮಾರ್ಗ ದರ್ಶನದಲ್ಲಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಅನ್ನು ನವೀಕರಣ ಮಾಡುವುದಾದರೆ, ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ನವೀಕರಣ ಮಾಡಬಹುದಲ್ಲವೆ?

ಈ ಎರಡು ಕಟ್ಟಡಗಳನ್ನು ನವೀಕರಣ ಮಾಡಲು ಸಾಧ್ಯವಾಗದೇ ಇದ್ದಲ್ಲಿ ನೆಲ ಸಮ ಮಾಡಿ ಹೊಸದಾಗಿ ನಿರ್ಮಾಣ ಮಾಡುವುದಾಗಿ ಹೇಳುವ ಸರ್ಕಾರಕ್ಕೆ ಜಯ ಲಕ್ಷ್ಮಿ ವಿಲಾಸ ಮ್ಯಾನ್ಷನ್ ನವೀಕರಣ ಕಾರ್ಯ ನೆನಪಿಗೆ ಬರುತ್ತಿಲ್ಲವೆ?.

# ಪ್ಲಾಸ್ಟಿಕ್ ನಿಷೇಧಿಸದಿದ್ದರೆ ಭವಿಷ್ಯದಲ್ಲಿ ಭಾರಿ ಗಂಡಾಂತರ

## ಏಕಬಳಕೆ ಪ್ಲಾಸ್ಟಿಕ್ ನಿಷೇಧ, ಬಟ್ಟೆ ಬ್ಯಾಗ್ ಬಳಕೆ ಅಭಿಯಾನಕ್ಕೆ ಚಾಲನೆ



ಮೈಸೂರು, ಜ.4(ಜಿಎ)– ಅಪರಿಮಿತ ಏಕಬಳಕೆಯ ಪ್ಲಾಸ್ಟಿಕ್‌ನಿಂದ ಮನುಷ್ಯನ ಊಹೆಗೂ ನಿಲುಕದಷ್ಟು ಪ್ರಮಾಣದಲ್ಲಿ ಹಾನಿಯಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ ತಿಳಿಸಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಗುರುವಾರ ಕರುನಾಡ ರಕ್ಷಣಾ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಏಕಬಳಕೆ ಪ್ಲಾಸ್ಟಿಕ್ ನಿಷೇಧ ಹಾಗೂ ಬಟ್ಟೆ ಬ್ಯಾಗ್ ಬಳಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸದಿದ್ದರೆ ಭವಿಷ್ಯದಲ್ಲಿ ಭಾರಿ ಗಂಡಾಂತರ ಎದುರಿಸಬೇಕಾಗುತ್ತದೆ. ಏಕಬಳಕೆ ಪ್ಲಾಸ್ಟಿಕ್ ಪ್ರಪಂಚದಲ್ಲಿಯೇ ದೊಡ್ಡ ಪಿಡುಗು. ಇಡೀ ಪ್ರಪಂಚದಲ್ಲಿ 400ಕ್ಕಿಂತ ಹೆಚ್ಚು ಮಿಲಿಯನ್ ಟನ್ ಪ್ಲಾಸ್ಟಿಕ್ ಉತ್ಪಾದನೆ ಮಾಡುತ್ತಿದ್ದೇವೆ. ಭಾರತದಲ್ಲಿ 25–30 ಸಾವಿರ ಟನ್ ಉತ್ಪಾದನೆಯಾಗುತ್ತಿದೆ. ಶೇ. 60ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಹಿಂಪಡೆಯುತ್ತಿದ್ದೇವೆ ಎಂದರು.

ಏಕಬಳಕೆ ಪ್ಲಾಸ್ಟಿಕ್ ಕೆರೆ, ಭೂಮಿ, ಸಮುದ್ರದ ಒಡಲು ಸೇರಿ ಪ್ರಾಣಿ–ಪಕ್ಷಿ, ಜಲಚರಗಳ ಜೀವ ಮತ್ತು ಪ್ರಕೃತಿಗೆ ಹಾನಿಯಾಗುತ್ತಿದೆ. ಏಕಬಳಕೆ ಪ್ಲಾಸ್ಟಿಕ್ ಭೂಮಿಯಲ್ಲಿ ಕರಗಲು 500ರಿಂದ ಸಾವಿರ ವರ್ಷ ಬೇಕಾಗುತ್ತದೆ. ಪ್ಲಾಸ್ಟಿಕ್ ಬಳಕೆ ನಿಷೇಧದಲ್ಲಿ ನಾವೆಲ್ಲರೂ ನಿರ್ಲಕ್ಷ್ಯ ತೋರುತ್ತಿದ್ದೇವೆ. ಭೂಮಿಯ ಒಡಲು ಸೇರುವ ಪ್ಲಾಸ್ಟಿಕ್ ಸೂರ್ಯನ ಕಿರಣಗಳಿಗೆ ಸೋಕಿದಾಗ ಕೆಮಿಕಲ್ ಹೊರಬಂದು ನದಿ, ಭೂಮಿಗೆ, ಸಮುದ್ರಕ್ಕೆ ಸೇರುತ್ತದೆ. ಆ ಮೂಲಕ ಮನುಷ್ಯನ ದೇಹಕ್ಕೂ ಪ್ರವೇಶಿಸುತ್ತದೆ. ಇದರಿಂದ ಕ್ಯಾನ್ಸರ್, ಬಂಜೆತನ ಸಹಿತ ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಎಂದು ಎಚ್ಚರಿಸಿದರು.

ಈ ಪ್ರಮಾಣದಲ್ಲಿಯೇ 25ರಿಂದ 30 ವರ್ಷ ಏಕಬಳಕೆ ಪ್ಲಾಸ್ಟಿಕ್ ಬಳಸಿದರೆ ಸಮುದ್ರದಲ್ಲಿರುವ ಜಲಚರಗಳಿಗಿಂತ ಹೆಚ್ಚಿನ ಪ್ಲಾಸ್ಟಿಕ್ ಇರುತ್ತದೆ. ಅಂದಾಜು ಮಾಡಲಾಗುತ್ತಿದೆ. ಯಾರೂ ಸರಿಪಡಿಸಲಾಗದಷ್ಟು ಭೂಮಿ ಹಾಳಾಗುತ್ತಿದೆ ದಿನನಿತ್ಯದ ಬದುಕಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತಡೆಯದಿದ್ದರೆ ಮುಂದಿನ ಪೀಳಿಗೆಗೆ ಪ್ಲಾಸ್ಟಿಕ್ ಭೂಮಿಯನ್ನು ಕೊಟ್ಟು ಹೋಗಬೇಕಾಗುತ್ತದೆ. ಪ್ಲಾಸ್ಟಿಕ್ ಬಳಕೆ ನಿಷೇಧಿಸಲು ನಾವೆಲ್ಲರೂ ಸಂಕಲ್ಪ ತೊಡಬೇಕು. ಆ ನಿಟ್ಟಿನಲ್ಲಿ ನಾಗರಿಕರಿಗೆ ಬಟ್ಟೆ ಬ್ಯಾಗ್ ವಿತರಣೆ ಒಳ್ಳೆಯ ಕಾರ್ಯಕ್ರಮ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿಯಾನದಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಉಮೇಶ್, ಕರುನಾಡ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷ ಬಸವರಾಜ್, ಗೌರವ ಅಧ್ಯಕ್ಷ ಎಂ. ರಾಮೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಸತೀಶ.ಎಚ್.ಎಂ, ಜಿಲ್ಲಾಧ್ಯಕ್ಷ ಕೆ. ವೇಣುಗೋಪಾಲ್, ಜಿಲ್ಲಾ ಉಪಾಧ್ಯಕ್ಷ ಸಿದ್ದೇಗೌಡ, ನಗರಾಧ್ಯಕ್ಷ ಹರ್ಷಿತ್ ಗೌಡ, ನಗರ ಉಪಾಧ್ಯಕ್ಷ ಎನ್.ಮಹೇಶ್, ರಾಜ್ಯ ಯುವ ಘಟಕದ ಅಧ್ಯಕ್ಷ ಸಂಜಯ್, ರಾಜು, ಆಕಾಶ್, ರವಿಕುಮಾರ್, ಸಂತೋಷ, ಅರುಣ್ ಕುಮಾರ್, ರವಿ ಭಾಗವಹಿಸಿದ್ದರು.

## ಮೈಸೂರು ವಿವಿಯಲ್ಲಿ ಹೆಚ್ಚುವರಿ ಬೋಧಕೇತರ ಸಿಬ್ಬಂದಿ; ಸಮಿತಿ ರಚನೆ

ಮೈಸೂರು, ಜ.4(ಬಿಎಲ್‌ಯು)– ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹೆಚ್ಚುವರಿ ಬೋಧಕೇತರ ಸಿಬ್ಬಂದಿ ಸಂಬಂಧ ಕಾನೂನಾತ್ಮಕವಾಗಿ ವರದಿ ನೀಡುವ ಸಲುವಾಗಿ ಸಮಿತಿ ರಚಿಸಲು ಮೈಸೂರು ವಿವಿಯ ಸಿಂಡಿಕೇಟ್ ಸಭೆ ತೀರ್ಮಾನಿಸಿದೆ.

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2014ರಿಂದ ಅರೆಕಾಲಿಕ ಬೋಧಕೇತರ ಹುದ್ದೆಗಳಿಗೆ ನೇಮಕಾತಿ ಮಾಡಿ ಕೊಳ್ಳಲಾಗಿದೆ. ಇದರಿಂದ ಮೈಸೂರು ವಿವಿಯಲ್ಲಿ ಒಟ್ಟಾರೆ 1198 ಅರೆಕಾಲಿಕ ಸಿಬ್ಬಂದಿಗಳಿದ್ದಾರೆ.

ಅಗತ್ಯಕ್ಕಿಂತ ಹೆಚ್ಚಿನ ಸಿಬ್ಬಂದಿ ನೇಮಕಾತಿ ಆಗಿರುವ ಕಾರಣ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಈ ಕುರಿತಂತೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರದ ಹಣಕಾಸು ಇಲಾಖೆ 2020ರಿಂದ ವಿಶ್ವವಿದ್ಯಾನಿಲಯಕ್ಕೆ ಸರಣಿ ಸುತ್ತೋಲೆಗಳನ್ನು ಕಳುಹಿಸುತ್ತಿದೆ.

ಈ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಚರ್ಚೆ ನಡೆಯಿತು. ಅರೆಕಾಲಿಕ ಸಿಬ್ಬಂದಿ ನೇಮಕಾತಿ ವಿಚಾರ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ವಿಚಾರವಾಗಿರುವ ಕಾರಣ ಕಾನೂನು ತಜ್ಞರು ಹಾಗೂ ಉನ್ನತ ಅಧಿಕಾರಿಗಳಿರುವ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಯಿತು.

ಅರೆಕಾಲಿಕ ಸಿಬ್ಬಂದಿ ಯಾವ ವರ್ಷದಲ್ಲಿ, ಎಷ್ಟು ಸಂಖ್ಯೆಯಲ್ಲಿ ನೇಮಕಾತಿಗೊಂಡಿದ್ದಾರೆ. ಅವರ ವೇತನ ಎಷ್ಟು, ಖಾಲಿ ಇರುವ ಹುದ್ದೆಗಳೆಷ್ಟು, ಹೆಚ್ಚುವರಿ ಹುದ್ದೆಯಿಂದ ವಿಶ್ವವಿದ್ಯಾನಿಲಯಕ್ಕೆ ಆಗುವ ಆರ್ಥಿಕ ಹೊರೆ ಎಷ್ಟು ಎಂಬ ಬಗ್ಗೆ ಸಮಿತಿ ವರದಿ ನೀಡಲಿದೆ.

ಸಮಿತಿ ನೀಡುವ ವರದಿ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಯಿತು. ಈಗಾಗಲೇ ಸಾವಿರಕ್ಕೂ ಹೆಚ್ಚು ಮಂದಿ ಬದುಕು ಕಂಡುಕೊಂಡಿದ್ದು, ಅವರಿಗೂ ತೊಂದರೆಯಾಗದಂತೆ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಗೂ ಧಕ್ಕೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯ ಎಂದು ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್ ಅಭಿಪ್ರಾಯಪಟ್ಟಿದ್ದಾರೆ.

### ಸಿಂಡಿಕೇಟ್‌ಗೆ ಐವರ ನಾಮ ನಿರ್ದೇಶನ

ಮೈಸೂರು,ಜ.4(ಬಿಎಲ್‌ಯು)–ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಐವರನ್ನು ಸರ್ಕಾರ ನಾಮನಿರ್ದೇಶನ ಮಾಡಿದೆ. ಮೈಸೂರಿನ ವಿಜಯನಗರದ ಮಹದೇಶು, ಬನ್ನಿಮಂಟಪದ ಪ್ರೊ.ಶಬ್ಬೀರ್ ಮೊಹಮ್ಮದ್ ಮುಸ್ತಫಾ, ಮಧುವನ ಬಡಾವಣೆಯ ಡಾ.ಜಿ.ಶಿಲ್ಪಾ, ಕ್ಯಾತನಹಳ್ಳಿಯ ಸಿ.ನಾಗರಾಜು, ಇಲವಾಲ ಬಳಿಯ ಜಟ್ಟಿಹುಂಡಿಯ ಡಾ.ಸಿ.ಬಸವರಾಜು, ಹಾರೋಪುರದ ಹೆಚ್.ಎಸ್.ನಟರಾಜು ನಾಮನಿರ್ದೇಶನಗೊಂಡವರು. ಉನ್ನತ ಶಿಕ್ಷಣ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಶೀತಲ್ ಹಿರೇಮಠ ಐವರನ್ನು ನಾಮ ನಿರ್ದೇಶನ ಮಾಡಿ ಆದೇಶಿಸಿದ್ದಾರೆ.

## ನಾಳೆ ಕನ್ನಡ, ಹಿಂದಿ ಚಿತ್ರಗೀತೆಗಳ ಸಂಗೀತ ಸಂಜೆ



ಮೈಸೂರು,ಜ.4(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜ.6ರಂದು ಸಂಜೆ 6ಕ್ಕೆ ಭಾಮೀಸ್ ಪ್ರತಿಷ್ಠಾನದ 'ಹಾಡು ಹಳೆಯದಾದರೇನು ಭಾವ ನವ ನವೀನ' ಕನ್ನಡ ಹಾಗೂ ಹಿಂದಿ ಹಳೆಯ ಚಲನ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ಡಾ.ಎ.ಡಿ. ಶ್ರೀನಿವಾಸನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಹಳೆಯ ಚಲನಚಿತ್ರ ಗೀತೆಗಳನ್ನು ಹಾಡಲಾಗುತ್ತದೆ. ಕನ್ನಡದ 20 ಗೀತೆ ಹಾಗೂ ಹಿಂದಿ ಭಾಷೆಯ 5 ಗೀತೆಗಳನ್ನು ಹಾಡಲಾಗುತ್ತದೆ. ಹವ್ಯಾಸಿ ಗಾಯಕರಾದ ಪ್ರಾಧ್ಯಾಪಕ ಡಾ.ಕೆ.ಎಸ್. ಮಂಜುನಾಥ್, ಡಾ. ರಾಘವೇಂದ್ರ ಪ್ರಸಾದ್, ಪ್ರೊ.ವಿ. ಮಾಧವರಾವ್, ಸಹನಾ ಕಿರಣ್, ಪದ್ಮಜಾ ವೆಂಕಟೇಶ್, ಹಂಸಿನಿ ಹಾಗೂ ಇನ್ನಿತರರು ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಡಾ. ರಾಘವೇಂದ್ರ ಪ್ರಸಾದ್, ಡಾ.ಕೆ.ಎಸ್. ಮಂಜುನಾಥ್ ಹಾಗೂ ಇನ್ನಿತರರು ಇದ್ದರು.

## ನಂ.ಗೂಡು ಧಾರ್ಮಿಕ ಕಾರ್ಯಕ್ರಮದ ವೇಳೆ ಅಪಚಾರ

# ಮೈಸೂರಲ್ಲಿ ಬ್ರಾಹ್ಮಣ ಸಂಘದಿಂದ ಪ್ರತಿಭಟನೆ




ಮೈಸೂರು, ಜ.4(ಜಿಎ)–ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಉತ್ಸವ ಮೂರ್ತಿಯ ಮೇಲೆ ಎಂಜಲು ನೀರು ಎರಚಿದವರನ್ನು ತಕ್ಷಣ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ದುಷ್ಕರ್ಮಿಗಳು ಪೂರ್ವ ನಿಯೋಜಿತವಾಗಿ ಷಡ್ಯಂತ್ರ ಮಾಡುವ ಮೂಲಕ ಉತ್ಸವದಲ್ಲಿ ಗಲಾಟೆ ಮಾಡಿ, ನಂಜುಂಡೇಶ್ವರ ಸ್ವಾಮಿಗೆ ಧಿಕ್ಕಾರ ಕೂಗಿದ್ದಾರೆ. ಈ ಘಟನೆಯನ್ನು ಖಂಡಿಸಿ, ಭಕ್ತರು ಮತ್ತು ಸ್ಥಳೀಯರು ಶಾಂತಿಯುತವಾಗಿ ಪ್ರತಿಭಟಿಸಿದ್ದಾರೆ. ಆದರೆ ಪೊಲೀಸರು ಅಪರಾಧಿಗಳನ್ನು ಬಂಧಿಸುವ ಬದಲು ಪ್ರತಿಭಟಿಸಿದ ಭಕ್ತರ ವಿರುದ್ಧವೇ ದೂರು ದಾಖಲಿಸಿ, ಹಿಂದೂ ವಿರೋಧಿ ಧೋರಣೆ ಅನುಸರಿಸಿದ್ದಾರೆ ಎಂದರು.

ಸಾಮಾಜಿಕ ಜಾಲತಾಣದಲ್ಲಿ ಈಗಾಗಲೇ ಇದರ ಬಗ್ಗೆ ಹರಡುತ್ತಿದ್ದು, ಕೋಟ್ಯಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟಾಗಿ ಸಮಾಜದಲ್ಲಿ ಸಾಮರಸ್ಯ ಕೆಡುವಂತಾಗಿದೆ. ಈ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದ ಕಿಡಿಗೇಡಿಗಳನ್ನು ಬಂಧಿಸಿ ಪಾರದರ್ಶಕತೆ ಕಾಪಾಡುವಲ್ಲಿ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗ್ರಾಮಾಂತರ ಅಧ್ಯಕ್ಷ ಗೋಪಾಲ್ ರಾವ್, ನಗರಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮ್‌ಪ್ರಸಾದ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಎಂ.ಆರ್.ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಮುಳ್ಳೂರು ಸುರೇಶ್, ಕಡಕೊಳ ಜಗದೀಶ್, ಸುಚೇಂದ್ರ, ಲತಾ ಬಾಲಕೃಷ್ಣ , ಜ್ಯೋತಿ, ನಾಗಶ್ರೀ, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಜಯಸಿಂಹ ಶ್ರೀಧರ್, ಚಕ್ರಪಾಣಿ, ರಂಗನಾಥ್, ಮಧುಸೂದನ್, ಮುಳ್ಳೂರು ಸುರೇಶ್, ಶ್ರೀನಿವಾಸ್, ಮಂಜುನಾಥ್, ಸುದರ್ಶನ್, ಪ್ರಶಾಂತ್, ರಾಮು, ಮುರುಗೇಶ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಜ.7ಕ್ಕೆ ಗುರು ಸಂವಾದ, ಮಂತ್ರ ದೀಕ್ಷಾ



ಮೈಸೂರು,ಜ.4(ಎಂಟಿವೈ)– ಮೈಸೂರಿನ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಲೀಲಾ ಎಚ್. ಚನ್ನಯ್ಯ ಕಲ್ಯಾಣ ಮಂಟಪದಲ್ಲಿ ಜ.7ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ಮುದ್ರಾ ಬ್ರಹ್ಮ ಡಾ.ಲಕ್ಷ್ಮೀ ಶ್ರೀನಿವಾಸ ಗುರೂಜಿ ನೇತೃತ್ವದಲ್ಲಿ ಗುರು ಸಂವಾದ, ಅಗ್ನಿಹೋತ್ರ, ಮಂತ್ರ ದೀಕ್ಷಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಎಂ. ಸುಂದರ್‌ರಾಜ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿರಡಿ ಸಾಯಿ ಭಿಕ್ಷಾ ಕೇಂದ್ರದ ವತಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಚ್ಛಿಸುವವರು ಮೊ.ಸಂಖ್ಯೆ 9148336585 ಗೆ ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಕಾರ್ಯದರ್ಶಿ ಸುಬ್ಬಯ್ಯ, ನಂಜುಂಡಸ್ವಾಮಿ, ಶಾರದಮ್ಮ, ಸತೀಶ್, ಮೋಹನ್ ಇದ್ದರು.

## ಜ.7ಕ್ಕೆ ಕೃಷಿ ಸುಗ್ಗಿ ಸಂಭ್ರಮ



ಮೈಸೂರು,ಜ.4(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜ.7ರಂದು ಬೆಳಗ್ಗೆ 10ಕ್ಕೆ ಕೃಷಿ ಸುಗ್ಗಿ ಸಂಭ್ರಮ, ಕೃಷಿಗೆ ಪೂರಕವಾದ ಪುಸ್ತಕಗಳ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ವಿಶ್ವೇಶ್ವರಯ್ಯ ಡೆವಲಪ್ಮೆಂಟ್ ಆರ್ಗನೈಜೇಷನ್ ಸಂಸ್ಥೆ ಕಾರ್ಯದರ್ಶಿ ಕೆ. ಗಣೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವೇಶ್ವರಯ್ಯ ಡೆವಲಪ್ಮೆಂಟ್ ಆರ್ಗನೈಜೇಷನ್ ಸಂಸ್ಥೆ, ಮೈಕ್ರೋಬಿ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಕಾರ್ಯಕ್ರಮವನ್ನು ಶಾಸಕ ಪಿ.ಎಂ. ನರೇಂದ್ರಸ್ವಾಮಿ ಉದ್ಘಾಟಿಸಲಿದ್ದಾರೆ. ಮೈಕ್ರೋಬಿ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಆರ್. ಹುಲ್ಲುನಾಚೇಗೌಡ ಅಧ್ಯಕ್ಷತೆ ವಹಿಸಲಿದ್ದು, ಶಾಸಕರಾದ ಟಿ.ಎಸ್.ಶ್ರೀವತ್ಸ, ದರ್ಶನ್ ಪುಟ್ಟಣ್ಣಯ್ಯ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಇದೇ ವೇಳೆ ಕೃಷಿ ಭೀಷ್ಮಾಚಾರ್ಯ, ಕೃಷಿ ದ್ರೋಣಾಚಾರ್ಯ, ಕೃಷಿ ಏಕಲವ್ಯ ಮತ್ತು ಕೃಷಿ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಶ್ವೇಶ್ವರಯ್ಯ ಡೆವಲಪ್ಮೆಂಟ್ ಆರ್ಗನೈಜೇಷನ್ ಸಂಸ್ಥೆಯ ಕುಮಾರ್, ಮಂಜುನಾಥ ಡಿಂಕ, ಸತ್ಯಶ್ರೀ ಬಿ. ಶ್ಯಾಮ್ ಇದ್ದರು.

## ಬೆಂಗಳೂರಲ್ಲಿ ಕೊಡಗು ಮೂಲದ ಬಿಇ ವಿದ್ಯಾರ್ಥಿ ಆತ್ಮಹತ್ಯೆ

**ಎದೆಗೆ ಗುಂಡು ಹಾರಿಸಿಕೊಂಡ ನಂತರ ತಂದೆಗೆ ಕರೆ ಮಾಡಿದ; 'ಅಪ್ಪಾ ನಾನು ಇನ್ನು ಮುಂದೆ ತಪ್ಪು ಮಾಡಲ್ಲಾ...!'**

ಬೆಂಗಳೂರು, ಜ.4(ಬಿಎಲ್‌ಯು)– ಕೊಡಗು ಮೂಲದ ಬಿಇ ವಿದ್ಯಾರ್ಥಿಯೊಬ್ಬ ಎದೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಘಟನೆ ಬೆಂಗಳೂರಿನ ಭವಾನಿ ನಗರದಲ್ಲಿ ಸಂಭವಿಸಿದೆ. ಕೊಡಗಿನ ತಮ್ಮಯ್ಯ ಅವರ ಪುತ್ರ ವಿಶು ಉತ್ತಪ್ಪ (19) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿಯಾಗಿದ್ದಾನೆ. ಬೆಂಗಳೂರಿನ ಹೆಸರುಘಟ್ಟದ ಆರ್‌ಆರ್ ಕಾಲೇಜಿನಲ್ಲಿ ವಿಶು ಉತ್ತಪ್ಪ 1ನೇ ವರ್ಷದ ಬಿಇಯಲ್ಲಿ ವ್ಯಾಸಂಗ ಮಾಡುತ್ತಿದ್ದ.



ವಿಶು ಉತ್ತಪ್ಪ ತಂದೆ ತಮ್ಮಪ್ಪಯ್ಯ ನೈಸ್ ಸಂಸ್ಥೆಯಲ್ಲಿ ಗನ್‌ಮನ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ತಮ್ಮಪ್ಪಯ್ಯ ಹೊರಗೆ ಹೋಗಿದ್ದ ಸಂದರ್ಭದಲ್ಲಿ ತಂದೆಯ ಗನ್ ತೆಗೆದುಕೊಂಡು ವಿಶು ಉತ್ತಪ್ಪ ಎದೆಗೆ ಗುಂಡು ಹಾರಿಸಿಕೊಂಡಿದ್ದಾನೆ. ಗುಂಡು ಹಾರಿಸಿಕೊಂಡ ನಂತರ ತಂದೆಗೆ ಮೊಬೈಲ್‌ನಿಂದ ಕರೆ ಮಾಡಿದ ವಿಶು ಉತ್ತಪ್ಪ "ನಾನು ಇನ್ನು ಮುಂದೆ ತಪ್ಪು ಮಾಡುವುದಿಲ್ಲ ಅಪ್ಪಾ" ಎಂದು ಅಳುತ್ತಾ ಹೇಳಿದ್ದಾನೆ. ಬಿಕ್ಕಿ ಬಿಕ್ಕಿ ಅಳುತ್ತಾ ಮಗ ಮಾತನಾಡುವುದನ್ನು ಕೇಳಿ ಆಘಾತಗೊಂಡ ತಮ್ಮಪ್ಪಯ್ಯ ಕೂಡಲೇ ಮನೆಗೆ ಬಂದಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗನನ್ನು ತಂದೆ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಆತ ಗುಂಡು ಹಾರಿಸಿಕೊಂಡ ಕೆಲವೇ ಕ್ಷಣದಲ್ಲಿ ಮೃತಪಟ್ಟಿದ್ದನು ಎಂಬುದು ವೈದ್ಯರಿಂದ ತಿಳಿಯಿತು. ಪೀಣ್ಯ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

# ಜ.7ರಂದು ಡಾ.ಇಮ್ಮಡಿ ಶಿವಬಸವ ಸ್ವಾಮೀಜಿಯ 85ನೇ ಸಂಸ್ಮರಣೋತ್ಸವ



ಮೈಸೂರು,ಜ.4(ಎಂಟಿವೈ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕುಂದೂರು ಮಠದ ಗದ್ದಿಗೆ ಆವರಣದಲ್ಲಿ ಜ.7ರಂದು ಬೆಳಗ್ಗೆ 10.30ಕ್ಕೆ ಡಾ. ಇಮ್ಮಡಿ ಶಿವಬಸವ ಸ್ವಾಮೀಜಿಯವರ 85ನೇ ಜಯಂತಿ ಸಂಸ್ಮರಣೋತ್ಸವ ಹಾಗೂ ಡಾ. ಶರತ್‌ಚಂದ್ರ ಸ್ವಾಮೀಜಿಗಳ ಪಟ್ಟಾಧಿಕಾರ ರಜತ ಮಹೋತ್ಸವ ಸೇರಿದಂತೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕುಂದೂರು ಮಠದ ಹಿರಿಯ ವಿದ್ಯಾರ್ಥಿ, ಅಂಕಣಕಾರ ತ್ರಿಪುರಾಂತಕ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಡಾ. ಇಮ್ಮಡಿ ಶಿವಬಸವಸ್ವಾಮೀಜಿ ನಾಡಿನ ಶ್ರೇಷ್ಠ ವಿದ್ವಾಂಸ ಮಠಾಧಿಪತಿಗಳಲ್ಲಿ ಒಬ್ಬರಾಗಿದ್ದರು. ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಅಮೂಲ್ಯ ಸಾಹಿತ್ಯ ಮತ್ತು ಸಂಶೋಧನಾ ಕೃತಿಗಳನ್ನು ಕೊಡುಗೆ ನೀಡಿದ್ದಾರೆ. ಅಲ್ಲದೆ, 1998ರಲ್ಲಿ ಶ್ರೀ ಮಠದ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಡಾ.ಶರತ್‌ಚಂದ್ರಸ್ವಾಮಿ, ಶ್ರೀ ಮಠದ ಜ್ಞಾನ ಪರಂಪರೆಯನ್ನು ಮುಂದುವರೆಸಿದ್ದಾರೆ. ಬಹುಭಾಷಾ ಪರಿಣತರೂ ಆಗಿರುವ ಶರತ್‌ಚಂದ್ರ ಸ್ವಾಮೀಜಿ ಶೈವ, ಬೌದ್ಧ, ಲಿಂಗಾಯತ ದರ್ಶನ, ವೇದಾಂತ ಹಾಗೂ ಹಸ್ತಪ್ರತಿಗಳಲ್ಲಿ ವಿಶೇಷ ಪಾಂಡಿತ್ಯವನ್ನು ಹೊಂದಿದ್ದಾರೆ ಎಂದರು.

ಜ.7ರಂದು ಬೆಳಗ್ಗೆ 10.30ಕ್ಕೆ ಡಾ. ಇಮ್ಮಡಿ ಶಿವಬಸವ ಸ್ವಾಮೀಜಿಯವರ 85ನೇ ಜಯಂತಿ ಸಂಸ್ಮರಣೋತ್ಸವ ಹಾಗೂ ಡಾ. ಶರತ್‌ಚಂದ್ರ ಸ್ವಾಮೀಜಿಗಳ ಪಟ್ಟಾಧಿಕಾರ ರಜತ ಮಹೋತ್ಸವದೊಂದಿಗೆ ವಿದ್ಯಾರ್ಥಿ ನಿಲಯ, ಗ್ರಂಥಾಲಯ ಕಟ್ಟಡ ಭೂಮಿಪೂಜೆ ಹಾಗೂ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 'ಇಮ್ಮಡಿ ದೀಪ್ತಿ' ಚಿತ್ರಸಂಪುಟವನ್ನು ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಲೋಕಾರ್ಪಣೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ತೋಂಟದಾರ್ಯ ಮಠದ ಡಾ. ತೋಂಟದ ಸಿದ್ದರಾಮ ಸ್ವಾಮೀಜಿ 'ದಿ ರಿಯಲ್ ಸ್ಟ್ಯಾಂಡ್' ಕೃತಿ ಬಿಡುಗಡೆ ಮಾಡಲಿದ್ದಾರೆ. ಶ್ರೀಮಠದ ಆ್ಯಪ್ ಅನ್ನು ದೇಗುಲ ಮಠದ ಡಾ. ಮುಮ್ಮಡಿ ನಿರ್ವಾಣ ಸ್ವಾಮೀಜಿ ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮವನ್ನು ನಾಡೋಜ ಗೊ.ರು. ಚನ್ನಬಸಪ್ಪ ಉದ್ಘಾಟಿಸಿ, ನುಡಿ ನಮನ ಸಲ್ಲಿಸಲಿದ್ದಾರೆ. ಇದೇ ವೇಳೆ ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ 'ಮಿಲಿಂದ ಪ್ರಶ್ನೆ' ಕೃತಿ ಹಾಗೂ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ 'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ' ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ಸಮಾರಂಭದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಟಿ.ಎಸ್. ಶ್ರೀವತ್ಸ, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಎಸ್.ಎ. ರಾಮದಾಸ್, ತೋಂಟದಾರ್ಯ ಇನ್ನಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀಮಠದ ಭಕ್ತರಾದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಶ್ರೀಕಂಠ ಸ್ವಾಮೀಜಿ, ಕಾವ್ಯ ಶಿವಮೂರ್ತಿ, ಚೆನ್ನಪ್ಪ ಇದ್ದರು.

ಶುಕ್ರವಾರ 5-1-2024

# ಬೆಳ್ಳಿ ಬೆಳಕು

ಮೈಸೂರು ಮಿತ್ರ

● ಸತ್ಯಮೂರ್ತಿ ತೋಳಹುಣಸೆ

ಸಿನಿಮಾ ಪುರವಣಿ





'ಜಸ್ಟ್‌ಪಾಸ್' ಚಿತ್ರದಲ್ಲಿ ನಾಯಕ ಶ್ರೀ, ನಾಯಕಿ ಪ್ರಣತಿ

## ದಶಕಗಳ ನಂತರ ಮತ್ತೆ 'ಗಂಗೆ ಗೌರಿ'



ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಪೋಷಕ ಪಾತ್ರಗಳಿಂದಲೇ ಗುರುತಿಸಿಕೊಂಡಿರುವ ನಟ ಗಣೇಶ್‌ರಾವ್ ಕೇಸರಕರ್ ಇದೀಗ 'ಗಂಗೆ-ಗೌರಿ' ಚಿತ್ರದ ಮೂಲಕ ನಿರ್ಮಾಪಕನಾಗುತ್ತಿದ್ದಾರೆ. ಜೊತೆಗೆ ಈಶ್ವರನ ಪಾತ್ರದಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ. ಅವರ ಅಭಿನಯದ 333ನೇ ಚಿತ್ರ ಇದಾಗಿದ್ದು, ಇತ್ತೀಚೆಗೆ ಚಿತ್ರದ ಮುಹೂರ್ತ ನಡೆಯಿತು. 'ಗಂಗೆ-ಗೌರಿ' ಅಂದ ಕೂಡಲೇ ನೆನಪಿಗೆ ಬರುವುದು ದಶಕಗಳ ಹಿಂದೆ ಡಾ.ರಾಜಕುಮಾರ್, ಲೀಲಾವತಿ, ಭಾರತಿ ಅಭಿನಯಿಸಿದ್ದ ಚಿತ್ರ ಈಗ ಅದೇ ಹೆಸರಿಟ್ಟುಕೊಂಡು ನಿರ್ದೇಶಕ ಬಿ.ಎ.ಪುರುಷೋತ್ತಮ್, ಶಿವನ ಕಥೆಯನ್ನು ಹೊಸ ರೂಪದಲ್ಲಿ ಹೇಳಹೊರಟಿದ್ದಾರೆ. ಮಧುಕಾರ್ತಿಕ್ ಮತ್ತು ಪ್ರಜ್ವಲ್ ಈ ಚಿತ್ರವನ್ನು ಜಿ.ಆರ್. ಫಿಲಂಸ್ ಮೂಲಕ ನಿರ್ಮಿಸುತ್ತಿದ್ದಾರೆ. ನಿರ್ದೇಶಕ ಪುರುಷೋತ್ತಮ್ ಚಿತ್ರದ ಬಗ್ಗೆ ಮಾತನಾಡುತ್ತ ಶಿವಪುರಾಣದಲ್ಲಿ ಗಂಗೆ-ಗೌರಿಯ ಸಂಬಂಧ ಏನು? ಗಂಗೆ, ಯಾಕೆ ಶಿವನ ತಲೆಯ ಮೇಲೆ ನೆಲೆಯೂರಿದ್ದಾಳೆ.



## 'ರಂಗಸಮುದ್ರ'ದ ಟ್ರೈಲರ್ ರಾಘಣ್ಣ ಬಿಡುಗಡೆ

ಐದಾರು ವರ್ಷಗಳಿಂದ ಹಂಸಲೇಖ, ಸೂರಿ, ಸಿಂಪಲ್ ಸುನಿ, ಸುನಿಲ್ ಪುರಾಣಿಕ್ ಸೇರಿದಂತೆ ಹಲವರ ಜೊತೆ ಕೆಲಸ ಮಾಡಿ ಅನುಭವ ಪಡೆದ ರಾಜ್‌ಕುಮಾರ್ ಅಸ್ಕಿ ಅವರ ನಿರ್ದೇಶನದಲ್ಲಿ, ಹಿರಿಯ ನಟ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ನಟಿಸಿರುವ ಚಿತ್ರ "ರಂಗಸಮುದ್ರ", ಇತ್ತೀಚೆಗೆ ಈ ಚಿತ್ರದ ಟ್ರೈಲರನ್ನು ನಟ ರಾಘವೇಂದ್ರ ರಾಜಕುಮಾರ್ ಬಿಡುಗಡೆಗೊಳಿಸಿದರು.

ಹಾಸನ ಮೂಲದ ಹೊಯ್ಸಳ ಕೊಣನೂರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ, ನಾನು ಹಾಸನ ಜಿಲ್ಲೆಯ ಕೊಣನೂರಿನವನು. ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕರ್ತ. ರಾಜಕುಮಾರ್ ಅವರು ಹೇಳಿದ ಕಥೆ ಇಷ್ಟವಾಗಿ, ನಿರ್ಮಾಣಕ್ಕೆ ಮುಂದಾದೆ. ನಮ್ಮ ಸಿನಿಮಾನ ಮೊದಲು ನೋಡಿದವರು ಪುನೀತ್ ರಾಜಕುಮಾರ್, ಜಿಲ್ಲಾಧಿಕಾರಿಯ ಪಾತ್ರದಲ್ಲಿ ನಟಿಸುವುದಾಗಿ ಅವರು ಹೇಳಿದ್ದರು. ಆದರೆ ವಿಧಿಯಾಟ ಸಾಧ್ಯವಾಗಲಿಲ್ಲ ಎಂದರು. ನಂತರ ಮಾತನಾಡಿದ ನಿರ್ದೇಶಕ ರಾಜ್‌ಕುಮಾರ್ ಅಸ್ಕಿ 'ರಂಗಸಮುದ್ರ' ಹಳ್ಳಿಯೊಂದರ ಹೆಸರು. ಧರ್ಮ, ಅಧರ್ಮಗಳ ನಡುವಿನ ಸಂಘರ್ಷವನ್ನೂ 'ರಂಗಸಮುದ್ರ' ಎನ್ನಬಹುದು. ಈ ಸಂಘರ್ಷದ ಕಥೆಯಲ್ಲಿ ಕೊನೆಗೆ ಯಾವುದು ಗೆಲ್ಲುತ್ತೆ ಅಂತ ಚಿತ್ರ ಹೇಳುತ್ತದೆ. 90ರ ದಶಕದಲ್ಲಿ ನಡೆಯೋ ರೆಟ್ರೋಶೈಲಿಯ ಕಥಾಹಂದರ ಚಿತ್ರದಲ್ಲಿದೆ. ಈ ಕಥೆಯನ್ನು ನಿರ್ಮಾಪಕರ ಬಳಿ ಹೇಳಿದಾಗ ಅವರು, ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದರೆ ಚೆನ್ನಾಗಿರುತ್ತದೆ ಎಂದರು. ನಿರ್ದೇಶಕರು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು. ಜನಪದ ಸೊಗಡಿನ ಈ ಚಿತ್ರಕ್ಕೆ ಕರ್ನಾಟಕ ಹಾಗೂ ಮಹಾರಾಷ್ಟ್ರದ ಒಳ್ಳೊಳ್ಳೇ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆದಿದೆ. ಪುನೀತ್ ರಾಜಕುಮಾರ್ ಅವರು ಈ ಚಿತ್ರದಲ್ಲಿ ನಟಿಸಬೇಕಿತ್ತು, ಆದರೆ ಆಗಲಿಲ್ಲ, ಅವರ ಸಹೋದರ ರಾಘವೇಂದ್ರ ರಾಜಕುಮಾರ್ ಅವರು ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಮುಂದಿನ ಶುಕ್ರವಾರ ಚಿತ್ರ ಬಿಡುಗಡೆಯಾಗುತ್ತಿದೆ ಎಂದು ರಂಗಾಯಣ ರಘು ತಿಳಿಸಿದರು.

ಚಿತ್ರದಲ್ಲಿ ಐದು ಹಾಡುಗಳಿದ್ದು, ವಾಗೀಶ್ ಚನ್ನಗಿರಿ ಹಾಡುಗಳನ್ನು ಬರೆದಿದ್ದಾರೆ. ಕೈಲಾಶ್ ಖೇರ್, ವಿಜಯ ಪ್ರಸಾದ್, ಕೀರವಾಣಿ, ಸಂಚಿತ್ ಹೆಗಡೆ ಹಾಗೂ ನಾನು ಹಾಡಿದ್ದೇವೆ ಎಂದು ಹಾಡುಗಳ ಬಗ್ಗೆ ಸಂಗೀತ ನಿರ್ದೇಶಕ ದೇಸಿ ಮೋಹನ್ ಮಾಹಿತಿ ನೀಡಿದರು. ಗೀತರಚನೆಕಾರ ಹಾಗೂ ಚಿತ್ರದ ಉಸ್ತುವಾರಿ ಹೊತ್ತಿರುವ ವಾಗೀಶ್ ಚನ್ನಗಿರಿ, ನೃತ್ಯ ನಿರ್ದೇಶಕ ಧನು ಹಾಗೂ ಚಿತ್ರದಲ್ಲಿ ಅಭಿನಯಿಸಿರುವ ಅನೇಕ ಕಲಾವಿದರು ರಂಗಸಮುದ್ರದ ಬಗ್ಗೆ ಮಾತನಾಡಿದರು.



## ಸೂಪರ್ ಹೀರೋ 'ಹನುಮಾನ್' ಟ್ರೈಲರ್

ಪ್ರಶಾಂತ್ ವರ್ಮಾ ಅವರು ಆ್ಯಕ್ಷನ್‌ಕಟ್ ಹೇಳಿರುವ, ತೇಜಸಜ್ಜ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ಪ್ಯಾನ್ ಇಂಡಿಯಾ ಚಿತ್ರ ಹನುಮಾನ್ ಟ್ರೈಲರ್ ಇದೀಗ ಬಿಡುಗಡೆಯಾಗಿದೆ. ಪ್ರೈಮ್‌ಶೋ ಎಂಟರ್‌ಟೈನ್ಮೆಂಟ್ ಬ್ಯಾನರ್‌ಅಡಿ ನಿರ್ಮಾಣವಾದ ಪ್ಯಾನ್ ಇಂಡಿಯಾ ಸಿನಿಮಾ ಇದಾಗಿದೆ. ಈಗ ಟ್ರೈಲರ್ ಮೂಲಕ ಪ್ರೇಕ್ಷಕರೆದುರು ಸೂಪರ್ ಹೀರೋ 'ಹನುಮಾನ್' ದರ್ಶನ ಕೊಟ್ಟಿದ್ದಾರೆ.

ನಿರ್ದೇಶಕ ಪ್ರಶಾಂತ್ ವರ್ಮಾ ಭಾರತದ ಮೊದಲ ಸೂಪರ್‌ಹೀರೋ 'ಹನುಮಾನ್' ಬಗ್ಗೆ ಕಥೆ ಬರೆದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಚಿತ್ರದ ನಾಯಕನಾಗಿ ತೇಜಸಜ್ಜ, ನಾಯಕಿಯಾಗಿ ಅಮೃತಾ ಐಯ್ಯರ್ ಕಾಣಿಸಿಕೊಂಡಿದ್ದಾರೆ. ರಿಲೀಸಾಗಿರುವ ಟ್ರೈಲರ್ ಸಖತ್ ಪ್ರಾಮಿಸಿಂಗ್ ಆಗಿದ್ದು, ನಾಯಕ ತೇಜಸಜ್ಜ ಲುಕ್, ಚಿತ್ರದ ಮೇಕಿಂಗ್, ಕ್ಯಾಮೆರಾ ವರ್ಕ್, ಮ್ಯೂಸಿಕ್ ಎಲ್ಲವೂ ಗಮನ ಸೆಳೆಯುತ್ತಿದೆ.

ಯಥೋಧರ್ಮ ತತೋ ಹನುಮಾ... ಯಥೋಹನುಮಾ ತತೋ ಜಯ...(ಎಲ್ಲಿ ಸದಾಚಾರವಿದೆಯೋ ಅಲ್ಲಿ ಹನುಮಂತನು, ಮತ್ತು ಎಲ್ಲಿ ಹನುಮಂತ ಇದ್ದಾನೋ ಅಲ್ಲಿ ಜಯವಿದೆ)ಎಂಬ ಡೈಲಾಗ್ ಮೂಲಕ ಚಿತ್ರದಲ್ಲಿ ಹನುಮಾನ್ ಪ್ರಪಂಚವನ್ನು ಪರಿಚಯಿಸಲಾಗಿದೆ. ಅಂಜನಾದ್ರಿ ಬೆಟ್ಟ, ಹನುಮಾನ್ ಪ್ರತಿಮೆ ಈ ಟ್ರೈಲರ್‌ನ ಹೈಲೈಟ್‌ಗಳಲ್ಲೊಂದು.

ವರಲಕ್ಷ್ಮಿ ಶರತ್‌ಕುಮಾರ್, ವಿನಯ್ ರೈ, ರಾಜ್‌ದೀಪಕ್ ಶೆಟ್ಟಿ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು ಗೆಟಪ್ ಶ್ರೀನು, ಸತ್ಯ ಮುಂತಾದ ಕಲಾವಿದರ ಬಳಗ ಚಿತ್ರದಲ್ಲಿದೆ. ಯುವ ಸಂಗೀತ ನಿರ್ದೇಶಕರಾದ ಗೌರಹರಿ, ಅನುದೀಪ್‌ದೇವ್ ಮತ್ತು ಕೃಷ್ಣಸೌರಭ್ ಅವರ ಸಂಗೀತ, ದಶರಥಿ ಶಿವೇಂದ್ರ ಅವರ ಕ್ಯಾಮೆರಾ ಕೈಚಳಕ ಈ ಚಿತ್ರಕ್ಕಿದೆ. ತೆಲುಗು, ಕನ್ನಡ, ಮರಾಠಿ, ತಮಿಳು, ಮಲಯಾಳಂ, ಇಂಗ್ಲೀಷ್, ಸ್ಪ್ಯಾನೀಶ್, ಚೈನೀಸ್, ಜಪಾನೀಸ್ ಮತ್ತು ಕೊರಿಯನ್ ಭಾಷೆಯಲ್ಲಿ ಸಂಕ್ರಾಂತಿ ಹಬ್ಬದ ಕೊಡುಗೆಯಾಗಿ 'ಹನುಮಾನ್' ಚಿತ್ರವು ವಿಶ್ವಾದ್ಯಂತ ರಿಲೀಸಾಗಲಿದೆ.

## ಭಾವನೆಗಳ ಯಾನ 'ಮೇಘ'

ಮೋಡಗಳನ್ನು ನೋಡೋದೇ ಚೆಂದ... ಮಳೆ ಬಂದರೆ, ಮನದ ನೋವು ತೊಯ್ದಷ್ಟೇ ಸಂತಸ. ಆ ಮೋಡಗಳ ಮೇಲೊಂದು ಸಿನಿಮಾ ಸಿದ್ಧವಾಗಿದೆ. ಎಮೋಷನ್ಸ್ ತುಂಬಿರುವ ಎಲ್ಲರಿಗೂ ಕನೆಕ್ಟ್ ಆಗುವ ಸಿನಿಮಾ 'ಮೇಘ'. ಈ ಸಿನಿಮಾದಲ್ಲಿ 'ಕನ್ನಡತಿ' ಖ್ಯಾತಿಯ ಕಿರಣ್ ರಾಜ್ ನಾಯಕ ನಟರಾಗಿದ್ದಾರೆ. ಮನಸ್ಸಿನಲ್ಲಿ ಸಿನಿಮಾ ಇಂಡಸ್ಟ್ರಿಯಲ್ಲಿ ಕೆಲಸ ಮಾಡಬೇಕೆಂಬ ಆಸೆಯಿದ್ದರೂ ಸಾಫ್ಟ್‌ವೇರ್ ಕೆಲಸ ಮಾಡಿದವರು ಚರಣ್. ಕೋವಿಡ್ ಎಂಬುದು ಇವರನ್ನು ಮತ್ತೆ ಚಿತ್ರರಂಗದತ್ತ ಸೆಳೆಯುವಂತೆ ಮಾಡಿತ್ತು. ಅಲ್ಲಿಂದ ವಿ.ನಾಗೇಂದ್ರಪ್ರಸಾದ್ ಅವರ ಬಳಿ ಕೆಲಸ ಶುರು ಮಾಡಿದರು. ಬಳಿಕ ಸ್ವಂತ ಏನಾದರೂ ಮಾಡಬೇಕೆಂಬ ಹಠದಿಂದ ನಿರ್ದೇಶನಕ್ಕೆ ಇಳಿದ. ಅಂತೂ ಈಗ ಮೂಡಿರುವುದು 'ಮೇಘ'. ಮೊದಲ ಬಾರಿಗೆ ನಿರ್ದೇಶಕನ ಕ್ಯಾಪ್ ತೊಟ್ಟಿರುವ ಚರಣ್, ಸಾಕಷ್ಟು ಕಲಿತಿದ್ದಾರೆ. ಮೇಘ ಎಂದರೆ ಫೀಲಿಂಗ್ಸ್. ಮೋಡಗಳನ್ನು ಫೀಲಿಂಗ್ಸ್‌ಗೆ ಹೋಲಿಕೆ ಮಾಡಲಾಗಿದೆ. ಅದು ಒಂದು ಕಡೆ ನಿಲ್ಲುವುದಿಲ್ಲ, ಅದಕ್ಕೊಂದು ಆಕಾರವೂ ಇಲ್ಲ.ಅದನ್ನು ನಂಬಿದರೆ ಬರೀ ಗೊಂದಲ. ನಿಜವಾದ ಪ್ರೀತಿ ಅಂದರೆ ಏನು ಅಂತ ಅಪ್ಪ ಮಗನಿಗೆ ನಿರ್ದೇಶನ ಹೇಳುತ್ತಾ ಹೋಗುತ್ತಾರೆ. ಫ್ರೆಂಡ್‌ಶಿಪ್ ಆದ ಕೂಡಲೇ ಲವ್ ಆಗುವುದಿಲ್ಲ. ಈ ಸಿನಿಮಾ ತಂದೆ ಮಗನ ಬಾಂಧವ್ಯದ ಮೇಲೆ ಸಾಗುತ್ತದೆ ಎಂದು ತಮ್ಮ ನಿರ್ದೇಶನದ ಅನುಭವ ಬಿಚ್ಚಿಟ್ಟಿದ್ದಾರೆ.

ಕೃಷಿ ಪ್ರೊಡಕ್ಷನ್ಸ್ ಮೂಲಕ ಯತೀಶ್ ಹೆಚ್.ಆರ್. ಬಂಡವಾಳ ಹೂಡಿದ್ದಾರೆ. ಚರಣ್, ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ನಾಯಕನಾಗಿ ಕಿರಣ್‌ರಾಜ್, ನಾಯಕಿಯಾಗಿ ಕಾಜಲ್ ಕುಂದರ್ ಇನ್ನುಳಿದಂತೆ ರಾಜೇಶ್ ನಟರಂಗ, ಶೋಭರಾಜ್, ಸುಂದರ್, ತರಂಗ ವಿಶ್ವ, ಹನುಮಂತೇಗೌಡ, ನಾಗೇಂದ್ರ, ರಾಜಾಹುಲಿ ಗಿರೀಶ್, ನಾಗಮಂಗಲ ಜಯರಾಮ್, ಸಂಗೀತ, ಹಂಸ, ಸೌರಭ್ ಕುಲಕರ್ಣಿ ನಟಿಸಿದ್ದಾರೆ. ಗೌತಮ್ ನಾಯಕ್ ಸಿನಿಮಾಟೋಗ್ರಫಿ ಹಾಗೂ ಸಂಕಲನ, ಜೋಯೆಲ್ ಸಕಾರಿ ಅವರ ಸಂಗೀತ ನಿರ್ದೇಶನ ಈ ಸಿನೆಮಾಕ್ಕಿದೆ. ಚಿಕ್ಕಮಗಳೂರು, ಬೆಂಗಳೂರು, ಮೈಸೂರು, ತೀರ್ಥಹಳ್ಳಿ, ಮಲ್ಪೆ ಸೇರಿದಂತೆ ಹಲವೆಡೆ ಸುಂದರ ತಾಣಗಳಲ್ಲಿ ಶೂಟಿಂಗ್ ಆಗಿದೆ. ವಿ.ನಾಗೇಂದ್ರ ಪ್ರಸಾದ್ ಹಾಗೂ ಚರಣ್ ರವರ ಸಾಹಿತ್ಯ ಈ ಚಿತ್ರಕ್ಕಿದೆ. ಚಿತ್ರರಂಗದವರಿಂದ 'ಮೇಘ' ಚಿತ್ರದ ಟೈಟಲ್ ಟೀಸರ್‌ಗೆ ಈಗಾಗಲೇ ಉತ್ತಮ ಪ್ರತಿಕ್ರಿಯೆ ದೊರಕಿದೆ.



ನಿರ್ದೇಶಕ ಚರಣ್

## ಮೊಬೈಲ್ ಅಂಗಡಿ 'ಕಣ್ಣಾಮುಚ್ಚೆ' ಹುಡುಗನ ಪ್ರೇಮಕಥೆ...



ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗನ ಪ್ರೇಮಕಥೆ ಹೊಂದಿದ, ಲೋಕಲ್ ಲೋಕಿ ಅವರ ನಿರ್ದೇಶನದ ಕಣ್ಣಾಮುಚ್ಚೆ ಚಿತ್ರದ ಲಿರಿಕಲ್ ಸಾಂಗ್ ಇತ್ತೀಚೆಗೆ ಬಿಡುಗಡೆಯಾಯಿತು, ಕೃಷಿ ಸ್ಟುಡಿಯೋಸ್ ಮತ್ತು ಸಚಿತ್ ಫಿಲಂಸ್ ಹಾಗೂ ಶಿವ ಸಿನಿಮಾಸ್ ಬ್ಯಾನರ್ ಅಡಿ ವಿತರಕ ವೆಂಕಟ್‌ಗೌಡ ಅವರ ಶ್ರೀಮತಿ ಮೀನಾ ವೆಂಕಟ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಸಂದರ್ಭದಲ್ಲಿ ಸಂಗೀತ ನಿರ್ದೇಶಕ ರಾಜೇಶ್ ರಾಮನಾಥ್ ಮಾತನಾಡಿ 2017ರಿಂದ ನಾನು ಚಿತ್ರರಂಗದಿಂದ ದೂರ ಉಳಿದಿದ್ದೆ. ಆದರೆ ಈ ಚಿತ್ರತಂಡ ಬಂದು ನಾನೇ ಮ್ಯೂಸಿಕ್ ಮಾಡಬೇಕೆಂದು ಒತ್ತಾಯಿಸಿದ್ದರಿಂದ ಬಂದಿದ್ದೇನೆ. ಈ ಚಿತ್ರದಲ್ಲಿ ಸಚ್ಚಿನ್ ಎಂಬ ಗಾಯಕನನ್ನು ಪರಿಚಯಿಸಿದ್ದೇನೆ ಎಂದರು.

ನಿರ್ದೇಶಕ ಲೋಕಲ್ ಲೋಕಿ ಮಾತನಾಡುತ್ತ ಮಾಜರ್ ನಂತರ ಆ್ಯಕ್ಷನ್ ಕಟ್ ಹೇಳಿರುವ ಚಿತ್ರವಿದು, ಚಿತ್ರದ ಪ್ರತಿ ಹಾಡಿನಲ್ಲಿ ಒಂದೊಂದು ಕಥೆಯನ್ನು ಹೇಳಲಾಗಿದೆ. ನಾಯಕ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡೋ ಹುಡುಗ. ಆತನಿಗೆ ಪ್ರೀತಿ ಅಂದ್ರೇನು ಅಂತ ಗೊತ್ತಿರಲ್ಲ, ಅಂಥವನು ಒಮ್ಮೆ ಪ್ರೀತಿಯಲ್ಲಿ ಬೀಳುತ್ತಾನೆ. ಅಮಾಯಕ ಹುಡುಗಿಗೆ ಈತನನ್ನ ಕಂಡರೆ ಇಷ್ಟವಿಲ್ಲದಿದ್ದರೂ ಪ್ರೀತಿ ಹುಟ್ಟಿಕೊಳ್ಳುತ್ತದೆ. ಮುಂದೆ ಇವರಿಬ್ಬರೂ ದೂರವಾಗ್ತಾರೆ. ಕೊನೆಗೆ ನಾಯಕನಿಗೆ ತನ್ನ ಹುಡುಗಿ ಸಿಕ್ತಾಳಾ? ಈತನ ಪ್ರೀತಿಗೆ ಮತ್ತೆ ಜೀವ ಬರುತ್ತಾ ಎನ್ನುವುದೇ ಕಣ್ಣಾಮುಚ್ಚೆ ಚಿತ್ರದ ಕಥಾಹಂದರ. ಬೆಂಗಳೂರು, ರಾಮನಗರ, ಹೆಸರುಘಟ್ಟ ಸುತ್ತಮುತ್ತಲ ತಾಣಗಳಲ್ಲಿ 45 ದಿನ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ನಿರ್ಮಾಪಕ, ವಿತರಕ ವೆಂಕಟ್ ಗೌಡ ಮಾತನಾಡುತ್ತ ರಾಜೇಶ್ ರಾಮನಾಥ್ ಅವರು ನಮ್ಮ ಚಿತ್ರದ ಹಾಡುಗಳನ್ನು ಮಾಡಿಕೊಟ್ಟಿರುವುದು ಚಿತ್ರಕ್ಕೆ ಹೊಸಶಕ್ತಿ ತಂದುಕೊಟ್ಟಿದೆ. ಮಧ್ಯಮ ವರ್ಗದ ಜನರ ಜೀವನದ ಸನ್ನಿವೇಶಗಳು ಚಿತ್ರದಲ್ಲಿದ್ದರೂ, ಸಿನಿಮಾದ ದೃಶ್ಯಗಳು ಶ್ರೀಮಂತವಾಗಿವೆ. ಫೆಬ್ರವರಿಯಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ಹೇಳಿದರು. ರವಿಕೃಷ್ಣ, ತೇಜಸ್ವಿನಿ ಆನಂದಕುಮಾರ್, ಉಗ್ರಂ ರವಿ, ನಾಗೇಂದ್ರ ಅರಸ್, ಮಮತಾ, ಜಯಸೂರ್ಯ ಮುಂತಾದವರು ನಟಿಸಿರುವ ಈ ಚಿತ್ರಕ್ಕೆ ಜಗನ್‌ಬಾಬು ಅವರ ಛಾಯಾಗ್ರಹಣವಿದೆ.

## ಸಿನಿಪದಬಂಧ-507

| | | | | | | | | | | |
|---|---|---|---|---|---|---|---|---|---|---|
| 1 | | | | 2 | ■ | 3 | | | 4 | |
| | ■ | ■ | ■ | | ■ | | ■ | ■ | | ■ |
| 5 | | | 6 | ■ | ■ | ■ | 7 | | | |
| | ■ | ■ | | ■ | 8 | ■ | | ■ | | ■ |
| 9 | | ■ | | ■ | | ■ | | ■ | | ■ |
| | ■ | 10 | | | | | | | ■ | 11 |
| ■ | 12 | ■ | | ■ | | ■ | | ■ | 13 | |
| ■ | | ■ | | ■ | | ■ | | ■ | ■ | |
| 14 | | | | ■ | ■ | ■ | 15 | | | |
| ■ | | ■ | ■ | 16 | ■ | 17 | ■ | ■ | ■ | |
| 18 | | | | | ■ | 19 | | | | |

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

### ಎಡದಿಂದ ಬಲಕ್ಕೆ

1.ಸ್ವಾಭಿಮಾನದ ನಲ್ಲೆ ಮಂದಾರ ಮಾಲಾಳ "ಸಿಂಹ" 5

3.ಶಿಲ್ಪಕಲೆಯಲ್ಲಿ ಸಾಧನೆ ತೋರಿದ ಅಮರ ಶಿಲ್ಪಿ 5

5. "ಬಾ ನಲ್ಲೆ ಬಾ ನಲ್ಲೆ ಮಧುಚಂದ್ರಕೆ ಬಾ ನಲ್ಲೆ ಬಾ ನಲ್ಲೆ _ _ _ _ಕೆ.....", 4

7.ಕಿಶೋರ್ ಅಭಿನಯದ ಅಬ್ಬರದ ನಗು 4

9.ಉಪೇಂದ್ರ ಆಕ್ರಮಿಸಿಕೊಂಡ ಚಿತ್ರ 2

10. ರಮೇಶ್ ಅರವಿಂದ್ ಕಂಡ ಡ್ರೀಮ್ಸ್ 7

13." _ _ ನಿನ್ನೇಗೆ ನಾಳೆ ನಾಳೆಗೆ ಇಂದು ನಮ್ಮದೇ..... ", 2

14.ರಾಮ್ ಗೋಪಾಲ್ "ಹಠವಾದಿ" 4

15. ಬ್ರಹ್ಮ ವಿಷ್ಣುವಿನೊಂದಿಗೆ ಬಂದವನು 4

18.ಬಿ. ಜಯಶ್ರೀ ದೇವಿಯ ಮಹಿಷ ಜನ್ಮ ನೀಡಲು ನಂಬಲಾಸಾಧ್ಯ 5

19. ರವೀ, ಶಿವಣ್ಣ ಅಭಿನಯದಲ್ಲಿ ಬಿಲ್ಲು ಹಿಡಿದವನು 5





ವಿಜೇತರು: ಪಿ.ಸು.ಶಿವಶಂಕರ್ ದೊಡ್ಡಹಳ್ಳಿ, EWS-39, 5ನೇ ಕ್ರಾಸ್, ಗಂಗೋತ್ರಿ ಲೇಔಟ್, ಮೈಸೂರು



ಉಮ್ಮತ್ತೂರು ಇಂದುಶೇಖರ್

ಮೊ.9880820462

### ಸಿನಿ ಪದಬಂಧ 506ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ವಿ | ಷ್ಣು | ವ | ರ್ಧ | ನ್ | ■ | ಪ | ರ | ಶು | ರಾ | ಮ |
| ಪ್ಲ | ■ | ■ | ■ | ರ | ■ | ಲ್ಯ | ■ | ■ | ಜ | ■ |
| ವ | ಪ್ರ | ಮು | ನಿ | ■ | ■ | ■ | ಶಿ | ವ | ರಾ | ಜ್ |
| ವ | ■ | ■ | ಲು | ■ | ಅ | ■ | ವ | ■ | ಜೇಂ | ■ |
| ನಿ | ಜ | ■ | ಕ | ■ | ಣ್ಣ | ■ | ರಾ | ■ | ದ್ರ | ■ |
| ತೆ | ■ | ಅಂ | ದ | ದ | ಅ | ರ | ಮ | ನೆ | ■ | ಮುಂ |
| ■ | ಮೈ | ■ | ನ | ■ | ತ್ತಿ | ■ | ಕಾ | ■ | ನಾಂ | ದಿ |
| ■ | ಸೂ | ■ | ಕ್ಷ್ಮಿ | ■ | ಗೆ | ■ | ರಂ | ■ | ■ | ನ |
| ಕು | ರು | ಕ್ಷೇ | ತ್ರ | ■ | ■ | ■ | ತ | ಪ | ಸ್ವ | ನಿ |
| ■ | ಜಾ | ■ | ■ | ಭೀ | ■ | ಸ್ವಾ | ■ | ■ | ■ | ಲ್ಲಾ |
| ರ | ಣ | ವಿ | ಕ್ರ | ಮ | ■ | ತಿ | ರು | ಗು | ಬಾ | ಣ |

### ಮೇಲಿನಿಂದ ಕೆಳಕ್ಕೆ

1. ಸುದೀಪ್ ಕಲ್ಲಿನ ಕೋಟೆ ನಾಯಕನನ್ನು ನೆನಪಿಸಿದ್ದಾನೆ 6

2. ಶಿವರಾಜ್ ಕುಮಾರ್ ಕಾಲೇಜಿನ ಮುಖ್ಯಸ್ಥ 2

3. ಅರ್ಜುನ್ - ಶಾಂತಿಪ್ರಿಯಾಳ "ಪ್ರಯಾಣ" 2

4.ಗಿರೀಶ್ ಕಾಸರವಳ್ಳಿಯ ತಬರ 5

6. ಅನಂತ್ ನಾಗ್ ಅಭಿನಯದಲ್ಲಿ ಸಮುದ್ರ ನಿಶ್ಚಲಗೊಂಡಿದೆ 7

7. ಕುಮಾರ್ ಗೋವಿಂದ್ - ಸುಧಾರಾಣಿಯ ಮಿಲನ 7

8. ಕೆ. ಎಸ್. ಅಶೋಕ್ ನಿರ್ದೇಶನದ ಚಿತ್ರದಲ್ಲಿನ ನಾಯಕಿ ಖುಷಿಯ ಪಾತ್ರ 5

11.ಅನಂತ್ ನಾಗ್ ಜೊತೆ ಶಬಾನಾ ಅಜ್ಮಿ ನಟಿಸಿದ ಚಿತ್ರ 6


12. ಸೀತೆಯ ಪತಿಯ ಜೊತೆ ಮೈದುನನೂ ಇದ್ದಾನೆ 5

16.ಕಲಿಯುಗದಲ್ಲೂ ಕಾಣಿಸಿಕೊಂಡ ಜಾನಕಿ 2

17. ಕೋಳಿ, ಕೋತಿ ಅಡಿಬರಹ ಹೊಂದಿರುವ ಚಿತ್ರ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

## ನಂಜನಗೂಡು ಬಂದ್ ವೇಳೆ ಬೃಹತ್ ಪ್ರತಿಭಟನಾ ಮೆರವಣಿಗೆ...




ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಅಂಧಕಾಸುರನ ಸಂಹಾರ ಕಾರ್ಯಕ್ರಮದ ವೇಳೆ ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸಿ ದೇವರ ಉತ್ಸವ ಮೂರ್ತಿಗೆ ಎಂಜಲು ನೀರು ಎರಚಿ ಅಪಮಾನ ಮಾಡಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಗುರುವಾರ ಕರೆಯಲಾಗಿದ್ದ ನಂಜನಗೂಡು ಬಂದ್ ವೇಳೆ ಪ್ರತಿಭಟನ ಕಾರರು ಬೃಹತ್ ಮೆರವಣಿಗೆ ನಡೆಸಿದರು. ಮಾಜಿ ಶಾಸಕ ಬಿ.ಹರ್ಷವರ್ಧನ್ ಈ ವೇಳೆ ತಹಸೀಲ್ದಾರ್ ಶಿವಪ್ರಸಾದ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ವರದಿ: ಮುಖ ಪುಟ

# ಮಳೆಯಲ್ಲೂ ಜನರ ಕುಂದುಕೊರತೆ ಆಲಿಸಿದ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ



ಸುತ್ತೂರು, ಜ.4– ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಮುದ್ದೇಗೌಡನಹುಂಡಿ, ಕುಪ್ಪೇಗಾಲ ಸೇರಿದಂತೆ ಸುತ್ತ–ಮುತ್ತಲಿನ ಮುಂತಾದ ಗ್ರಾಮಗಳಲ್ಲಿ ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ಜಿಟಿ ಜಿಟಿ ಮಳೆಯಲ್ಲೂ ಸಾರ್ವಜನಿಕರ ಕುಂದುಕೊರತೆ ಆಲಿಸಿದರು.

ಬೆಳಗ್ಗೆಯಿಂದ ಮೋಡಕವಿದ ವಾತಾವರಣದೊಂದಿಗೆ ಜಿಟಿ ಜಿಟಿ ಮಳೆ ಸುರಿಯುತ್ತಿತ್ತು. ಈ ವೇಳೆ ಮುದ್ದೇಗೌಡನಹುಂಡಿ ಗ್ರಾಮಕ್ಕೆ ಆಗಮಿಸಿದ ಯತೀಂದ್ರ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಮನವಿ ಸ್ವೀಕರಿಸಿ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸಬೇಕೆಂದು ಸ್ಥಳದಲ್ಲೇ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. ಇನ್ನು ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಸದಸ್ಯ ಸಿದ್ದರಾಮನಹುಂಡಿ ಬಸವರಾಜು, ಜಿಪಂ ಮಾಜಿ ಸದಸ್ಯ ಕೆಂಪೀರಯ್ಯ, ರಾಮು, ತಾಪಂ ಮಾಜಿ ಅಧ್ಯಕ್ಷ ಪುಟ್ಟಣ್ಣ ತಾಪಂ ಮಾಜಿ ಸದಸ್ಯ ಮಹೇಂದ್ರ, ಗ್ರಾಪಂ ಅಧ್ಯಕ್ಷೆ ಪುಟ್ಟಮ್ಮ, ಉಪಾಧ್ಯಕ್ಷೆ ಶಿಲ್ಪ, ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ಡೈರಿ ಅಧ್ಯಕ್ಷ ಸಿದ್ದರಾಮು, ನಾಗರಾಜು, ಕುಮಾರ್, ವರಕೋಡು ಉಮೇಶ, ಹೊಸಹಳ್ಳಿ ಶೇಖರ್, ಮಾದೇವ ನಾಗರಾಜು, ಸುರೇಶ, ಮಂಜು, ನಂಜುಂಡ ಬಸವರಾಜು, ಶಿವಕುಮಾರ್, ಚೋರನಹಳ್ಳಿ ರಾಜು, ವರುಣಾ ದೇವಣ್ಣ, ನಾಡಕಚೇರಿಯ ಉಪ ತಹಶೀಲ್ದಾರ್ ಸೇರಿದಂತೆ ಗ್ರಾಮಸ್ಥರು, ಮುಖಂಡರುಗಳು ಹಾಜರಿದ್ದರು.

## ಹುಲಿ ದಾಳಿ ಗಾಯಾಳುಗೆ ಮಾಜಿ ಶಾಸಕ ಹರ್ಷವರ್ಧನ್ ಆರ್ಥಿಕ ನೆರವು



**ಮಲ್ಲುಂಡಿ:** ಹುಲಿ ದಾಳಿಯಿಂದ ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಮೀಪದ ಹಲ್ಲರೆ ಗ್ರಾಮದ ನಿವಾಸಿ ಶಿವಮಲ್ಲಮ್ಮ ಅವರನ್ನು ಮಾಜಿ ಶಾಸಕ ಹರ್ಷವರ್ಧನ್ ಭೇಟಿ ಮಾಡಿ ಧೈರ್ಯ ಹೇಳಿ ಆರ್ಥಿಕ ನೆರವು ನೀಡಿದರು.

ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿ ಹುಲಿ ಮತ್ತು ಚಿರತೆಯ ಹಾವಳಿ ಹೆಚ್ಚಾಗಿ ರೈತರ ಮೇಲೆ ದಾಳಿ ಮಾಡುತ್ತಿದ್ದರೂ ಸರ್ಕಾರ ಮೌನವಾಗಿದ್ದು, ಸರ್ಕಾರ ರೈತರ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿದರು.

ರೈತರು ತಮ್ಮ ಜಮೀನುಗಳಲ್ಲಿ ಮಳೆ ಇಲ್ಲದಿದ್ದರೂ ಬರಗಾಲದಲ್ಲಿ ಅಲ್ಪಸ್ವಲ್ಪ ಫಸಲುಗಳನ್ನು ಬೆಳೆದಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಹಾಡಹಗಲೇ ಹುಲಿ ರೈತರ ಮೇಲೆ ದಾಳಿ ಮಾಡುತ್ತಿವೆ. ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಇದ್ದರು.

# ವಿದ್ಯಾರ್ಥಿನಿಯರಿಗೆ ಶಾಲಾ ಮುಖ್ಯ ಶಿಕ್ಷಕನಿಂದ ಲೈಂಗಿಕ ಕಿರುಕುಳ ಆರೋಪ

### ಪೊಲೀಸ್ ಠಾಣೆ, ಬಿಇಒಗೆ ಪೋಷಕರ ದೂರು

**ನಂಜನಗೂಡು:** ತಾಲೂಕಿನ ದಾಸನೂರು ಪ್ರಾಥಮಿಕ ಶಾಲೆಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೋಷಕರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದ ದಾಸನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಭಾರ ಮುಖ್ಯಶಿಕ್ಷಕ ಪಿ.ಪ್ರಕಾಶ್ ವಿದ್ಯಾರ್ಥಿನಿಯರ ಮೈ ಕೈ ಮುಟ್ಟಿ ಅಸಭ್ಯವಾಗಿ ವರ್ತಿಸುತ್ತಿದ್ದಾರೆ ಎಂದು ಶಾಲಾ ವಿದ್ಯಾರ್ಥಿನಿಯರು ಪೋಷಕರಿಗೆ ತಿಳಿಸಿದ್ದಾರೆ ಪೋಷಕರು ಶಾಲೆಗೆ ಭೇಟಿ ನೀಡಿದಾಗ ಶಿಕ್ಷಕ ಪಿ.ಪ್ರಕಾಶ್ ಶಾಲೆಯಿಂದ ನಾಪತ್ತೆಯಾಗಿದ್ದಾನೆ.

ಈ ಕೂಡಲೇ ಕಾಮುಕ ಶಿಕ್ಷಕನ ಮೇಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕು ಎಂದು ಪೋಷಕರು ಕವಲಂದೆ ಠಾಣೆಗೆ ದೂರು ನೀಡಿದ್ದಾರೆ. ಜೊತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಸಹ ಕಾಮುಕ ಶಿಕ್ಷಕನನ್ನು ಕೆಲಸದಿಂದ ವಜಾಗೊಳಿಸುವಂತೆ ದೂರು ನೀಡಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಟಿ.ಶಿವಲಿಂಗಯ್ಯ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ವಿಷಯ ತಿಳಿದ ಬಳಿಕ ಶಾಲೆಗೆ ಭೇಟಿ ನೀಡಿ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರ ಸಭೆ ನಡೆಸಿ, ಇತರೆ ಶಿಕ್ಷಕರ ಬಳಿ ಮತ್ತು ಪೋಷಕರ ಬಳಿ ಮಾಹಿತಿ ಕಲೆಹಾಕಿದ್ದೇನೆ. ಶಿಕ್ಷಕನ ವಿರುದ್ಧ ಕ್ರಮವಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ವರದಿ ನೀಡುತ್ತೇನೆ ಎಂದು ತಿಳಿಸಿದರು. ಈ ಸಂಬಂಧ ಕೌಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ಕೊಳತ್ತೂರು ಹಾಲು ಉತ್ಪಾದಕರ ಸಂಘಕ್ಕೆ ಕುಮಾರ್ ಅಧ್ಯಕ್ಷ



ತಿ.ನರಸೀಪುರ, ಜ.4– ತಾಲೂಕಿನ ಕೊಳತ್ತೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎನ್.ಕುಮಾರ್, ಉಪಾಧ್ಯಕ್ಷರಾಗಿ ಕಾಳಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಗುರುವಾರ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಈ ಇಬ್ಬರನ್ನು ಹೊರತುಪಡಿಸಿ ಬೇರಾವುದೇ ನಾಮಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ವಿ.ಸರ್ವಮಂಗಳ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಂಘದ ನಿರ್ದೇಶಕರುಗಳಾದ ಕೃಷ್ಣ, ಮಹದೇವ, ಶಂಕರ, ರತ್ನಮ್ಮ ಸೋಮಣ್ಣ, ಕೆ.ಎಸ್. ಮಹದೇವ, ಪದ್ಮ, ನಿಂಗರಾಜು, ರತ್ನಮ್ಮ, ಬಿ.ಲೋಕೇಶ್, ತಿಮ್ಮರಾಯಿ ಗೌಡ ಚುನಾವಣಾ ಸಭೆಯಲ್ಲಿ ಹಾಜರಿದ್ದು ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಕೆ.ಎನ್.ಕುಮಾರ್ ಮಾತನಾಡಿ, ಕೊಳತ್ತೂರು ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಾದರಿ ಸಂಘವಾಗಿ ರೂಪಿಸಲು ಶ್ರಮಿಸಲಾಗುವುದು. ಈ ವೇಳೆ ಮುಖಂಡರುಗಳಾದ ಮರಿಸ್ವಾಮಿ, ರಾಜೇಂದ್ರ, ಕೆಂಪರಾಜು, ಮಾದಯ್ಯ, ನಂಜಯ್ಯ, ಅಪ್ಪು, ಕಿರಣ್, ಬೋಳಯ್ಯನ ನಾಗಣ್ಣ, ಅಂದಾನಿ,ನಾಗಣ್ಣ, ಕೆ.ಟಿ.ನಂಜುಂಡಸ್ವಾಮಿ, ಗ್ರಾಪಂ ಅಧ್ಯಕ್ಷ ರವಿ, ದಾಳಣ್ಣ, ಪುಟ್ಟಸ್ವಾಮಿ, ಅರುಣ, ಮಂಜು, ಸಂತೋಷ, ಅಂಗಡಿ ಸಿದ್ದರಾಜು,ಕಬಾಬ್ ಶಂಕರ, ಕೆಂಪಣ್ಣನ ಗಿರಿ, ದೊಡ್ಡೇ ಬಾಗಿಲು ಮಹದೇವಯ್ಯ, ಸಿಗೋಡಿಪುರ ಚಿಕ್ಕೂಸಣ್ಣ, ಡೈರಿ ಗುರುಮೂರ್ತಿ, ಸುಂದರ ನಾಯಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿದ್ದರಾಜು, ಹಾಲು ಪರೀಕ್ಷಕ ಎಸ್.ಧನರಾಜು, ಗುಮಾಸ್ತ ಕೆ.ಎನ್. ಗೋವಿಂದ, ಸಹಾಯಕ ಎಂ. ಚಂದನ್ ಮತ್ತಿತರರು ಉಪಸ್ಥಿತರಿದ್ದರು,

# ಜೇನುಕುರುಬ ಸಮುದಾಯದ ಸಮಗ್ರ ಅಭಿವೃದ್ಧಿ ಅನುಷ್ಠಾನಕ್ಕೆ ಸಮೀಕ್ಷೆ ಆರಂಭ



> ನಮ್ಮ ಹಾಡಿಗಳಲ್ಲಿ ಮೂಲಸೌಕರ್ಯಗಳ ಕೊರತೆ ಬಹಳಷ್ಟು ಇದೆ. ಸಂಬಂಧಪಟ್ಟ ಯಾವುದೇ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಆದಿವಾಸಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅಧಿಕಾರಿಗಳು ನಮ್ಮನ್ನು ನಂಬಿಸುವಂಥ ಮಾತುಗಳನ್ನು ಆಡಿ ಹೋಗುತ್ತಾರೆ. ನಮಗೆ ಸೌಲಭ್ಯ ಕೊಡಿಸುವ ಅಧಿಕಾರಿಗಳೇ ನಮ್ಮ ತಾಲೂಕಿನಲ್ಲಿ ಇಲ್ಲ. ಬರೀ ಮೋಸ ಮಾಡುವ ಅಧಿಕಾರಿಗಳೇ ಜಾಸ್ತಿ ಇದ್ದಾರೆ, ಬನ್ನಿ ನೇರವಾಗಿ ನಮ್ಮ ಮನೆ ಒಳಗಡೆ ಬನ್ನಿ ನಮ್ಮ ಸಮಸ್ಯೆಗಳನ್ನು ನೋಡಿ.
>
> –ಹಾಡಿಯ ಯುವತಿ ಪ್ರಶಾಂತಿ.

ಹೆಚ್.ಡಿ.ಕೋಟೆ, ಜ.4– ಪ್ರಧಾನ ಮಂತ್ರಿ ಜನ್ ಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ ಯೋಜನೆಯಡಿ ದುರ್ಬಲ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಕರ್ನಾಟಕದಲ್ಲಿ 153 ಹಾಡಿಗಳಲ್ಲಿ ಜೇನು ಕುರುಬ ಜನಾಂಗವನ್ನು ಸಮಗ್ರ ಅಭಿವೃದ್ಧಿ ಅನುಷ್ಠಾನಕ್ಕೆ ಸಮೀಕ್ಷೆ ನಡೆಸಬೇಕಾಗಿದೆ ಎಂದು ಸಮೀಕ್ಷೆಯ ಮೇಲುಸ್ತುವಾರಿ ಯೋಜನಾ ನಿರ್ದೇಶಕಿ ಶುಭ ತಿಳಿಸಿದರು.

ತಾಲೂಕಿನ ಕುಂಟೇರಿ ಹಾಡಿಗೆ ಭೇಟಿ ನೀಡಿ ಜೇನುಕುರುಬ ಹಾಡಿಗಳಿಗೆ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳ ನಿಯೋಜನೆ ಮಾಡಿದ್ದು, ಇಂದಿನಿಂದ ಪ್ರತಿ ಹಾಡಿಗಳಲ್ಲೂ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದೆ ಎಂದರು.

ಈ ಸಮೀಕ್ಷೆಯಿಂದ ಜೇನುಕುರುಬರ ವಾಸ್ತವ ಸ್ಥಿತಿಗತಿಗಳನ್ನು ವರದಿ ಮಾಡುವ ಉದ್ದೇಶವಾಗಿದ್ದು, ಮನೆ, ಶೌಚಾಲಯ, ವಿದ್ಯುತ್, ಕುಡಿಯುವ ನೀರು, ಗ್ಯಾಸ್, ಜಮೀನು, ಆಧಾರ್, ಜನನ ಪ್ರಮಾಣ ಪತ್ರ, ಜಾತಿ, ಆದಾಯ, ಆರೋಗ್ಯ ಚೀಟಿ, ನರೇಗಾ, ಮತ್ತಿತರ ಮೂಲಭೂತ ಸವಲತ್ತುಗಳು ಸಮಗ್ರವಾಗಿ ತಲುಪಿವೆಯೇ ಮತ್ತು ಎಷ್ಟರ ಮಟ್ಟಿಗೆ ತಲುಪಿವೆ ಎಂಬುದರ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ ಎಂದರು.

ಕುಂಟೇರಿ ಹಾಡಿಯ ಪರಿಸ್ಥಿತಿಯನ್ನು ನೋಡಿ ಬೇಸರ ವ್ಯಕ್ತಪಡಿಸಿ ಇಒ ಧರಣೇಶ್ ಅವರನ್ನ ದೂರವಾಣಿ ಮೂಲಕ ಸಂಪರ್ಕಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ಬಗೆಹರಿಸಲು ಸೂಚಿಸುವಂತೆ ತಿಳಿಸಿದರು. ಹಾಗೆ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವಂತೆ ಆದೇಶ ಮಾಡಿದರು. ಇದೇ ವೇಳೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ಪಿ.ಸುರೇಶ್. ಜೀವಿಕ ಉಮೇಶ್. ಬಿ.ನೂರಲಕುಪ್ಪೆ ಸಮೀಕ್ಷೆ ಅಧಿಕಾರಿಗಳಾದ ಡಾ.ಬಿ.ಎಸ್.ಶಂಕರ್. ಹೆಚ್.ಬಿ. ಶ್ರೀನಿವಾಸ, ಕಾಮರಾಜ್, ಸಂತೋಷ. ಮಹೇಶ್, ತೇಜುಗುರುಮಲ್ಲು ಹಾಜರಿದ್ದರು.

## ಚಿದರವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ, ಜ.4– ಚಿದರವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸತೀಶ್ ನಾಗೇಗೌಡ, ಉಪಾಧ್ಯಕ್ಷರಾಗಿ ಮಹದೇವೇಗೌಡ ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾ ವಿಶೇಷ ಸಭೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಸತೀಶ್ ನಾಗೇಗೌಡ ಹಾಗೂ ಮಹದೇವೇಗೌಡ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರಿಬ್ಬರ ಅವಿರೋಧ ಆಯ್ಕೆಯನ್ನು ಸಹಕಾರ ಸಂಘದ ಚುನಾವಣಾಧಿಕಾರಿ ಎಸ್.ಮಂಜು ಪ್ರಕಟಿಸಿದರು

ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರಾದ ಎಂ.ಪುಟ್ಟಸ್ವಾಮಿ, ಮಾದೇಗೌಡ, ಎಂ.ನಾಗೇಂದ್ರ ಸ್ವಾಮಿ, ನಂಜೇಗೌಡ, ಪುಟ್ಟರಾಜು,ಶಾಂತರಾಜು,ವೆಂಕಟೇಶ್, ಸುಂದ್ರಮ್ಮ, ಲಕ್ಷ್ಮಮ್ಮ ಹಾಗೂ ಶಿವಮ್ಮ ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಈ ವೇಳೆ ಮಾತನಾಡಿದ ಡೈರಿಯ ನೂತನ ಅಧ್ಯಕ್ಷ ಸತೀಶ್ ನಾಗೇಗೌಡ ಚಿದರವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಬೇಕೆಂಬ ಅಭಿಲಾಷೆ ನನ್ನದಾಗಿದೆ. ಸಂಘದ ನಿರ್ದೇಶಕರು ನನ್ನ ಆಶಯಕ್ಕೆ ಕೈ ಜೋಡಿಸಿ ಸರ್ಕಾರದಿಂದ ಡೈರಿಗೆ ದೊರಕಬಹುದಾದ ಎಲ್ಲ ಸವಲತ್ತುಗಳನ್ನು ತರಲು ನನ್ನೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

ನವೀನ್ ಕುಮಾರ್, ನವೀನ್, ಸಿದ್ದಪ್ಪ ಪುಟ್ಟಸ್ವಾಮಿಗೌಡ, ಕೆಂಪೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಚಂದ್ರಶೇಖರ, ಚುಂಚೇಗೌಡ, ನಾಗೇಂದ್ರಗೌಡ, ಸಿದ್ದರಾಜನಾಯಕ, ಉಮೇಶ್, ವಿಜಯಕುಮಾರ್, ಡೈರಿ ಕಾರ್ಯದರ್ಶಿ ರಾಮಲಿಂಗೇಗೌಡ, ಶಿವನಂಜು, ಶಿವನಾಗ, ರಂಗಸ್ವಾಮಿ, ಡೈರಿ ಕಾರ್ಯದರ್ಶಿ ರವಿ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

# ವಿದ್ಯೆಯೊಂದಿಗೆ ಮಕ್ಕಳಿಗೆ ಸಂಸ್ಕಾರ ಕಲಿಸುವುದು ಅಗತ್ಯ

### 'ಪ್ರಗತಿಯಾನ' ವಾರ್ಷಿಕೋತ್ಸವದಲ್ಲಿ ಪಡುವಲ ವಿರಕ್ತ ಮಠದ ಶ್ರೀಗಳ ಸಲಹೆ



**ಸರಗೂರು:** ಪ್ರಗತಿ ವಿದ್ಯಾ ಸಂಸ್ಥೆ ಮಕ್ಕಳ ಪ್ರಗತಿಗಾಗಿ ಉತ್ತಮ ಶಿಕ್ಷಣ ನೀಡುತ್ತಿದೆ ಎಂದು ತಿಳಿಸಿದ ಪಡುವಲ ವಿರಕ್ತಮಠದ ಮಹದೇವಸ್ವಾಮಿಗಳು, ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕಾರ ಕಲಿಸುವುದು ಅತ್ಯಂತ ಅಗತ್ಯ ಎಂದರು.

ಪಟ್ಟಣದ ಪ್ರಗತಿ ವಿದ್ಯಾ ಸಂಸ್ಥೆಯಲ್ಲಿ ನಡೆದ 'ಪ್ರಗತಿಯಾನ' 16ನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಭಾರತ ದೇಶದ ಸಂಸ್ಕೃತಿ ಬಹಳ ಶ್ರೇಷ್ಠವಾದುದು. ಅಂತಹ ಸಂಸ್ಕೃತಿಯ ನಾಡಿನಲ್ಲಿ ಜನಿಸಿರುವ ನಾವೇ ಭಾಗ್ಯವಂತರು. ಎಲ್ಲಿ ಜ್ಞಾನ ಇರುತ್ತದೆ ಅಲ್ಲಿ ಅಜ್ಞಾನಕ್ಕೆ ಅವಕಾಶವಿರುವುದಿಲ್ಲ ಹಾಗೆ ಜ್ಯೋತಿ ಎಲ್ಲಿರುತ್ತೋ ಹಾಗೆ ಕತ್ತಲೆಗೆ ಅವಕಾಶ ಇರುವುದಿಲ್ಲ. ಇವತ್ತಿನ ತಂತ್ರಜ್ಞಾನ ಯುಗದಲ್ಲಿ ಒಳ್ಳೆಯ ಸಂಸ್ಕಾರಯುತ ಶಿಕ್ಷಣವನ್ನು ಗಳಿಸಬೇಕಾಗಿದೆ. ಇದು ಬಹಳ ಅವಶ್ಯಕ. ಪೋಷಕರು ಕೂಡ ತಮ್ಮ ಮಕ್ಕಳನ್ನು ಕೇವಲ ಅಂಕಪಟ್ಟಿಗೆ ಸೀಮಿತ ಮಾಡದೆ ಒಳ್ಳೆಯ ಸಂಸ್ಕಾರವನ್ನು ಕಲಿಸುವಂತಹ ನಿಟ್ಟಿನಲ್ಲಿ ಆಲೋಚನೆ ಮಾಡಬೇಕಾದಂತದ್ದು ಬಹಳ ಅವಶ್ಯಕತೆ ಇದೆ ಎಂದು ತಿಳಿಸಿದರು.

ಪ್ರಗತಿ ವಿದ್ಯಾಸಂಸ್ಥೆ ಧರ್ಮದರ್ಶಿ ಬಿ.ರಾಜಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ ಒಂಬತ್ತು ವರ್ಷದಿಂದ ನಮ್ಮ ಶಾಲೆಗೆ ಎಸ್ಎಸ್ಎಲ್‌ಸಿಯಲ್ಲಿ ನೂರಕ್ಕೆ ನೂರು ಫಲಿತಾಂಶ ಬರುತ್ತಿದೆ. ಸುಸಜ್ಜಿತ ಶಾಲಾ ಕಟ್ಟಡ ನಿರ್ಮಾಣವಾಗುತ್ತಿದೆ, 2024–25ನೇ ಸಾಲಿಗೆ ಶಾಲಾ ಕಟ್ಟಡ ಲೋಕಾರ್ಪಣೆ ಮಾಡಲಾಗುತ್ತದೆ. ಗ್ರಂಥಾಲಯ, ಕಂಪ್ಯೂಟರ್, ಕ್ರೀಡೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

ಚಾಮರಾಜನಗರ ಸುವರ್ಣ ಗಂಗೋತ್ರಿ ವಿಶ್ವವಿದ್ಯಾಲಯ ಕುಲಪತಿಗಳಾದ ಎಂ.ಆರ್. ಗಂಗಾಧರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮೂರು ಬಾರಿ ಉತ್ತಮ ಶಾಲಾ ಪ್ರಶಸ್ತಿ ಪಡೆದು ಕೊಂಡಿರುವ ಶಾಲೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕೌಶಲ್ಯ ಆಧಾರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಸಲಹೆ ನೀಡಿದರು. ಶಾಲಾ ವಾರ್ಷಿಕೋತ್ಸವದ ಅಂಗವಾಗಿ ವಿದ್ಯಾರ್ಥಿಗಳು ಭಾರತೀಯ ಹಬ್ಬಗಳು, ಭಾರತೀಯ ಧರ್ಮದ ಬಗ್ಗೆ, ಸಮಾಜದಲ್ಲಿ ಬಾಲ್ಯವಿವಾಹ ತಡೆಗಟ್ಟುವ ಬಗ್ಗೆ ಜಾಗೃತಿ ಮೂಡಿಸುವ ನಾಟಕ ಪ್ರದರ್ಶಿಸಿದರು. ಹಳ್ಳಿಯ ಸೊಗಡು ಪ್ರತಿಬಿಂಬಿಸುವ ನೃತ್ಯ ಪ್ರದರ್ಶನ ಕೂಡ ಇತ್ತು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಸದಸ್ಯ ಚಲುವಕೃಷ್ಣ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಸಿ.ಆರ್.ಪಳನಿಸ್ವಾಮಿ, ಮುಖಂಡರಾದ ಡಿ.ಪಿ.ನಟರಾಜು, ಶಾಲಾ ಆಡಳಿತಾಧಿಕಾರಿ ಮುರುಳೀಧರ, ಮುಖ್ಯಶಿಕ್ಷಕ ಎಚ್.ಎಸ್.ಸತೀಶ್, ಮಂಜುಳಾ, ತುಂಬಸೋಗೆ ನಾಗಣ್ಣ, ಮಹದೇವ್, ಪಿಎಸ್ಐ ನಂದೀಶ್ ಕುಮಾರ್, ಇಂದಿರಾ ಉಮೇಶ್, ಸುರೇಶ್ ಕುಮಾರ್, ಭೀಮನಹಳ್ಳಿ ಮಹದೇವ್, ಈರನಾಯಕ, ಮಕ್ಕಳು ಸೇರಿದಂತೆ ಪೋಷಕರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಡೆವಿಲ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬ್ಯಾಡ್ ಮ್ಯಾನರ್ಸ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಸಲಾರ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕಾಟೇರ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕಾಟೇರ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಕಾಟೇರ (ಕ) | 4 ಪ್ರದರ್ಶನಗಳು |
| **ಸಂಗಂ** | |
| ಸಲಾರ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೈವಾ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಟೈಗರ್–3 (ಹಿಂ) | 4 ಪ್ರದರ್ಶನಗಳು |
| **ಪ್ರಭಾ** | |
| on line ಮದುವೆ off line ಶೋಭನ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಪ್ರೇಮ ಕಥ (ತೆ): ಬೆ.10.20ಕ್ಕೆ, ಮಾಥಿಮಾರನ್ (ತ): ಮ.1.05ಕ್ಕೆ, ಸಲಾರ್–1 (ತೆ): ಮ.3.40ಕ್ಕೆ, ಕಾಟೇರ (ಕ): ರಾ.7.05ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | ಅನಿಮಲ್ (ಹಿಂ): ಮ.12.05ಕ್ಕೆ, ಕಾಟೇರ (ಕ): ಮ.3.50ಕ್ಕೆ, ರಾ.10ಕ್ಕೆ, ಪ್ರೇಮ ಕಥ (ತೆ): ರಾ.7.15ಕ್ಕೆ. |
| ಸ್ಕ್ರೀನ್ 3 | ಒಂಟಿ ಬಂಟಿ ಲವ್ ಸ್ಟೋರಿ (ಕ): ಬೆ.10.20ಕ್ಕೆ, ಡಂಕಿ (ಹಿಂ): ಮ.1.20ಕ್ಕೆ, ರಾ.7.10ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಸಂ.4.30ಕ್ಕೆ, ಆಟಂ (ಮ): ರಾ.10.15ಕ್ಕೆ. |
| ಸ್ಕ್ರೀನ್ 4 | ಕಾಟೇರ (ಕ): ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಕಾಟೇರ (ಕ): ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | ಕಾಟೇರ (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 3 | ಸಲಾರ್–1 (ಕ): ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, ಸಲಾರ್ –1 (ಹಿಂ): ಮ.2.35ಕ್ಕೆ. |
| ಸ್ಕ್ರೀನ್ 4 | ಮೈಗ್ರೇಷನ್ (3ಡಿ)(ಇಂ): ಬೆ.10.30ಕ್ಕೆ, ರಾ.7.55ಕ್ಕೆ, ಡಂಕಿ (ಹಿಂ): ಮ.12.35ಕ್ಕೆ, ಸಂ.4.35ಕ್ಕೆ, ಸಲಾರ್–1 (ಹಿಂ): ರಾ.10ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಮೈಸೂರು ವಿವಿ ಸಿಂಡಿಕೇಟ್‌ಗೆ ಕ್ಯಾತನಹಳ್ಳಿ ನಾಗರಾಜು ನಾಮನಿರ್ದೇಶನ



ಹೆಚ್.ಡಿ.ಕೋಟೆ, ಜ.4– ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಕ್ಯಾತನಹಳ್ಳಿ ನಾಗರಾಜು ಅವರನ್ನು ಸರ್ಕಾರ ನಾಮನಿರ್ದೇಶನ ಮಾಡಿದೆ.

ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ನಿವಾಸಿ, ಕ್ಯಾತನಹಳ್ಳಿ ನಾಗರಾಜ್ ಅವರು ಕಳೆದ 20 ವರ್ಷಗಳಿಂದ ಎಲ್ಲಾ ಸಮುದಾಯದ ಧ್ವನಿಯಾಗಿ ಜನಪರ ಹೋರಾಟ ಮಾಡಿರುವುದನ್ನ ಗುರುತಿಸಿ ಶಾಸಕ ಅನಿಲ್ ಚಿಕ್ಕಮಾದು ಅವರ ಶಿಫಾರಸ್ಸು ಮೇರೆಗೆ ಸರ್ಕಾರ ಈ ನಾಮನಿರ್ದೇಶನ ಮಾಡಿದೆ

ಶಾಸಕ ಅನಿಲ್ ಚಿಕ್ಕಮಾದು, ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್‌ಗೌಡ, ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ರವಿ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ ಬೈಪಾಸ್ ಮಂಜು, ನಾಗನಹಳ್ಳಿ ಪ್ರದೀಪ, ಶಂಭುಲಿಂಗ ನಾಯಕ, ಪುರಸಭಾ ಸದಸ್ಯರುಗಳಾದ ಎಚ್.ಸಿ.ನರಸಿಂಹಮೂರ್ತಿ, ಪುಟ್ಟಬಸವ ನಾಯಕ, ರಾಜು ವಿಶ್ವಕರ್ಮ, ಡಿಸಿಸಿ ಸದಸ್ಯ ಪರಶಿವಮೂರ್ತಿ, ಕಾಂಗ್ರೆಸ್ ಘಟಕದ ಅಧ್ಯಕ್ಷ ಗಿರೀಶ್, ಗ್ರಾ.ಪಂ. ಉಪಾಧ್ಯಕ್ಷ ಪ್ರಸನ್ನ, ಗಣೇಶ್ ಆಚಾರ್ ಅವರುಗಳು ಕ್ಯಾತನಹಳ್ಳಿ ನಾಗರಾಜ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಕಂಪಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೋಟರಿ ಮಿಡ್ ಟೌನ್ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಗಣ್ಯರು ಉದ್ಘಾಟಿಸಿದರು. ಜಿಲ್ಲಾ ಗೌರ್ನರ್ ಕೇಶವ್, ಸಹಾಯಕ ಗೌರ್ನರ್ ಸತ್ಯನಾರಾಯಣ, ರೊ. ಅಧ್ಯಕ್ಷ ರಾಜೇಗೌಡ, ಹೆಗ್ಡೆ, ವಕೀಲ ಬಿ.ವಿ.ಜವರೇಗೌಡ, ಮುಖ್ಯ ಶಿಕ್ಷಕ ಕೃಷ್ಣಕುಮಾರ್ ಮತ್ತಿತರರು ಇದ್ದರು.

# ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ನಗರ, ಕುವೆಂಪುನಗರದ ನಿವಾಸಿ ದಿವಂಗತ. ಬಿ.ಸಿ.ಜೈನ್ ಅವರ ಮಗ ಶ್ರೀ ವೀರ್ ಕುಮಾರ್ ಜೈನ್ ರವರ ಸೂಚನೆ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. ನಮ್ಮ ಕಕ್ಷಿದಾರರಾದ ಶ್ರೀ ವೀರ್ ಕುಮಾರ್ ಜೈನ್ ರವರು ದಿನಾಂಕ: 28-09-2001 ರಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ಸಮರ್ಪಕ ಮತ್ತು ಮೌಲ್ಯಯುತ ಹಾಗೂ ಕಾನೂನುಬದ್ಧ ಕ್ರಯದ ಪ್ರಕ್ರಿಯೆ ಮೂಲಕ 17 ಎಕರೆ 23 ಗುಂಟೆಗಳ ಭೂಪ್ರದೇಶದ, ಜಮೀನಿನ ಸ್ಥಿರಾಸ್ತಿಯ ಸಂಪೂರ್ಣ ಮಾಲೀಕರಾಗಿದ್ದು, ಇದನ್ನು ಸ್ವಾಧೀನ ಪ್ರಕ್ರಿಯೆಯಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ [ಮುಡಾ] 15-09-2001 ರಂದು ಡಿ-ನೋಟಿಫೈ ಅಧಿಸೂಚನೆ ಮೂಲಕ ಕೈಬಿಟ್ಟ ನಂತರ ಖರೀದಿಸಿರುತ್ತಾರೆ. ಇದಲ್ಲದೆ ನಮ್ಮ ಕಕ್ಷಿದಾರರಾದ ಶ್ರೀ. ವೀರ್ ಕುಮಾರ್ ಜೈನ್ ಮತ್ತು ಎದುರುದಾರರಾದ ಮುಡಾ ನಡುವೆ ರಿಟ್ ಅರ್ಜಿಗಳು, ರಿಟ್ ಮೇಲ್ಮನವಿ, ಕರ್ನಾಟಕದ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಮರುಪರಿಶೀಲನಾ ಅರ್ಜಿ ಮತ್ತು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ ಸೇರಿದಂತೆ, ಇತರ ಬೆಳವಣಿಗೆಗಳು ಮತ್ತು ದಾವೆಗಳೂ ಬಾಕಿಯಿರುತ್ತದೆ. ಹೀಗಿರುವಾಗ ನಮ್ಮ ಮಾಲೀಕತ್ವದ ಸ್ಥಿರ ಸ್ವತ್ತು ಜಮೀನುಗಳಿಗೆ ಸಂಬಂಧಿಸಿದಂತೆ ಚಾಮುಂಡೇಶ್ವರಿ ನಗರ ಸರ್ವೋದಯ ಸಂಘವು ಮೈಸೂರಿನ ದಟ್ಟಗಳ್ಳಿಯಲ್ಲಿರುವ ಸರ್ವೆ ನಂ. 15/1-2, 27/1-2-3-4, 32,38/1-2, 40/1-2-3, 41/2, ಜಮೀನಿಗೆ ಸಂಬಂಧಿಸಿದಂತೆ ಈ ಭೂಪ್ರದೇಶದ ಸ್ಥಿರ ಆಸ್ತಿಗೆ ಸಂಬಂಧಿಸಿದಂತೆ, 31-12-2023 ರಂದು ಹೊರಡಿಸಿದ ಸಾರ್ವಜನಿಕ ಪ್ರಕಟಣೆ, ಸೂಚನೆಗೆ ಪ್ರತಿಕ್ರಿಯೆಯಾಗಿ ಈ ಪ್ರಕಟಣೆಯನ್ನು ಸಂಬಂಧಪಟ್ಟವರಿಗೆ ಎಚ್ಚರಿಕೆಯನ್ನು ನೀಡುವುದರ ಮೂಲಕ ನೀಡಲಾಗಿದೆ.
2. ಮೊದಲನೆಯದಾಗಿ, ಆಕ್ಷೇಪಾರ್ಹ ಪ್ರಕಟಣೆಯಲ್ಲಿ ಉಲ್ಲೇಖಿಸಲಾದ ಆಧಾರರಹಿತ ಮತ್ತು ತಪ್ಪಾದ ಉದ್ದೇಶಗಳೊಂದಿಗೆ ಮಾಡಿದ ಆರೋಪವನ್ನು ನಮ್ಮ ಕಕ್ಷಿದಾರರು ನಿರಾಕರಿಸುತ್ತಾರೆ. ಸಾರ್ವಜನಿಕ ಸೂಚನೆಯಲ್ಲಿ ಮಾಡಲಾದ ವಿವರಗಳು ಕೇವಲ ಕಾಲ್ಪನಿಕವಾಗಿದ್ದು, ಸ್ವಾಧೀನ ಪ್ರಕ್ರಿಯೆಯ ಅವಿರೋಧವಾಗಿ ನಡೆದಿದೆ ಮತ್ತು ಅದೇ ಅಂತಿಮತೆಯನ್ನು ಪಡೆದುಕೊಂಡಿದೆ ಎಂಬುದು ಸಂಪೂರ್ಣವಾಗಿ ಸುಳ್ಳಾಗಿದೆ. ನ್ಯಾಯಾಲಯದಲ್ಲಿ ಮರುಪರಿಶೀಲನಾ ಅರ್ಜಿ ವಿಚಾರಣೆಗೆ ಬಾಕಿಯಿರುವಾಗ ಇಂತಹ ತಪ್ಪು ಮಾಹಿತಿ ಇರುವ ಜಾಹೀರಾತು ಪ್ರಕಟಣೆಯು ನಮ್ಮ ಕಕ್ಷಿದಾರರ ಮಾಲೀಕತ್ವಕ್ಕೆ ಸೇರಿದ ಸ್ಥಿರಾಸ್ತಿ ಜಮೀನನ್ನು ಕಸಿದುಕೊಳ್ಳುವ ಉದ್ದೇಶದಿಂದ ಸೊಸೈಟಿ ರಚಿಸಿದ ತಂತ್ರವಾಗಿದೆ.
3. ಎರಡನೆಯದಾಗಿ ದಟ್ಟಗಳ್ಳಿಯ ಸರ್ವೆ ನಂ. 18/4, ಸರ್ವೆ ನಂ. 19/1-2, ಸರ್ವೆ ನಂ. 20/1-2-3 ಜಮೀನು ಸಾರ್ವಜನಿಕ ಸೂಚನೆಯಲ್ಲಿ ಉಲ್ಲೇಖಿಸಲಾದ 2014 ರ W.P-437 ರಲ್ಲಿನ ರಿಟ್ ಅರ್ಜಿಯಲ್ಲಿ ಗುರುತಿಸಲಾಗಿರುವುದಿಲ್ಲ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ [ಮುಡಾ] ಯಿಂದ ಸ್ವಾಧೀನ ಪ್ರಕ್ರಿಯೆಯ ಭಾಗವಾಗಿರಲಿಲ್ಲ. ಇದಲ್ಲದೆ ಸರ್ವೆ ನಂ. 15/1, ಸರ್ವೆ ನಂ.. 15/2, ಸರ್ವೆ ನಂ.15/3, ಮತ್ತು ಸರ್ವೆ ನಂ.40/1, ಸರ್ವೆ ನಂ.40/3 ಸೇರಿದಂತೆ 4 ಎಕರೆ 28 ಗುಂಟೆ ಅಳತೆಯ ಭೂಪ್ರದೇಶದ ಆಸ್ತಿಗೆ ಇದುವರೆಗೆ ಯಾವುದೇ ಪ್ರಾಧಿಕಾರದಿಂದ ಪ್ರಾಥಮಿಕ ಅಧಿಸೂಚನೆ ಕೂಡ ಹೊರಡಿಸಿಲ್ಲ.
4. ಸಂಬಂಧಪಟ್ಟ ಸೊಸೈಟಿಯು ತನ್ನ ಸದಸ್ಯರಿಂದ ಹೂಡಿಕೆ ಮಾಡಿಸಲು ನೀಡಿರುವ ಆಮಿಷವೇ ಮುಡಾದ ಈ ಮುಂದುವರೆದ ಪ್ರಯತ್ನವಾಗಿದೆ. ಸದಸ್ಯರಿಗೆ ತಪ್ಪು ಮಾಹಿತಿಯನ್ನು ನೀಡಿ ಮತ್ತು ಪ್ರಕಟಿಸುವ ದುಷ್ಕೃತ್ಯದ ಉದ್ದೇಶವನ್ನು ತಡೆಯುವ ಪ್ರಯತ್ನ ಇದಾಗಿದೆ. ಸೊಸೈಟಿ ಸದಸ್ಯರ ಈ ಮೋಸದ ಪ್ರಯತ್ನಕ್ಕೆ ಪ್ರತ್ಯುತ್ತರವಾಗಿದೆ ಈ ಸಾರ್ವಜನಿಕ ಪ್ರಕಟಣೆ. ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಮೇಲ್ಕಂಡಂತೆ ಸದಸ್ಯರು ನೀಡಿರುವ ಸುಳ್ಳು ಅಧಿಸೂಚನೆಯ ಉದ್ದೇಶಗಳನ್ನು ಬಹಿರಂಗಪಡಿಸುವುದಾಗಿದೆ ಮತ್ತು ಸಾರ್ವಜನಿಕ ಸೂಚನೆಯ ಮೂಲ ಉದ್ದೇಶವಾಗಿದೆ. ಸಾರ್ವಜನಿಕರು ಅಡ್ಡ ಪರಿಶೀಲನೆಗಾಗಿ ಗೌರವಾನ್ವಿತ ಕರ್ನಾಟಕ ಮತ್ತು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ಗಳಲ್ಲಿ ಸರಿಯಾದ ಮಾಹಿತಿ ಲಭ್ಯವಿದ್ದು, ಪರಿಶೀಲಿಸಬಹುದಾಗಿರುತ್ತದೆ.
5. ಜುಲೈ 11, 1997 ರಂದು ನೀಡಲಾದ ಸರ್ಕಾರದ ಆದೇಶದ ಪ್ರಕಾರ, ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ಸೆಕ್ಷನ್ 32ರ ಅಡಿಯಲ್ಲಿ ಲೇಔಟ್ ಅನ್ನು ಸಕ್ರಮಗೊಳಿಸಲು ಮುಡಾಗೆ ನಿರ್ದೇಶನ ನೀಡಿತು. ನಂತರ 07.01.1998 ರಂದು WP ಸಂ.23488-494/1997ರಲ್ಲಿ ಮತ್ತು 26.10.1998 ರಂದು WA 824-830/1998ರಲ್ಲಿ ಕರ್ನಾಟಕದ ಗೌರವಾನ್ವಿತ ಹೈಕೋರ್ಟಿನಿಂದ ಈ ಸರ್ಕಾರದ ಆದೇಶವನ್ನು ರದ್ದುಗೊಳಿಸಲಾಗಿದೆ, ಸರ್ಕಾರವು ಅಂತಹ ಆದೇಶ ಹೊರಡಿಸಲು ಯಾವುದೇ ಅಧಿಕಾರವನ್ನು ಹೊಂದಿಲ್ಲ ಎಂದು ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿದೆ. ಸರ್ಕಾರಿ ಆದೇಶಗಳು ಮತ್ತು ಈ ರದ್ದುಗೊಳಿಸುವ ಆದೇಶವು ಅಂತಿಮತೆಯನ್ನು ಪಡೆದುಕೊಂಡಿದೆ. ಅಲ್ಲದೆ MUDA ಸ್ವತಃ ದಿನಾಂಕ 25-10-2014 ರಂದು ಚಾಮುಂಡೇಶ್ವರಿ ನಗರದ ಸರ್ವೋದಯ ಸಂಘದವರಿಗೆ ಉದ್ದೇಶಿಸಿ ಕರ್ನಾಟಕ ಉಚ್ಚನ್ಯಾಯಾಲಯ ಈ ಆದೇಶ ನೀಡಿರುವುದಾಗಿ ದೃಢಪಡಿಸಿದ್ದಾರೆ.
6. ಮುಡಾ, ದಿನಾ0ಕ 11-07-1997, ಸಂಖ್ಯೆ 13(4) ರಂದು ನೀಡಲಾದ ಸರ್ಕಾರಿ ಆದೇಶವನ್ನು ಅನುಷ್ಠಾನಗೊಳಿಸಲು ದಿನಾಂಕ 21-03-2023 ರಂದು ನಿರ್ಣಯವನ್ನು ಅಂಗೀಕರಿಸಿದೆ. ಆದರೆ ಈ ಸರ್ಕಾರಿ ಆದೇಶವನ್ನು ಈಗಾಗಲೇ 07-01-1998 ರಂದು ರದ್ದುಗೊಳಿಸಲಾಗಿದೆ ಎಂಬ ಅಂಶವನ್ನು ಮಂಡಳಿಯ ನಿರ್ಣಾಯಕ ಸಭೆಯಲ್ಲಿ, MUDA ಅನುಕೂಲಕರವಾಗಿ ನಿರ್ಲಕ್ಷಿಸಿದೆ ಮತ್ತು ಉದ್ದೇಶಪೂರ್ವಕವಾಗಿ ಮರೆಮಾಚಿದೆ.
7. ಮುಡಾ, ಕೆಲವು ವ್ಯಕ್ತಿಗಳ ಪರವಾಗಿ ಅನಿಯಂತ್ರಿತ ಮತ್ತು ಕಾನೂನುಬಾಹಿರ ರೀತಿಯಲ್ಲಿ ಮಾರಾಟದ ಕರಾರು ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಮತ್ತು ನೋಂದಣಿಗೆ ಕ್ರಮಗಳನ್ನು ಕೈಗೊಳ್ಳಲು ಪ್ರಾರಂಭಿಸಿದೆ. ಇದು ನಮ್ಮ ಕಕ್ಷಿದಾರ ಶ್ರೀ ವೀರ್ ಕುಮಾರ್ ಜೈನ್ ರವರಿಗೆ ಒಪ್ಪಿಗೆಯಿಲ್ಲ. ಮುಡಾ ಕೇವಲ ಶೀರ್ಷಿಕೆ ಪತ್ರಗಳು ಎಂಬ ಅಮಾನ್ಯ ದಾಖಲೆಗಳನ್ನು ಹೊರತುಪಡಿಸಿ ಮಾಲೀಕತ್ವವನ್ನು ತಿಳಿಸಲು ಅಥವಾ ಹಾಕಲು ಯಾವುದೇ ದಾಖಲೆಗಳನ್ನ ಹೊಂದಿಲ್ಲ. ಸ್ವಾಧೀನದಲ್ಲಿರುವ ಅಥವಾ ಸ್ವಾಧೀನವನ್ನು ಪಡೆದುಕೊಳ್ಳುವ ಯಾವುದೇ ಪ್ರಯತ್ನಗಳು ನಡೆದರು ಅದು ಅತಿಕ್ರಮಣವಾಗಿರುತ್ತದೆ. ಮುಡಾ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ದೂರು ಪ್ರಗತಿಯಲ್ಲಿದೆ.
8. ದಿನಾಂಕ:21-03-2023 ರಂದು ಮತ್ತು 11-07-1997 ರಂದು ಮುಡಾ ತೆಗೆದುಕೊಂಡ ನಿರ್ಣಯದ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಗೌರವಾನ್ವಿತ ಉಚ್ಚನ್ಯಾಯಾಲಯವು ದಿನಾಂಕ: 28-12-2023 ರಂದು ಮಧ್ಯಂತರ ತಡೆಯಾಜ್ಞೆ ಆದೇಶ ನೀಡುವ ಮೂಲಕ 13(4) ರ ಸರ್ಕಾರದ ಆದೇಶವನ್ನು ರದ್ದುಗೊಳಿಸಲಾಗಿದೆ.
9. ಚಾಮುಂಡೇಶ್ವರಿ ನಗರ ಸರ್ವೋದಯ ಸಂಘ ಮತ್ತು ಅದರ ಸದಸ್ಯರು ಹಾಗೂ ಕರ್ನಾಟಕ ಸರ್ಕಾರ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಡಬ್ಲ್ಯುಪಿಯಿಂದ ಉದ್ಭವಿಸಿದ ಈ ಕೆಳಕಂಡ ಪ್ರಕರಣಗಳಲ್ಲಿ ಸೋತಿದ್ದಾರೆ. 17-09-1998 ರಂದು ಸಂ. 10621-10629/1998, ಮತ್ತು 19-6-2001 ರಂದು ರಿಟ್ ಅಪೀಲ್ ಸಂಖ್ಯೆ 6125/1998, 24-06-2010 ರಂದು ಇಂಪ್ಲೀಡಿಂಗ್ ಅಪ್ಲಿಕೇಶನ್‌ಗಳು, 13-09-2010, ಡಬ್ಲ್ಯೂ. 11-10-2010 ರಂದು 2010 ರ ಸಂ. 32714, 11-02-2011 ರಂದು 2011 ರ WA No 788, 29-07-2011 ರಂದು SLP 19354-19431/2011, MUDA ಆದೇಶ ಡಿಟಿ. 25-10-2014, 26-09-2014 ರಂದು WP ಸಂಖ್ಯೆ 27351-476/2014, 06.12.2016 ರಂದು ಸಂ. 51523-662/2015, 28-06 ರಂದು 32/2017 ರಂದು ಮರುಪರಿಶೀಲನಾ ಅರ್ಜಿ ಸಂಖ್ಯೆ 32/2017, WA 201-06- 27-02-2023 ರಂದು 2017 ರ 5681-5812.
10. ಚಾಮುಂಡೇಶ್ವರಿ ನಗರ ಸರ್ವೋದಯ ಸಂಘವು ಈ ಮೇಲ್ಕಂಡ ಎಲ್ಲಾ ಪ್ರಯತ್ನಗಳಲ್ಲಿ ವಿಫಲವಾದ ನಂತರ, ಮುಡಾ ಅತ್ಯಂತ ಭ್ರಷ್ಟ ಮತ್ತು ಅವಹೇಳನಕಾರಿ ರೀತಿಯಲ್ಲಿ ದಿನಾಂಕ 21-03-2023 ರಂದು, ಈ ಹಿಂದೆ ದಿನಾಂಕ 11-07-1997 ರಂದು ನೀಡಲಾದ ಸಂಖ್ಯೆ 13(4)ಯ ರದ್ದುಗೊಳಿಸಿದ ಸರ್ಕಾರದ ಆದೇಶವನ್ನು ಜಾರಿಗೊಳಿಸಲು ನಿರ್ಣಯವನ್ನು ಅಂಗೀಕರಿಸಿದೆ. ದಿನಾಂಕ 21-03-2023 ರಂದು ತೆಗೆದು ಕೊಂಡ ಈ ನಿರ್ಣಯವೂ ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ. ಇದು ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ದಿನಾಂಕ 11-07-1997 ರಂದು ನೀಡಿದ ಸರ್ಕಾರದ ಆದೇಶ ಅಸ್ತಿತ್ವದಲ್ಲಿಲ್ಲ. MUDAದ ನಿರ್ಣಯವಾದ ದಿನಾಂಕ 21-03-2023ರ LIA ಸಂಖ್ಯೆ 13(4) ಸರ್ಕಾರಿ ಆದೇಶಕ್ಕೆ ಈಗ ದಿನಾಂಕ 28-12-2023 ರಂದು 2023 ರ WP 29219 ರಲ್ಲಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ.
11. ನಮ್ಮ ಕಕ್ಷಿದಾರರಾದ ಶ್ರೀ ವೀರ್ ಕುಮಾರ್ ಜೈನ್ ಅವರು ನ್ಯಾಯಾಲಯವು ರದ್ದುಗೊಳಿಸಿದ ಸರ್ಕಾರದ ಆದೇಶವನ್ನು ಮುಡಾದಿಂದ ಅಕ್ರಮವಾಗಿ ಜಾರಿಗೊಳಿಸುವುದನ್ನು ಮತ್ತು ಇಂತಹ ದುಷ್ಕೃತ್ಯಗಳನ್ನು ತಡೆಹಿಡಿಯುವುದಕ್ಕಾಗಿಯೂ, ಈ ಪ್ರಕರಣದಲ್ಲಿ ಮೋಸದಿಂದ ತೊಡಗಿಸಿಕೊಂಡಿರುವ ಎಲ್ಲರ ವಿರುದ್ಧ ಎಲ್ಲ ರೀತಿಯ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಮುಡಾ ಮತ್ತು ಯಾವುದೇ ಶಾಸನಬದ್ಧ ಸಂಸ್ಥೆ ಇಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದನ್ನು ಸಂಬಂಧಪಟ್ಟ ಸೂಕ್ತ ನ್ಯಾಯಾಲಯದಲ್ಲಿ ಸೂಕ್ತ ದಾವೆಗಳನ್ನು ಹೂಡುವುದರ ಮೂಲಕ ಮುಗ್ದ,ಅಮಾಯಕ ಸಾರ್ವಜನಿಕರಿಗೆ ಆಗುವ ಮೋಸ, ವಂಚನೆಯಂತಹ ಅನಾನುಕೂಲಗಳನ್ನು ತಡೆಯುವ ಉದ್ದೇಶದಿಂದ ಈ ಸಾರ್ವಜನಿಕ ಹಿತಾಸಕ್ತಿ ಪ್ರಕಟಣೆ ಹೊರಡಿಸಿರುತ್ತಾರೆ.

ಸ್ಥಳ: ಮೈಸೂರು
ದಿನಾಂಕ: 03-01-2024

ಸಹಿ/- **ಶ್ರೀ. ಮಹಾದೇವ ದೇಶಕ್,** (ವಕೀಲರು) ದೇಶಕ್ ಕಾನೂನು ಕಛೇರಿ, 479, ಅಭಿಮಾನ್ ಕಾಂಪ್ಲೆಕ್ಸ್, 2ನೇ ಮಹಡಿ, ಸಿದ್ಧಾರ್ಥ ಲೇಔಟ್, ಮೈಸೂರು - 570011 Ph: 99450 01234; ಇಮೇಲ್: deshakassociates@gmail.com

